ಜನಶಕ್ತಿ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail: js.weekly@yahoo.com

ಸಂಪುಟ 7 ಸಂಚಿಕೆ 42

ಅಕ್ಟೋಬರ್ 20, 2013 ಪುಟ 16 ರೂ. 10/-






ವ್ಯಕ್ತಿಗಳ - ಪಕ್ಷಗಳ ಪರ್ಯಾಯವಲ್ಲ, ದೇಶಕ್ಕೆ ಬೇಕಾಗಿರುವುದು .... ಧೋರಣೆಗಳ ಪರ್ಯಾಯ




ಭೂ ಚಳುವಳಿಯ ನಾಯಕ ಜಿ.ವಿ. ಅಶ್ವತ್ಥರೆಡ್ಡಿ - ಲಾಲ್‌ಸಲಾಂ



ಮೊದಲು ಶೌಚಾಲಯವಂತೆ! ಮಂದಿರ ಕಟ್ಟುವುದೇಕಂತೆ?



ಯುವಜನರ ಚೈತನ್ಯದ ಚಿಲುಮೆ "ಭಗತ್‌ಸಿಂಗ್"



ಕೇರಳ ಸೋಲಾರ್ ಹಗರಣ

ಮುಖ್ಯಮಂತ್ರಿ ಕೇರಳದ ಸೋಲಾರ್ ಹಗರಣದ ವಿರುದ್ಧ ಜನಾಂದೋಲನ ದಿನೇ ದಿನೇ ತೀವ್ರಗೊಳ್ಳುತ್ತಿದೆ. ಈ ಜನಾಕ್ರೋಶವನ್ನು ಹತ್ತಿಕ್ಕಲು ಹಾಗೂ ಪಟ್ಟವನ್ನು ಉಳಿಸಿಕೊಳ್ಳಲು ಉಮ್ಮನ್ ಚಾಂಡಿ ಎಲ್ಲ ಪ್ರಯತ್ನ ನಡೆಸಿದ್ದಾರೆ.

ಪೊಲೀಸ್ ಅಧಿಕಾರಿಗಳನ್ನೂ ಬಳಸಿಕೊಂಡಿರುವ ಚಾಂಡಿ, ಕೇರಳದ ಇತಿಹಾಸಲ್ಲೇ ಅತ್ಯಂತ ಕರಾಳವಾದ ಘಟನೆಗೆ ಕಾರಣರಾಗಿದ್ದು, ಪ್ರತಿಭಟನಾಕಾರರ ಮೇಲೆ ಗಧಾಪ್ರಹಾರ ನಡೆಸಿದ್ದಾರೆ. ಕೆಲ ದಿನಗಳ ಹಿಂದೆ ತಿರುವನಂತಪುರದಲ್ಲಿ ಡಿವೈಎಫ್ ಐ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಕಾರ್ಯಕರ್ತ ಹಾಗೂ ಸ್ಥಳೀಯ ಸಿಪಿಎಂ ಶಾಖಾ ಕಾರ್ಯದರ್ಶಿ ಜಯಪ್ರಸಾದ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಶಾಂತಿಯುತ ಪ್ರತಿಭಟನೆ ನಡೆಯುತ್ತಿದ್ದರೂ ಎಸ್ ಐ ವಿಜಯದಾಸ್, ಜಯಪ್ರಸಾದ್ ಮೇಲೆ ಗಂಭೀರ ಹಲ್ಲೆ ನಡೆಸಿದ್ದು, ಮರ್ಮಾಂಗಕ್ಕೆ ಬಲವಾದ ಏಟು ಕೊಟ್ಟಿದ್ದಾರೆ. ಕೂಡಲೇ ಜಯಪ್ರಸಾದ್ ರನ್ನು ಆಸ್ಪತ್ರೆಗೆ ಸೇರಿಸಲಾಗಿದ್ದು, ಅವರ ಪರಿಸ್ಥಿತಿ ಚಿಂತಾಜನಕವಾಗಿದೆ.

ಇದೇ ವೇಳೆ, ರಾಜ್ಯಾದ್ಯಂತ ಮುಖ್ಯಮಂತ್ರಿ ಕಾರ್ಯಕ್ರಮಗಳಿಗೆ ಸಿಪಿಎಂ ಮತ್ತು ಎಡಪಕ್ಷಗಳ ಕಾರ್ಯಕರ್ತರು ಕಪ್ಪು ಬಾವುಟ, ಪ್ರತಿಭಟನೆಗಳ ಮೂಲಕ ಸ್ವಾಗತ ಕೋರುತ್ತಿದ್ದಾರೆ.

ಸಿಪಿಎಂ ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಮತ್ತು ಪ್ರತಿಪಕ್ಷ ನಾಯಕ ವಿ.ಎಸ್. ಅಚ್ಚುತಾನಂದನ್



ತಪ್ಪಿತಸ್ಥ ಪೊಲೀಸ್ ಅಧಿಕಾರಿಯನ್ನು ಅಮಾನತುಗೊಳಿಸಿ ಘಟನೆಯ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ಇದೇ ವೇಳೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವೂ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಜಸ್ಟಿಸ್ ಕೆ.ಜಿ. ಬಾಲಕೃಷ್ಣನ್ ನೇತೃತ್ವದ ಆಯೋಗ ಈ ಬರ್ಬರ ಕೃತ್ಯದ ಬಗ್ಗೆ ತನಿಖೆ ನಡೆಸುವ ಭರವಸೆ ನೀಡಿದೆ.

ಕೇರಳದ ಸಿ.ಎಂ. ಉಮ್ಮನ್ ಚಾಂಡಿ ಪದೇ ಪದೇ ನಾನು ಯಾವುದೇ ರೀತಿಯ ತನಿಖೆಗೆ ಸಿದ್ಧ ಎಂದು ಹೇಳುತ್ತಾ ಸೋಲಾರ್ ಹಗರಣದ ಬಗೆಗೆ ನ್ಯಾಯಾಂಗ ತನಿಖೆಗೆ ನಿರಾಕರಿಸುತ್ತಿದ್ದಾರೆ. ಎಲ್‌ಡಿಎಫ್‌ನ ಐತಿಹಾಸಿಕ ಸೆಕ್ರೆಟಾರಿಯಟ್ ಮುತ್ತಿಗೆ ಹೋರಾಟ ನಡೆಯುವಾಗ ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡವರು ಈಗ ಮುಖ್ಯಮಂತ್ರಿಯ ಕಚೇರಿ ನ್ಯಾಯಾಂಗ ತನಿಖೆಯ ವ್ಯಾಪ್ತಿಗೆ ಬರುವುದಿಲ್ಲ ಎಂಬ ರಾಗ ಹಾಡುತ್ತಿದ್ದಾರೆ. ಆದರೆ ಕೇರಳದ ಜನಚಳುವಳಿ ಸುಮ್ಮನೆ ಬಿಡುವುದೇ ?

ಕೇರಳದ ಸೋಲಾರ್ ಹಗರಣ ಆಡಳಿತಾರೂಢ ಕಾಂಗ್ರೆಸ್ ಮತ್ತು ಸಿಎಂ ಉಮ್ಮನ್ ಚಾಂಡಿಗೆ ಉರುಳಾಗಿ ಪರಿಣಮಿಸಿದೆ. ದಿನದಿಂದ ದಿನಕ್ಕೆ ಈ ಪ್ರಕರಣದಲ್ಲಿ ಸಿ.ಎಂ. ಕಚೇರಿ ಭಾಗಿಯಾಗಿರುವ ಬಗ್ಗೆ ಸುದ್ದಿಗಳು ಬರುತ್ತಿರುವುದು ಉಮ್ಮನ್ ಚಾಂಡಿಯ ತಲೆಕೆಡಿಸಿದೆ.

ನ್ಯಾಯಾಂಗ ತನಿಖೆ ವ್ಯಾಪ್ತಿಯಿಂದ ನುಣುಚಿಕೊಂಡು ಬಚಾವಾಗುವ ಬಗ್ಗೆ ಮುಖ್ಯಮಂತ್ರಿ ನೀಡಿದ ಹೇಳಿಕೆ ಮತ್ತಷ್ಟು ಚರ್ಚೆಗೆ ಗ್ರಾಸವಾಗಿದೆ. ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಪ್ರತಿಪಕ್ಷ ಎಲ್‌ಡಿಎಫ್ ವಿಧಾನಸಭೆ ಮುಂದೆ ಧರಣಿ ನಡೆಸಿತ್ತು. ಪ್ರತಿಭಟನೆಗೆ ಮಣಿದಿದ್ದ ರಾಜ್ಯ ಸರ್ಕಾರ ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡಿತ್ತು. ಇದೀಗ ರಾಗ ಬದಲಿಸಿದ ಚಾಂಡಿ ತನ್ನ ಕಚೇರಿ ಅಂದ–ರೆ ಮುಖ್ಯಮಂತ್ರಿಯ ಕಚೇರಿ ನ್ಯಾಯಾಂಗ ತನಿಖೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದ್ದಾರೆ. ಸಿಎಂ ಕಚೇರಿ ನೇರವಾಗಿ ಈ ಹಗರಣದಲ್ಲಿ ಪಾಲ್ಗೊಂಡಿರುವ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳು ದೊರಕಿದ್ದರೂ ಚಾಂಡಿ ಇಂತಹ ಹೇಳಿಕೆ ನೀಡಿರುವುದು ಖಂಡನೀಯವಾಗಿದೆ. ಆದರೆ, ಹಾಸ್ಯಾಸ್ಪದ ಎಂದರೆ ಸಿಎಂ ಪ್ರಕಾರ– 'ಸಿಎಂ ಕಚೇರಿ ಈ ಹಗರಣದಲ್ಲಿ ಭಾಗಿಯಾಗಿರುವ ಬಗ್ಗೆ ಸೂಕ್ತ ದಾಖಲೆಗಳು ಸಿಕ್ಕಿಲ್ಲ' !!. ಅವರು ಇದೇ ಉಸಿರಲ್ಲಿ ನಾನು ಯಾವುದೇ ರೀತಿಯ ತನಿಖೆಗೆ ಸಿದ್ಧ ಎಂದು ಹೇಳುತ್ತಾರೆ. ಇದೇ ಪತ್ರಿಕಾಗೋಷ್ಠಿಯಲ್ಲಿ ನ್ಯಾಯಾಂಗ ತನಿಖೆಯ ವ್ಯಾಪ್ತಿ ಮತ್ತು ಷರತ್ತುಗಳ ಬಗ್ಗೆ ಪ್ರತಿಪಕ್ಷದ ಜೊತೆ ಚರ್ಚಿಸಿ ನಿರ್ಧರಿಸಿರುವುದಾಗಿ ಹೇಳಿದ್ದಾರೆ. ಹಾಗಾದರೆ ಸಿಎಂ ಕಚೇರಿಯನ್ನು ತನಿಖೆಯ ವ್ಯಾಪ್ತಿಯಿಂದ ಹೊರಗಿಡುವ ಏಕಪಕ್ಷೀಯ ನಿರ್ಧಾರ ಯಾಕೆ?

ಸಿಎಂ ಉಮ್ಮನ್ ಚಾಂಡಿ ಸ್ವತಃ ಹಗರಣದ ಪ್ರಮುಖ ಆರೋಪಿಯಾಗಿರುವ ಸರಿತಾ ನಾಯರ್ ಜೊತೆ ನಿಕಟ ಸಂಪರ್ಕ ಹೊಂದಿದ್ದರು ಎಂಬ ಬಗ್ಗೆ ಸಾಕ್ಷ್ಯಗಳು ದೊರೆತಿವೆ. ಆಕೆ ಸಿಎಂ ಕಚೇರಿ ಜೊತೆ ನಿಕಟ ನಂಟು ಹೊಂದಿರುವುದು ಹಾಗೂ ಸೋಲಾರ್ ಹಗರಣದ ಗ್ರಾಹಕರಿಗೆ ಸಿಎಂ



ಮತ್ತು ಅವರ ಕಚೇರಿಯಿಂದಲೇ ಸಂಪರ್ಕ ಮತ್ತು ಸಂಬಂಧ ಇರುವುದು ದಾಖಲಾಗಿದೆ.

ಉಮ್ಮನ್ ಚಾಂಡಿ ವೈಯಕ್ತಿಕವಾಗಿ ಮೊಬೈಲ್ ಬಳಸಿಲ್ಲ. ಆದರೆ, ತಮ್ಮ ಸಿಬ್ಬಂದಿಯ ಮೊಬೈಲ್ ಬಳಸುತ್ತಿದ್ದರು. ಹಾಗಾಗಿ ಯಾರಾದರೂ ಸರಿತಾ ನಾಯರ್ ಜೊತೆ ಸಿಎಂ ದೂರವಾಣಿ ಸಂಪರ್ಕ ಇಟ್ಟಿದ್ದರು ಎಂದು ಹೇಳಲಾಗುವುದಿಲ್ಲ. ಯಾಕೆಂದರೆ ಪ್ರಮುಖ ಆರೋಪಿ ಸರಿತಾ ನಾಯರ್‌ಳ ಬಹುತೇಕ ಎಲ್ಲ ಕರೆಗ[ಳು] ಉಮ್ಮನ್ ಚಾಂಡಿಯ ಸಮೀಪವರ್ತಿ ಸಿಬ್ಬಂದಿಗಳ ಜೊತೆ ಸಂಪರ್ಕ ಸಾಧಿಸಿತ್ತು. ಸಿಎಂ ಅವರ ನೆರಳಿನಂತೆ ಓಡಾಡುತ್ತಿ[ದ್ದ] ಟೆನ್ನೀ ಜೊಪ್ಪನ್ ಈಗ ಈ ಹಗರಣದ[ಲ್ಲಿ] ಭಾಗಿಯಾಗಿರುವ ಆರೋಪ ಹೊತ್ತು ಕಂ[ಬಿ] ಎಣಿಸುತ್ತಿದ್ದಾರೆ.

ಇನ್ನು ಸಿಎಂ ಭದ್ರತಾ ಸಿಬ್ಬಂ[ದಿ] ಸಲೀಮ್ ರಾಜಾ ಅಮಾನತಾಗಿದ್ದರೆ, ಜಿಕ[ು] ಜಾಕೊಬ್ ಅವರನ್ನು ಸಿಎಂ ಸೇವೆಯಿಂದ ಬಿಡುಗಡೆ ಮಾಡಲಾಗಿದೆ. ದೆಹಲಿಯಲ್ಲಿರುವ ಸಿಎಂ ಅನಧಿಕೃತ ಆಪ್ತ ಕಾರ್ಯದರ್ಶಿ ಥಾಮಸ್ ಕುರುವಿಲ್ಲ ತಪ್ಪೊಪ್ಪಿಗೆ ನೀಡಿದ್ದು ಸಿಎಂ ಜೊತೆ ಸರಿತಾ ನಾಯರ್‌ಗೆ ನಿಕಟ ಸಂಪರ್ಕ ಇತ್ತು ಎಂದು ಹೇಳಿದ್ದಾನೆ. ಅಲ್ಲದೆ ದೂರವಾಣಿ ಕರೆಗಳ ವಿವರವನ್ನೂ ನೀಡಿದ್ದಾನೆ. ಇದೆಲ್ಲವೂ ಏನನ್ನು ಸೂಚಿಸುತ್ತದೆ. ಯಾಕಾಗಿ ಸಿಎಂ ತನ್ನ ಕಚೇರಿಯನ್ನು ತನಿಖೆಯ ವ್ಯಾಪ್ತಿಯಿಂದ ಹೊರಗಿಟ್ಟಿದ್ದಾರೆ ಎಂಬುದನ್ನು ಕೇರಳದ ಪ್ರತಿಪಕ್ಷ, ಜನತೆ ಮತ್ತು ಮಾಧ್ಯಮಗಳು ಪ್ರಶ್ನಿಸುತ್ತಿವೆ. ಒಟ್ಟಿನಲ್ಲಿ ಈ ವಿವಾದದಿಂದ ಹೊರಬರಲು ಮತ್ತು ತಮ್ಮ ತಲೆದಂಡವನ್ನು ತಪ್ಪಿಸಲು ಸಿಎಂ ಉಮ್ಮನ್ ಚಾಂಡಿ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ.

ನ್ಯಾಯಾಂಗ ತನಿಖೆಯ ಭರವಸೆಯ ಮೇರೆಗೆ ಪ್ರತಿಪಕ್ಷ ಎಲ್‌ಡಿಎಫ್ ವಿಧಾನಸಭೆಯ ಮುಂದೆ ನಡೆಸುತ್ತಿದ್ದ ಪ್ರತಿಭಟನೆಯನ್ನು ಕೈಬಿಟ್ಟಿದ್ದವು. ಇದೀಗ ಇನ್ನೊಂದು ಸುತ್ತಿನ ಹೋರಾಟಕ್ಕೆ ವೇದಿಕೆ ಸಜ್ಜಾಗಿದೆ. ಹಗರಣದಲ್ಲಿ ಭಾಗಿಯಾಗಿರುವ ಸಿಎಂ ಉಮ್ಮನ್ ಚಾಂಡಿ ವಿರುದ್ಧವೂ ತನಿಖೆ ನಡೆಯಬೇಕಿದೆ. ಅವರ ಎಲ್ಲ ದೂರವಾಣಿ ಕರೆಗಳ ವಿವರ ಪಡೆದು ಈ ಹಗರಣದ ನಿಜವಾದ ಆರೋಪಿಗಳನ್ನು ಶಿಕ್ಷಿಸಬೇಕಾಗಿದೆ.

ಕೇರಳದ ಆರೆಸ್ಸೆಸ್ – ಎಬಿವಿಪಿ ಕೊಲೆಗಡಕರನ್ನು ಖಂಡಿಸಿ.

ಒಂದು ತಿಂಗಳ ಹಿಂದೆ ಕೇರಳದಲ್ಲಿ ಆರೆಸ್ಸೆಸ್–ಎಬಿವಿಪಿ ಗುಂಡಾಗಳಿಂದ ತೀವ್ರ ಹಲ್ಲೆಗೊಳಗಾಗಿದ್ದ ವಿದ್ಯಾರ್ಥಿ ಸಂಗಾತಿ ಸಜಿನ್ ಶಾಹುಲ್ ಅಕ್ಟೋಬರ್ 1 ರಂದು ನಿಧನರಾಗಿದ್ದಾರೆ. ಅವರಿಗೆ ಕೇವಲ 18 ವರ್ಷ ವಯಸ್ಸಾಗಿತ್ತು.

ಸಂಗಾತಿ ಸಜಿನ್ ತಿರುವಂತಪುರದ ಸರ್ಕಾರಿ ಐಟಿಐ ವಿದ್ಯಾರ್ಥಿಯಾಗಿದ್ದರು. ಕೋಮುವಾದಿ–ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆದದ್ದು ಅಗಸ್ಟ್ 29 ರಂದು. ಆರೆಸ್ಸೆಸ್–ಎಬಿವಿಪಿ ಗುಂಡಾಗಳು ಇವರ ಸಂಸ್ಥೆಯ ಮೇಲೆ ದಾಳಿಮಾಡಿ ಎಸ್‌ಎಫ್‌ಐ ಕಾರ್ಯಕರ್ತರ ಮೇಲೆ ಬಾಂಬುಗಳನ್ನು ಎಸೆದರು. ಸಂಗಾತಿ ಸಜಿನ್ ಅವರ ತಲೆಗೆ ಗಂಭೀರ ಸ್ವರೂಪದ ಗಾಯವಾಗಿತ್ತು. ಕಳೆದ ಒಂದು ತಿಂಗಳಿಂದ ಅವರು ವೆಂಟಿಲೇಟರ್ ಮೇಲೆ ಇದ್ದರು.

ಕಾಲೇಜ್ ಕ್ಯಾಂಪಸ್‌ಗಳಲ್ಲಿ ಸಂಘ ಪರಿವಾರದ ಗುಂಡಾಗಳ ದಾಳಿ ಹೊಸದೇನಲ್ಲ. ಒಂದೇ ವರ್ಷದ ಹಿಂದೆ, ಹಿಮಾಚಲ ಪ್ರದೇಶದಲ್ಲಿ ಒಬ್ಬ ವಿದ್ಯಾರ್ಥಿನಿಗೆ ಕಿರುಕುಳ ಕೊಡುತ್ತಿರುವುದನ್ನು ತಡೆಯಲು ಹೋದ ಎಸ್.ಎಫ್.ಐ. ಕಾರ್ಯಕರ್ತ ಸಂಗಾತಿ ರೋಹಿತ್‌ನನ್ನು ಎಬಿವಿಪಿ ಗುಂಡಾಗಳು ಬರ್ಬರವಾಗಿ ಕೊಲೆಮಾಡಿದ್ದವು.

ಕೇರಳದಲ್ಲಿ, ಕೋಮುವಾದದ ವಿರುದ್ಧ ಎಸ್‌ಎಫ್‌ಐ ರಾಜಿ ಇಲ್ಲದ ಹೋರಾಟ ನಡೆಸುತ್ತಾ ಬಂದಿರುವುದರಿಂದ ಎಸ್‌ಎಫ್‌ಐ ಕಾರ್ಯಕರ್ತರು ಕೇಸರಿ ಭಯೋತ್ಪಾದಕರ ದಾಳಿಯ ಪ್ರಧಾನ ಟಾರ್ಗೆಟ್ ಆಗಿರುತ್ತಾರೆ. ಎಸ್‌ಎಫ್‌ಐ ನ ಸಾವಿರಾರು ಕಾರ್ಯಕರ್ತರು ದೇಶದ ವಿವಿಧ ಭಾಗಗಳಲ್ಲಿ ಇಂತಹ ದಾಳಿಗಳನ್ನು ಧೈರ್ಯದಿಂದ ಎದುರಿಸಿದ್ದಾರೆ. ಸಂಗಾತಿ ಸಜಿನ್ ಮತ್ತು ಸಂಗಾತಿ ರೋಹಿತ್‌ನಂತೆ ಹಲವರು ತಮ್ಮ ಪ್ರಾಣವನ್ನೇ ಬಲಿದಾನ ಮಾಡಿ ಹುತಾತ್ಮರಾಗಿದ್ದಾರೆ. ಈ ಯುವ ಹುತಾತ್ಮರಿಗೆ ಕೆಂಪು ನಮನಗಳನ್ನು ಸಲ್ಲಿಸೋಣ.

ಎಸ್‌ಎಫ್‌ಐ ಕರ್ನಾಟಕ ರಾಜ್ಯ ಸಮಿತಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ರಸಂಪಾದಕೀಯ

ವಿಧವೆಯರು ಅಮಂಗಲೆಯರಲ್ಲ

ರಳದ ಖ್ಯಾತ ಸಮಾಜ ಸುಧಾರಕ ಶ್ರೀ ನಾರಾಯಣ ಗುರು, ಸುಮಾರು ಒಂದು ನೂರು ವರ್ಷಗಳ ದೆ. ಮಂಗಳೂರಿನ ಕುದ್ರೋಳಿಯಲ್ಲಿ ಸ್ಥಾಪಿಸಿದ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ಇತ್ತೀಚೆಗೆ ರು ವಿಧವೆಯರಿಗೆ ಅರ್ಚಕ ವೃತ್ತಿಯನ್ನು ಕಲ್ಪಿಸಿರುವುದು ಅತ್ಯಂತ ಶ್ಲಾಘನೀಯವಾದ ವಿಚಾರ. ಆರ್ಯ ಮಾಜದ ದಯಾನಂದ ಸರಸ್ವತಿ, ಬ್ರಹ್ಮ ಸಮಾಜದ ರಾಜರಾಮ್ ಮೋಹನ್‌ರಾಯ್ ಮೊದಲಾದವರಂತೆ ರಳದ ನಾರಾಯಣ ಗುರು ಹಿಂದೂ ಸಮಾಜವನ್ನು ಕಂದಾಚಾರಗಳಿಂದ ಹಾಗೂ ಪುರೋಹಿತಶಾಹಿ ತದಿಂದ ಬಿಡುಗಡೆಗೊಳಿಸಲು ಶ್ರಮಿಸಿದವರು. ಅಸ್ಪೃಶ್ಯತೆಯ ವಿರುದ್ಧ ಧ್ವನಿ ಎತ್ತಿದ ಅವರು ಮನುಷ್ಯರೆಲ್ಲರೂ ದೇ ಜಾತಿಗೆ ಸೇರಿದವರು ಎಂದು ಪ್ರತಿಪಾದಿಸಿದ್ದರು. ಕೇರಳದಲ್ಲಿ ಮೇಲ್ಜಾತಿಗಳ ಕೈಯಲ್ಲಿದ್ದ ಪೂಜೆಯ ನ್ನು ಕಿತ್ತುಕೊಂಡ ಅವರು ಸ್ವತಃ ದೇವಸ್ಥಾನಗಳನ್ನು ಸ್ಥಾಪನೆ ಮಾಡಿ ಕೆಳಜಾತಿಗಳಿಗೆ ಸೇರಿದವರಿಗೆ ರ್ಚಕರಾಗುವ ಅವಕಾಶವನ್ನು ಒದಗಿಸಿದ್ದರು.

ಕರ್ನಾಟಕದಲ್ಲಿ ಶ್ರೀ ನಾರಾಯಣ ಗುರು ಸಂದೇಶವನ್ನು ಅನುಷ್ಠಾನಕ್ಕೆ ತರಲು ಮಾಡಲಾದ ಈ ಯತ್ನ ಸ್ವಾಗತಾರ್ಹವೇ ಆಗಿದೆ. ಕರ್ನಾಟಕದಲ್ಲಿ 12ನೇ ಶತಮಾನದಲ್ಲೇ ವಚನಕಾರರು, ಬಸವಾದಿ ಣರು ಮಹಿಳೆಯರ ಪೂಜೆಯ ಹಕ್ಕನ್ನು ಬಲವಾಗಿ ಪ್ರತಿಪಾದಿಸಿದ್ದರು ಮಾತ್ರವಲ್ಲ ಪುರುಷ ಮತ್ತು ಹಿಳೆಯ ಸಮಾನತೆಯನ್ನು ತರ್ಕಬದ್ಧವಾಗಿ ಸಾರಿದ್ದರು. ಆದರೂ ಕೂಡ ನಮ್ಮ ಸಮಾಜದಲ್ಲಿ ಇಂದಿಗೂ ಹಿಳೆಯನ್ನು ಕೀಳಾಗಿ ಕಾಣುವ ಪ್ರವೃತ್ತಿ ಕಡಿಮೆಯಾಗಿಲ್ಲ. ತಿಂಗಳಿಗೊಮ್ಮೆ ಮುಟ್ಟಾಗುವ ನೈಸರ್ಗಿಕ ್ರಿಯೆಯಿಂದ ಮಹಿಳೆ ಮೈಲಿಗೆಯಾಗುತ್ತಾಳೆ ಎಂಬ ಕಲ್ಪನೆ ವಿದ್ಯಾವಂತರ ಎಷ್ಟೋ ಕುಟುಂಬಗಳಲ್ಲಿ ಸಹ ಗಲೂ ಜೀವಂತವಾಗಿದೆ. ಪತಿ ಇರುವವರೆಗೆ ಮಾತ್ರ ಮಹಿಳೆ ಸುಮಂಗಲೆ, ಪತಿ ಸತ್ತ ಮೇಲೆ ಅವಳು ಮಂಗಲೆ ಎಂಬ ಪುರುಷ ಪ್ರಧಾನ ಮನೋಭಾವ ಈಗಲೂ ಆಚರಣೆಯಲ್ಲಿದೆ. ಪುರುಷರು ಏನು ದರು ಮಾಡಬಹುದು ಎಂಬ ಈ ಮನೋಭಾವವೇ ಇಂದು ಮಹಿಳೆಯರ ಮೇಲೆ ಹೆಚ್ಚುತ್ತಿರುವ ್ಯಾಚಾರ ದೌರ್ಜನ್ಯಗಳಿಗೆ ಕಾರಣವಾಗಿದೆ. ಇಂತಹ ಸನ್ನಿವೇಶದಲ್ಲಿ ಕುದ್ರೋಳಿ ದೇವಸ್ಥಾನದಲ್ಲಿ ಇಬ್ಬರು ಧವೆಯರಿಗೆ ಅರ್ಚನೆಯ ಅವಕಾಶ ಕಲ್ಪಿಸಿರುವುದು ಒಂದು ದಿಟ್ಟ ಹೆಜ್ಜೆ. ಬೌದ್ಧಿಕವಾಗಿ ಹಿಂದುಳಿದ ಹಿಳೆಯರಲ್ಲಿ ಸ್ವಾಭಿಮಾನದ ಸಣ್ಣ ಕಿಡಿಯನ್ನದು ಹಚ್ಚಬಹುದು.

ಮುಗ್ಧ ಹಿಂದುಗಳನ್ನು ಅಮಾನವೀಯ ಮನುವಾದದ ಹಿಡಿತದಿಂದ ಹೊರತರುವ ಈ ಪ್ರಯತ್ನದ ರ್ತಿ ಕಾಂಗ್ರೆಸ್ ನಾಯಕ ಬಿ. ಜನಾರ್ದನ ಪೂಜಾರಿ ಅವರಿಗೆ ಸಲ್ಲುತ್ತದೆ. ಶ್ರೀ ನಾರಾಯಣ ಗುರು ರ್ಮಾಣ ಮಾಡಿದ್ದ ಈ ದೇಗುಲವನ್ನು 1987 ರಲ್ಲಿ ಜೀರ್ಣೋದ್ಧಾರಗೊಳಿಸಿದ್ದು ಜನಾರ್ದನ ಪೂಜಾರಿ ವರೇ. ನವೀಕರಣಗೊಳಿಸಲಾದ ದೇವಸ್ಥಾನವನ್ನು ಆಗ ಪ್ರಧಾನಿಯಾಗಿದ್ದ ರಾಜೀವಗಾಂಧಿ ಕೈಯಲ್ಲಿ ದ್ಘಾಟಿಸಿದ್ದರು. ಮುಂದೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಆರೋಗ್ಯಕ್ಕಾಗಿ ಪೂಜಾರಿಯವರು ರುಳು ಸೇವೆ ಮಾಡಿದ್ದು ಇದೇ ದೇವಸ್ಥಾನದಲ್ಲಿ.

'ದೇವಸ್ಥಾನ ರಾಜಕಾರಣ'ದ ತಂತ್ರಗಾರಿಕೆಯಿಂದ ಜನಾರ್ಧನ ಪೂಜಾರಿಯವರಿಗೆ ರಾಜಕೀಯ ಲಾಭ ಾತ್ರ ದೊರೆಯಲಿಲ್ಲ. ಮಹಿಳೆಯರಿಂದ ದೇವಸ್ಥಾನದ ರಥ ಎಳೆಸಿದ್ದು, ವಿಧವೆಯರಿಗೆ ಕುಂಕುಮ–ಬಳೆ ಟ್ಟು ಹೂ ಮುಡಿದುಕೊಳ್ಳಲು ಪ್ರೇರೇಪಿಸಿದ್ದು ಪ್ರಗತಿಪರ ಕ್ರಮಗಳೇ ಆಗಿದ್ದರೂ ಪೂಜಾರಿಯವರನ್ನು ಬ್ಬ ಪ್ರಗತಿಪರ ರಾಜಕಾರಣಿ ಎಂದು ಪ್ರಗತಿಪರರು ಯಾರೂ ಅವರನ್ನು ಗೌರವಿಸಲು ಸಿದ್ಧರಿಲ್ಲ. ಇದು, ೆದ ಕೆಲವು ವರ್ಷಗಳಿಂದ ನಿರಂತರ ಸೋಲು ಅನುಭವಿಸುತ್ತಾ ಮೂಲೆಗುಂಪಾಗಿರುವ ಅವರು ಮತ್ತೆ ಂದುಳಿದ ಹಿಂದೂ ಮತದಾರರ ಮುಂದೆ ಬಿಂಬಿಸಿಕೊಳ್ಳಲು ಮಾಡುತ್ತಿರುವ ಸ್ಟಂಟ್ ಮಾತ್ರ ಎಂಬ ಾತುಗಳು ಗಟ್ಟಿಯಾಗಿಯೇ ಕೇಳಿಬರುತ್ತಿವೆ.

ಜನಾರ್ದನ ಪೂಜಾರಿಯವರ ಎಡಬಿಡಂಗಿತನ ಅವರನ್ನು ದ.ಕ. ಜಿಲ್ಲೆಯ ಒಬ್ಬ ವಿವಾದಾಸ್ಪದ ಾಜಕಾರಣಿಯನ್ನಾಗಿಸಿದೆ. ಧರ್ಮಸ್ಥಳದ ವಿರೇಂದ್ರ ಹೆಗ್ಗಡೆಯೊಂದಿಗೆ ಮುನಿಸಿಕೊಂಡು ತನ್ನ ರಾಜಕೀಯ ಕ್ಕೆ ಧಕ್ಕೆ ತಂದುಕೊಂಡಿದ್ದ ಪೂಜಾರಿಯವರು ಮತ್ತೆ ಈ ಬಾರಿ ಅದೇ ಹೆಗ್ಗಡೆಯವರನ್ನು ಕುದ್ರೋಳಿ ಸರಾ ಉದ್ಘಾಟನೆಗೆ ಆಹ್ವಾನಿಸಿದ್ದಾರೆ! ಮಹಿಳೆಯರ ಬಗ್ಗೆ ಉದಾತ್ತ ವಿಚಾರಗಳನ್ನು ಪ್ರತಿಪಾದಿಸುವ ವರು ಧರ್ಮಸ್ಥಳದಲ್ಲಿ ಒಂದು ವರ್ಷದ ಹಿಂದೆ ಸಂಭವಿಸಿದ ಸೌಜನ್ಯ ಎಂಬ ಕಾಲೇಜ್ ವಿದ್ಯಾರ್ಥಿನಿಯ ೀಲಿನ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಯ ಬಗ್ಗೆ ಇದುವರೆಗೂ ತುಟಿ ಬಿಚ್ಚಿಲ್ಲ. 1990 ರಲ್ಲಿ ಂಡಲ್ ವರದಿ ಜಾರಿ ಆಗಬೇಕು ಎಂದು ಹಿಂದುಳಿದ ವರ್ಗಗಳು ಪಟ್ಟು ಹಿಡಿದಿದ್ದಾಗ, ಸ್ವತಃ ಹಿಂದುಳಿದ ಲ್ಲವ ಸಮುದಾಯಕ್ಕೆ ಸೇರಿದ ಇವರು ಮಂಡಲ್ ವರದಿಯನ್ನು ವಿರೋಧಿಸಿ ಪಕ್ಷವೇ ಮುಖ್ಯ ಎಂದಿದ್ದರು. ುಖ್ಯಮಂತ್ರಿ ಸಿದ್ದರಾಮಯ್ಯ ಉಡುಪಿಯ ಶ್ರೀ ಕೃಷ್ಣ ದೇವಸ್ಥಾನವನ್ನು ಸರ್ಕಾರ ಮುಜರಾಯಿ ಇಲಾಖೆಗೆ ೇರಿಸುವ ಬಗ್ಗೆ ಮಾತನಾಡಿದಾಗ ಜನಾರ್ದನ ಪೂಜಾರಿಯವರು ಅದನ್ನು ವಿರೋಧಿಸಿದ್ದರು. ಅವರ ಿ ನಿಲುವಿನ ಹಿಂದೆ ಕುದ್ರೋಳಿ ದೇಗುಲವನ್ನು ಬಿಲ್ಲವರ ಪಾರುಪತ್ಯೆಯಲ್ಲಿ ಉಳಿಸುವ ಉದ್ದೇಶವೇ ುಖ್ಯವಾಗಿತ್ತು. ಕುದ್ರೋಳಿ ದೇವಾಲಯದಲ್ಲಿ ದಲಿತರಿಗೂ ಪೂಜೆ ಮಾಡಲು ಅವಕಾಶ ನೀಡುವುದಾಗಿ ೇಳುವ ಪೂಜಾರಿಯವರು ದೇಗುಲವನ್ನು ಒಂದು ಸಾರ್ವಜನಿಕ ದೇಗುಲವಾಗಿಸಲು ಸಿದ್ಧರಿಲ್ಲ. ಶ್ರೀ ಾರಾಯಣ ಗುರು ಅವರ ಅನುಯಾಯಿ ತಾನೆಂದು ಹೇಳಿಕೊಳ್ಳುವ ಪೂಜಾರಿಯವರು ಉಡುಪಿ ್ರೀಕೃಷ್ಣಮಠದಲ್ಲಾಗಲಿ, ಧರ್ಮಸ್ಥಳದ ಶ್ರೀಮಂಜನಾಥೇಶ್ವರ ದೇವಸ್ಥಾನದಲ್ಲಾಗಲಿ ನಡೆಯುತ್ತಿರುವ ಾನೂನು ಬಾಹಿರ ಪಂಕ್ತಿಭೇದದ ವಿರುದ್ಧ ಧ್ವನಿ ಎತ್ತುತ್ತಿಲ್ಲ. ಕುಕ್ಕೆ ಸುಬ್ರಮಣ್ಯದಲ್ಲಿ ಮೇಲ್ಜಾತಿ ಬ್ರಾಹ್ಮಣರು ುಂಡ ಎಲೆಗಳ ಮೇಲೆ ಕೆಳಜಾತಿಯವರು ಉರುಳಾಡುವ ಅಮಾನವೀಯ ಪದ್ಧತಿಯನ್ನು ನಿಷೇಧಿಸುವಂತೆ ಒತ್ತಾಯಿಸುತ್ತಿಲ್ಲ.

ಇಂತಹ ವಿರೋಧಾಭಾಸಗಳಿಂದಾಗಿ ಜನಾರ್ಧನ ಪೂಜಾರಿಯವರು ಒಬ್ಬ ಪ್ರಾಮಾಣಿಕ ಸಾಮಾಜಿಕ ಕಾರ್ಯಕರ್ತರಾಗಿ ಕಾಣುವುದಿಲ್ಲ. ಆದರೂ ಸಹ ಯಾವುದೇ ಟೀಕೆ ಟಿಪ್ಪಣಿಗಳಿಗೆ ಸೊಪ್ಪು ಹಾಕದೆ, ಕುದ್ರೋಳಿ ದೇಗುಲದಲ್ಲಿ ವಿಧವೆಯರಿಗೆ ಅರ್ಚಕರಾಗಿ ಕೆಲಸಮಾಡಲು ಅವಕಾಶಮಾಡಿಕೊಟ್ಟ ಕ್ರಮ ಅಭಿನಂದನಾರ್ಹವಾಗಿದೆ.

ಭಾರತದ ಯುವಜನತೆಗೆ "ನಮೋ" ಆದರ್ಶವೇ?

ಲೋಕಸಭಾ ಚುನಾವಣೆಗೆ ದಿನಗಳು ಹತ್ತಿರವಾಗುತ್ತಿವೆ. ಈ ಬಾರಿಯ ಲೋಕಸಭಾ ಚುನಾವಣೆ ಹಲವಾರು ವಿಶೇಷಗಳಿಂದ ತನ್ನ ಕುತೂಹಲತೆಯನ್ನು ಕಾಯ್ದುಕೊಂಡಿದೆ. ಒಂದೆಡೆ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿರುವ ಕಾಂಗ್ರೆಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರ, ಮತ್ತೊಂದೆಡೆ ಯುಪಿಎ ಸರ್ಕಾರದ ಭ್ರಷ್ಟಾಚಾರವನ್ನೇ ತನ್ನ ಚುನಾವಣಾ ಬಂಡವಾಳ ಮಾಡಿಕೊಂಡು, ಹಿಂದುತ್ವದ ಅಲೆಯಲ್ಲಿ ಅಧಿಕಾರದ ಗದ್ದುಗೆಯನ್ನು ಹಿಡಿಯಲು ಹೊರಟಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ ಮೈತ್ರಿಕೂಟ. ಎನ್.ಡಿ.ಎ. ಕೂಟ ನಾವೇ ಅಧಿಕಾರದ ಗದ್ದುಗೆಯನ್ನು ಹಿಡಿಯುತ್ತೇವೆಂದು ಹಗಲು ಕನಸು ಕಾಣುತ್ತಿದ್ದು. ಈ ಕನಸ್ಸನ್ನು ನನಸು ಮಾಡಿಕೊಳ್ಳಲು ಭಾರತೀಯ ಜನತಾ ಪಾರ್ಟಿ ತನ್ನ ಪ್ರಧಾನಮಂತ್ರಿ ಅಭ್ಯರ್ಥಿಯನ್ನಾಗಿ 'ಕಾರ್ಪೋರೇಟ್ ಮೀಡಿಯಾ ಪ್ರಾಯೋಜಿತ' ಅಭಿವೃದ್ಧಿಯ ಹರಿಕಾರ ನರೇಂದ್ರ ಮೋದಿಯನ್ನು ಆರಿಸಿದೆ.

ಗುಜರಾತಿನ ನರೇಂದ್ರ ಮೋದಿಯವರನ್ನು ಪ್ರಧಾನಮಂತ್ರಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ ನಂತರ ಬಿಜೆಪಿಯ ನಾಯಕರುಗಳು ಪುಂಖಾನುಪುಂಖವಾಗಿ ಪುಂಗಿ ಊದುತ್ತಿರುವ ವಿಷಯವೇ "ಮೋದಿ ಭಾರತದ ಯುವಜನತೆಗೆ ಅದರ್ಶ ವ್ಯಕ್ತಿ(Youth icon)" ಅವರ ನಾಯಕತ್ವವನ್ನು ಭಾರತದ ಯುವಜನತೆ ಒಪ್ಪುತ್ತದೆ ಎಂಬ ಭಾಷಣಗಳು ಉದ್ದುದ್ದವಾಗಿ ಬರುತ್ತಿವೆ.

ನಮ್ಮ ದೇಶವನ್ನು ಅಭಿವೃದ್ಧಿಪಡಿಸಲು ಬೇಕಾಗಿರುವುದು ವಿದೇಶಿ ಬಂಡವಾಳವೂ ಅಲ್ಲಾ, ಉದಾರೀಕರಣವೂ ಅಲ್ಲ ಬೇಕಾಗಿರುವುದು ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ. ಈ ಬೇಡಿಕೆಯನ್ನು ಸನ್ಮಾನ್ಯ ನರೇಂದ್ರ ಮೋದಿಯವರ ಮುಂದಿಟ್ಟರೇ ಆದೂ ಅವರಿಂದ ಸಾಧ್ಯವಿಲ್ಲ ಕಾರಣ, ಗುಜರಾತ್ ಸಾಕ್ಷರತೆ ಹೊಂದಿರುವ ರಾಜ್ಯಗಳ ಪೈಕಿ ಬಹಳ ದೂರದಲ್ಲಿದೆ, UNDPಯ ವರದಿಯಂತೆ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣದಲ್ಲಿ ಗುಜರಾತ್ 18ನೇ ಸ್ಥಾನದಲ್ಲಿದ್ದರೆ, ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವವರ ಪ್ರಮಾಣ ಶೇ. 39.3, ಮತ್ತೊಂದು ಆಶ್ಚರ್ಯಕರ ಸಂಗತಿ ಎಂದರೆ ಶಾಲೆಯಿಂದ ಹೊರಗುಳಿದಿರುವ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ಪ್ರಮಾಣ ಶೇ. 57.9, ಇದು ಭಾರತದ ಒಟ್ಟು ಪ್ರಮಾಣಕ್ಕಿಂತ ಹೆಚ್ಚು, ಭಾರತದ ಪ್ರಮಾಣ ಶೇ. 49.3.

ಉದ್ಯೋಗದ ವಿಷಯಕ್ಕೆ ಬರುವುದಾದರೆ ಉದ್ಯೋಗ ಗಗನ ಕುಸುಮವಾಗಿದೆ, ಗುಜರಾತಿನಲ್ಲಿ ಶೇ. 80ರಷ್ಟು ಯುವಜನತೆ ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಆದರೆ ಈ ಬಗ್ಗೆ ಅಲ್ಲಿನ ಸರ್ಕಾರವೇ ನಿರ್ಲಕ್ಷ್ಯವಹಿಸಿದೆ. ಕೈಗಾರಿಕಾ ಕ್ರಾಂತಿ ಗುಜರಾತಿನಲ್ಲಾಗುತ್ತಿದೆ ಎಂದು ಹೇಳುವ ಮಾಧ್ಯಮಗಳು ಅಲ್ಲಿನ ನಿರುದ್ಯೋಗದ ಬಗ್ಗೆ ಜಾಣ ಕುರುಡಾಗಿವೆ, ಆದರೆ ಬಿಜೆಪಿಯ ನಾಯಕರು ಮಾತ್ರ ನರೇಂದ್ರಮೋದಿಯನ್ನು ಯುವಕರ ಪಾಲಿನ ಹೀರೋ ಮಾಡಲು ಹೊರಟಿದ್ದಾರೆ. ಕೈಗಾರಿಕೆಗಳ ಹೆಸರಿನಲ್ಲಿ ಅಲ್ಲಿನ ಬಡ ರೈತರುಗಳನ್ನು ಒಕ್ಕಲೆಬ್ಬಿಸಿ ಕಾಂಕ್ರೀಟ್‌ಗೋಡೆಗಳನ್ನು ಕಟ್ಟಿ ಇದೇ ರಾಜ್ಯದ ಅಭಿವೃದ್ಧಿ ಎಂದು ಬೊಬ್ಬೆಹಾಕುತ್ತಿದ್ದಾರೆ.

ಗುಜರಾತ್ ರಾಜ್ಯದ ಅಂಕಿ ಅಂಶಗಳನ್ನು, ಅಲ್ಲಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಗುಜರಾತ್‌ನಲ್ಲಿ ಅಭಿವೃದ್ಧಿಯಾಗಿರುವುದು ಕೇವಲ ಬಂಡವಾಳಶಾಹಿಗಳು, ಎಂಬುದು ಅರಿವಾಗುತ್ತದೆ. ಈ ಬಂಡವಾಳಶಾಹಿ ವರ್ಗದ ಅಭಿವೃದ್ಧಿಯ ಹರಿಕಾರ ನರೇಂದ್ರ ಮೋದಿಯೇ! ಅದೇ ಸಮಯದಲ್ಲಿ ಅನಕ್ಷರತೆ, ಅಪೌಷ್ಠಿಕತೆ ಮತ್ತು ನಿರುದ್ಯೋಗದಿಂದ ಬಳಲುತ್ತಿರುವ ಬಹುಸಂಖ್ಯಾತ ಕಾರ್ಮಿಕವರ್ಗ, ಕಾರ್ಷಿಕ ವರ್ಗ ಮತ್ತು ಅಲ್ಪಸಂಖ್ಯಾತರ ನೋವಿಗೆ ಕಾರಣ ಶ್ರೀಮಾನ್ ನರೇಂದ್ರಮೋದಿಯೇ ಅಲ್ಲವೇ!

ಮೋದಿಯನ್ನು ಪ್ರಧಾನಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದ ನಂತರವ ರಾತ್ರೋ ರಾತ್ರಿ ನಾಯಿಕೊಡೆಗಳಂತೆ ಉಧ್ಭವಾಗಿರುವ "ಮೋದಿ ಬ್ರಿಗೇಡ್" ಸಂಘಟನೆಗಳು ಗಣೇಶ ಹಬ್ಬವನ್ನು ಉಪಯೋಗಿಸಿಕೊಂಡು ಸಾಮೂಹಿಕ ಗಣೇಶ ವಿಸರ್ಜನೆಯ ನೆಪದಲ್ಲಿ ಅಮಾಯಕ ಹಿಂದೂ ಹುಡುಗರನ್ನು ತಮ್ಮತ್ತ ಸೆಳೆಯುವ ಮೂಲಕ ಅವರಲ್ಲಿ ಅನ್ಯಧರ್ಮಿಯರ ವಿರುದ್ಧ ಕೋಮು ವಿಷಬೀಜವನ್ನು ಭಿತ್ತಿ ಅವರಿಂದ ಕೋಮು ಗಲಭೆಗಳನ್ನು ಸೃಷ್ಟಿಸುವ ಹುನ್ನಾರ ನಡೆಸಿವೆ. ಇವರುಗಳಿಂದ ಪ್ರಶಾಂತವಾಗಿರುವ ನಮ್ಮ ಸಮಾಜದಲ್ಲಿ ಕೋಮುಗಲಭೆಗಳು ಸಂಭವಿಸುವುದು ದೂರವೆನಿಲ್ಲಾ? ಆದರೆ ಅವರ ದಾಳಕ್ಕೆ ಅಮಾಯಕ ಹಿಂದೂ ಯುವಕರು ಬಲಿಯಾಗುತ್ತಿದ್ದಾರೆ.


6 ಕೋಟಿ ಜನರನ್ನು ಹೊಂದಿರುವ ಗುಜರಾತ್ ರಾಜ್ಯವನ್ನೇ ಅಭಿವೃದ್ಧಿ ಮಾಡಲಾಗದೇ, ಕೇವಲ ಮಾಧ್ಯಮಗಳನ್ನು ಬಳಸಿಕೊಂಡು ಗುಜರಾತ್ ದೇಶಕ್ಕೆ ಮಾದರಿಯಾಗಿ ಬೆಳೆಯುತ್ತಿದೆ ಎಂಬ ಸುಳ್ಳು ಕಂತೆಗಳ ಮೇಲೆ ಜನರನ್ನು ಅದರಲ್ಲೂ ದೇಶದ ಯುವಜನತೆಯನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡುತ್ತಿರುವ ಮೋದಿಯವರಿಂದ 120 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಭಾರತ ಉಪಖಂಡವನ್ನು ಅಭಿವೃದ್ಧಿ ಮಾಡುವುದು, ಇಲ್ಲಿರುವ ಧರ್ಮ ಮತ್ತು ಧರ್ಮಗಳ ಸಾಮರಸ್ಯವನ್ನು ಕಾಪಾಡುವುದು, ಶಿಕ್ಷಣ ಕ್ರಮವನ್ನು ಉತ್ತಮ ಪಡಿಸುವುದು, ದಲಿತರನ್ನು ಮತ್ತು ಆದಿವಾಸಿ ಬುಡಕಟ್ಟು ಜನರ ಹಕ್ಕುಗಳಿಗೆ ರಕ್ಷಣೆ ನೀಡುವುದು ಕಾರ್ಷಿಕ ರಂಗದ ಬೇಡಿಕೆಗಳನ್ನು ಈಡೇರಿಸುವ ಸಾಮರ್ಥ್ಯವಿಲ್ಲದಿರುವ ನರೇಂದ್ರ ಮೋದಿ ನಮ್ಮ ಯುವಜನತೆಗೆ ಯಾವ ರೀತಿಯಲ್ಲೂ ಅದರ್ಶವಾಗಲಾರರು ಅಲ್ಲ


– ಶಿವು

ವೇ!

"ಹೋರಾಟಗಾರರಿಗೆ ತಾತ್ವಿಕ ಬದ್ದತೆ ಅಗತ್ಯ:" –ಪ್ರೊ.ಎಸ್.ಚಂದ್ರಶೇಖರ್

ಭೂ ಚಳುವಳಿಯ ನಾಯಕ ಬೈರೇಬಂಡ ಅಶ್ವತ್ಥರೆಡ್ಡಿಗೆ ಲಾಲ್ ಸಲಾಂ






ಕಾಗತಿ ನಾಗರಾಜಪ್ಪ

ಶೋಷಿತ ಸಮುದಾಯಗಳ ಪರವಾಗಿ ಹೋರಾಟ ನಡೆಸುವವರಿಗೆ ಸೈದ್ಧಾಂತಿಕ ಹಾಗೂ ತಾತ್ವಿಕ ಬದ್ದತೆ ಇದ್ದರೆ ಮಾತ್ರ ಶೋಷಿತರಿಗೆ ಮುಕ್ತಿ ಸಿಗುತ್ತದೆಯೆಂದು ಕುವೆಂಪು ವಿಶ್ವ ವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್. ಚಂದ್ರಶೇಖರ್ ಹೇಳಿದರು.

ಚಿಂತಾಮಣಿ ತಾಲೂಕಿನ ಬೈರೇಬಂಡದಲ್ಲಿ ಅಕ್ಟೋಬರ್ 2 ರಂದು ನಡೆದ ಜಿಲ್ಲೆಯ ಭೂ ಚಳುವಳಿಯ ಮಂಚೂಣಿ ನಾಯಕ ಜಿ.ವಿ.ಅಶ್ವತ್ಥರೆಡ್ಡಿ ಮೂರನೇ ವರ್ಷದ ಸ್ಮರಣೆಯ ಪ್ರಯುಕ್ತ ಸಿಪಿಎಂ ಜಿಲ್ಲಾ ಸಮಿತಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಗಾಂಧಿಜೀ ಕಂಡಂತೆ ಕಲ್ಯಾಣ ರಾಜ್ಯವೆಂದರೆ ಶೋಷಿತರ ಬದುಕು ಹಸನಗೊಳ್ಳಬೇಕು. ಆದರೆ ನಮ್ಮ ದೇಶದಲ್ಲಿ ಇಂದಿಗೂ ಶೇ.80 ರಷ್ಟು ಜನ ಬಡತನದ ಬೇಗುದಿಯಲ್ಲಿ ನರಳುತ್ತಿದ್ದಾರೆಂದು ತೀವ್ರ ವಿಷಾದ ವ್ಯಕ್ತಪಡಿಸಿದರು.


ಅಶ್ವತ್ಥರೆಡ್ಡಿಯಂತಹ ನಾಯಕರು ಬೌದ್ದಿಕವಾಗಿ ಬೆಳೆದು ಹೋರಾಟದಲ್ಲಿ ತೊಡಗಿಸಿಕೊಂಡಿದ್ದಕ್ಕೆ ಅವಳಿ ಜಿಲ್ಲೆಯಲ್ಲಿ ನೂರಾರು ಭೂರಹಿತರಿಗೆ ಕೃಷಿ ಭೂಮಿ ಸಿಗುವಂತೆ ಅಯಿತು. ಎಲ್ಲಿಯವರೆಗೆ ಉಳುವವನಿಗೆ ಭೂಮಿ ಸಿಗುವುದಿಲ್ಲವೋ ಅಲ್ಲಿಯವರೆಗೂ ಯಾವುದೇ ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ದಿಯಾಗಲ್ಲ. ಹೋರಾಟಗಾರರಿಗೆ ತಾತ್ವಿಕ ಬದ್ದತೆ ಹಾಗೂ ಹೋರಾಟದ ಕಿಚ್ಚು ಅಗತ್ಯವೆಂದು ಹೇಳಿದ ಅವರು ಸಮಾಜದಲ್ಲಿ ಬಂಡವಾಳಶಾಹಿಗಳಿಂದ ಶ್ರಮಜೀವಿಗಳ ಶೋಷಣೆ ತೀವ್ರಗೊಂಡಿದೆ ಎಂದರು. ತಮ್ಮ ಜೀವನ ಉದ್ದಕ್ಕೂ ಮಾರ್ಕ್ಸ್‌ವಾದಿ ಸಿದ್ದಾಂತಗಳನ್ನು ಮೈಗೂಡಿಸಿಕೊಂಡು ಆನೇಕ ಸಂಕಷ್ಟಗಳನ್ನು ಎದುರಿಸಿ ಸಂಘಟಿ-ತ ಎಡ ಚಳುವಳಿ ನಡೆಸಿದವರಲ್ಲಿ ಅಶ್ವತ್ಥರೆಡ್ಡಿ ಪ್ರಮುಖರೆಂದು ಪ್ರೊ. ಎಸ್. ಚಂದ್ರಶೇಖರ್ ಬಣ್ಣಿಸಿದರು. ನಿಸ್ವಾರ್ಥ ಹಾಗೂ ನಿರ್ಗತಿಕರ ಪರವಾಗಿ ಹೋರಾಡಿದ ಕೀರ್ತಿ ಅವರಿಗೆ ಸಲ್ಲಬೇಕೆಂದರು.



ಅಶ್ವತ್ಥರೆಡ್ಡಿ ಸಮರಶೀಲ ಹೋರಾಟಗಾರ :

– ಯು.ಬಸವರಾಜ್.

ಕೆಪಿಆರ್‌ಎಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್ ಮಾತನಾಡಿ ತಮ್ಮ ಬದುಕಿನ ಉದ್ದಕ್ಕೂ ಚಳುವಳಿಯ ಜೊತೆಗೆ ಮಾರ್ಕ್ಸವಾದಿ ಸಿದ್ದಾಂತವನ್ನು ಮೈಗೂಡಿಸಿಕೊಂಡಿದ್ದ ಅಶ್ವತ್ಥರೆಡ್ಡಿ ಒಬ್ಬ ಸಮರಶೀಲ ಹೋರಾಟಗಾರನಾಗಿ ದುಡಿಯುವ ಹಾಗೂ ಕೃಷಿ ಕೂಲಿ ಕಾರ್ಮಿಕರಿಗೆ ಶಕ್ತಿ ತುಂಬಿದರು. ಜನತೆಗೆ ಹುಸಿ ಭರವಸೆಗಳು ನೀಡಿ ಅಧಿಕಾರಕ್ಕೆ ಬಂದ ಬಳಿಕ ಜನತೆಯನ್ನು ಮರೆಯುವ ಇಂದಿನ ವ್ಯವಸ್ಥೆಗೆ ಹೋಲಿಸಿಕೊಂಡರೆ ಅಶ್ವತ್ಥರೆಡ್ಡಿ ಸ್ವಾರ್ಥಪರ ಆಕಾಂಕ್ಷೆಗಳು ಇಲ್ಲದೇ ಜನಪರವಾಗಿ ಹೋರಾಟ ನಡೆಸಿದ ಅವರ ಬದುಕು ಅವಿಸ್ಮರಣೀಯವಾದದು ಎಂದು ಬಣ್ಣಿಸಿ,




ಇಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ದೇಶದ ಕೃಷಿ ಕ್ಷೇತ್ರವನ್ನು ಬಹುರಾಷ್ಟ್ರೀಯ ಕಂಪನಿಗಳ ತೆ-ಕ್ಕೆಗೆ ನೀಡುವ ಮೂಲಕ ಕೃಷಿಯನ್ನು ದಿವಾಳಿ ಮಾಡಲು ಹೊರಟಿದ್ದು, ಬಡ ಜನರ ಜೀವನಕ್ಕಿರುವ ಕೃಷಿ ಭೂಮಿಯನ್ನು ಬಂಡವಾಳಸ್ಥರಿಗೆ ಲಾಭ ತಂದುಕೊಡುವ ಉದ್ದೇಶದಿಂದಲ್ಲೇ ಕೇಂದ್ರ ಸರ್ಕಾರ ಹೊಸ ಭೂ ಸ್ವಾಧೀನ ಕಾಯ್ದೆಯನ್ನು ಜಾರಿ ಮಾಡಿದೆಯೆಂದು ಟೀಕಿಸಿದರು.

ಬಿಜೆಪಿ ವಿರುದ್ದ ಆಕ್ರೋಶ:

ದೇಶದ ಸಾಮರಸ್ಯ ಹಾಳು ಮಾಡುವ ಉದ್ದೇಶದಿಂದ ಬಿಜೆಪಿ ನರೇಂದ್ರಮೋದಿಯನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಿದೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದ ಯು.ಬಸವರಾಜ್ ನರಹಂತಕನನ್ನು ಜನತೆ ಬೆಂಬಲಿಸುವುದಿಲ್ಲವೆಂದರು. ದೇಶದ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಮಾಡುವ ಮೂಲಕ ಲಕ್ಷಾಂತರ ಸಣ್ಣಪುಟ್ಟ ವ್ಯಾಪಾರಸ್ಥರನ್ನು ಬೀದಿಪಾಲು ಮಾಡ ಹೊರಟಿದೆಯೆಂದು ಆರೋಪಿಸಿ ದೇಶ ಅಭಿವೃದ್ದಿಗೆ ಕೃಷಿಯ ಕಂಪನೀಕರಣ ಮಾರಕ ಎಂದರು.

ಜನಪರ ಹೋರಾಟಗಳ ಕ್ಷೀಣ : ನ್ಯಾಯವಾದಿ ಶಂಕರಪ್ಪ

ಹೈಕೋರ್ಟ್‌ನ ಖ್ಯಾತ ವಕೀಲ ಶಂಕರಪ್ಪ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಜನತೆಯಲ್ಲಿ ಹೋರಾಟ ಮನೋಭಾವ ಕಡಿಮೆಯಾಗುತ್ತಿದೆ. ಹೀಗಾಗಿಯೇ ಸರ್ಕಾರಗಳು ಜನರ ಪ್ರತಿವಿರೋಧವಿಲ್ಲದ ಕಾರಣ ಸಮಾಜ ಸಾರ್ವಜನಿಕ ರಂಗವನ್ನು ಖಾಸಗೀಕರ ಮಾಡುತ್ತಿವೆಯೆಂದು ಆರೋಪಿಸಿದರು. ಈ ಹಿಂದೆ ನಾವು ವಿದ್ಯಾರ್ಥಿಗಳಾಗಿದ್ದ ಹೋಟೆಲ್‌ಗಳಲ್ಲಿ ದೋಸೆ, ಇಡ್ಲಿ ರೇಟ ಜಾಸ್ತಿಯಾದರೆ ಬೀದಿಗಿಳೀದು ಹೋರಾ ನಡೆಸುತ್ತಿದ್ದಿ ಆದರೆ ಇದೀಗ ಅಂತಹ ಹೋರಾಟಗಳು ಕಣ್ಮರೆಯಾಗಿವೆ ಎಂದ ಅವರು ಅಶ್ವತ್ಥರೆಡ್ಡಿ ಮಾರ್ಗದರ್ಶನದಲ್ಲಿ ತಮ್ಮ ವ್ಯಾಸಂಗದ ಅವಧಿಯಲ್ಲಿ ನಡೆ



...ರ್ಥಿ ಚಳುವಳಿಯನ್ನು ಮೆಲುಕು ...ದರು.

...ಇಲ್ಲದ ಹೋರಾಟ :

...ಂ.ಪಿ.ಮುನಿವೆಂಕಟಪ್ಪ ...ಸ್ಮರಣೋತ್ಸ ಕಾರ್ಯಕ್ರಮದಲ್ಲಿ ...ವಿಕವಾಗಿ ಮಾತನಾಡಿದ ... ಜಿಲ್ಲಾ ಕಾರ್ಯದರ್ಶಿ ...ಪಿ.ಮುನಿವೆಂಕಟಪ್ಪ ಇಡೀ ಅವಿಭಜಿತ ...ಲಾರ ಜಿಲ್ಲೆಯಲ್ಲಿ 70ರ ದಶಕದಲ್ಲಿಯೇ ... ಚಳುವಳಿಯ ಮುಂಚೂಣಿ ...ಯಕರಾಗಿದ್ದ ಅಶ್ವತ್ಥರೆಡ್ಡಿ ಭೂಮಾಲೀಕರ ವಿರುದ್ಧ ರಾಜೀ ಇಲ್ಲದ ಹೋರಾಟ ನಡೆಸಿ ಸಾವಿರಾರು ಭೂರಹಿತರಿಗೆ, ಬಡ ರೈತರಿಗೆ ಭೂ ಹಂಚಿಕೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ತಮ್ಮ ಬದುಕಿನ ಉದ್ದಕ್ಕೂ ಯಾವುದೇ ಆಸೆ, ಅಮಿಷಗಳಿಗೆ ಬಲಿಯಾಗದೇ ತತ್ವ ಸಿದ್ಧಾಂತದ ಮೂಲಕ ಶೋಷಿತರ ಏಳ್ಗೆಗೆ ದುಡಿದ ನಾಯಕರೆಂದು ಬಣ್ಣಿಸಿ ಮುಂದಿನ ದಿನಗಳಲ್ಲಿ ಪಕ್ಷ ಅವರ ಹೊಂದಿದ್ದ ಅಶಯಗಳನ್ನು ಈಡೇರಿಸುವ ದಿಕ್ಕಿನಲ್ಲಿ ಪ್ರಬಲ ಸಂಘಟಿತ ಚಳುವಳಿ





...ಅಶ್ವತ್ಥರೆಡ್ಡಿಯವರಿಗೆ ಲಾಲ್ ಸಲಾಂ

ರೂಪಿಸಲಿದೆಯೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸಿ.ಗೋಪಿನಾಥ್ ವಹಿಸಿದ್ದರು. ವೇದಿಕೆಯಲ್ಲಿ ಮಾಜಿ ಶಾಸಕ ಹಾಗೂ ಸಿಪಿಎಂ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಜಿಪಂ ಸದಸ್ಯೆ ಸಾವಿತ್ರಮ್ಮ ಮುನಿಸ್ವಾಮಿ, ಹಿರಿಯ ಮುಖಂಡರಾದ ಶಿಡ್ಲಘಟ್ಟದ ಕೆ.ಎಂ. ವೆಂಕಟೇಶ್, ಯನಮಲಪಾಡಿ ದೊಡ್ಡಾ-ರೆಡ್ಡಿ, ಗೋಪಸಂದ್ರ ಶ್ರೀನಿವಾಸರೆಡ್ಡಿ, ಗೌರಿಬಿದನೂರಿನ ಸಿದ್ದಗಂಗಪ್ಪ, ಹಿರಿಯ ವಕೀಲ ಗರಗಿರೆಡ್ಡಿ, ಸಿಪಿಎಂ ಜಿಲ್ಲಾ ಸಮಿತಿ ಸದಸ್ಯರಾದ ಕೆ.ನಾಗರಾಜ್, ರಘರಾಮರೆಡ್ಡಿ, ಚೆನ್ನರಾಯಪ್ಪ, ಸಿಸಿ ಅಶ್ವತ್ಥಪ್ಪ, ಚಿಕ್ಕಬಳ್ಳಾಪುರದ ಮುನಿಕೃಷ್ಣಪ್ಪ, ಶಿಡ್ಲಘಟ್ಟದ ಲಕ್ಷ್ಮೀದೇವಮ್ಮ, ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ಕುಂದಲಗುರ್ಕಿ ಕೆ.ಎನ್. ಮುನೀಂದ್ರ, ಡಿವೈಎಫ್‌ಐ ಟಿ.ಬಾಬಾಜಾನ್ ಸೇರಿದಂತೆ ತಾಲೂಕಿನ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು, ಎಡಪಂಥೀಯ ಚುಳುವಳಿಯ ನಾಯಕರು ಜಿ.ವಿ.ಅಶ್ವತ್ಥರೆಡ್ಡಿ ಅಭಿಮಾನಿಗಳು ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಲಾಲ್‌ಸಲಾಂ :

ಸ್ಮರಣೋತ್ಸವದಲ್ಲಿ ಪಾಲ್ಗೊಂಡಿದ್ದ ಆನೇಕ ಪ್ರಗತಿಪರ ಸಂಘಟನೆಗಳ ನಾಯಕರು, ಎಡ ಚಳುವಳಿ ಹೋರಾಟಗಾರರು ಕಾ.ಬೈರೇಬಂಡ ಅಶ್ವತ್ಥರೆಡ್ಡಿ ರವರ ಸಮಾಧಿಗೆ ಪುಷ್ಪ ನಮನ ಸಲ್ಲಿಸಿ ಲಾಲ್‌ಸಲಾಂ ಸಲ್ಲಿಸಿದರು.

ಕ್ರಾಂತಿಗೀತೆಗಳ ಕಲರವ :

ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಬಾಗೇಪಲ್ಲಿಯ ಪ್ರಜಾನಾಟ್ಯ ಮಂಡಳಿಯ ಹಿರಿಯ ಕಲಾವಿದರಾದ ಓಬಳರಾಜು, ಚೆನ್ನರಾಯಪ್ಪ, ನರಸಿಂಹ, ಶಿವ ಹಾಗೂ ತಂಡ ಅಶ್ವತ್ಥರೆಡ್ಡಿ ರವರ ಬದುಕಿನ ಹಲವು ಅವಿಸ್ಮರಣೀಯವಾದ ಘಟನೆಗಳನ್ನು ಕ್ರಾಂತಿಗೀತೆಗಳ ಮೂಲಕ ಮನ ಮುಟ್ಟುವ ರೀತಿಯಲ್ಲಿ ಹಾಡುವ ಮೂಲಕ ಅಗಲಿದ ಕಾಮ್ರೇಡ್ ಅಶ್ವತ್ಥರೆಡ್ಡಿಯವರಿಗೆ ಕೆಂಪು ವಂದನೆಗಳನ್ನು ಸಲ್ಲಿಸಿದರು. ●

ರಾಜಕೀಯ ಅಧಿಕಾರಕ್ಕಿಂತ ಶೋಷಿತರ ವಿಮೋಚನೆ ಸಿಪಿಐ(ಎಂ) ಗುರಿ:

– ಜಿ.ವಿ. ಶ್ರೀರಾಮರೆಡ್ಡಿ

...ಧಾನಿ ಹುದ್ದೆಗೆ ನರೇಂದ್ರ ಮೋದಿ, ...ಹುಲ್‌ಗಾಂಧಿ ಅನರ್ಹರು" ...ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ...ನಿ ಅಭ್ಯರ್ಥಿಗಳಾಗಿ ಮೋದಿ ಹಾಗೂ ...ಹುಲ್‌ರನ್ನು ಬಿಂಬಿಸುವ ಮೂಲಕ ದೇಶದ ...ತ್ರ ವ್ಯವಸ್ಥೆಗೆ ಧಕ್ಕೆ ತರುತ್ತಿವೆಯೆಂದು



...ಂ) ರಾಜ್ಯ ಕಾರ್ಯದರ್ಶಿ ...ವಿ.ಶ್ರೀರಾಮರೆಡ್ಡಿ ಟೀಕಿಸಿದರು. ...ತಾಲೂಕಿನ ಬೈರೇಬಂಡ ಗ್ರಾಮದಲ್ಲಿ ...ದ ಭೂ ಚಳುವಳಿಯ ನಾಯಕ ದಿ.ಅಶ್ವತ್ಥರೆಡ್ಡಿರವರ ಮೂರನೇ ವರ್ಷದ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.


ದೇಶದಲ್ಲಿನ 120 ಕೋಟಿ ಜನ ಈ ದೇಶಕ್ಕೆ ಯಾರು ಪ್ರಧಾನಿಯಾಗಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಆದರೆ ಚುನಾವಣೆಗೂ ಮುನ್ನವೇ ಪ್ರಜಾತಂತ್ರದ ವ್ಯವಸ್ಥೆಗೆ ವಿರುದ್ಧವಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಮೋದಿ ಹಾಗು ರಾಹುಲ್‌ರನ್ನು ಪ್ರಧಾನಿ ಹುದ್ದೆಗೆ ಬಿಂಬಿಸಲು ಪೈಪೋಟಿ ನಡೆಸುತ್ತಿರುವುದು ಅಪಾಯಕಾರಿ ಬೆಳವಣಿಗೆ ಎಂದ ಅವರು ಈ ದೇಶಕ್ಕೆ ಬೇಕಾಗಿರುವುದು ವ್ಯಕ್ತಿಗಳ ಪರ್ಯಾಯವಲ್ಲ ಧೋರಣೆಗಳು, ಎಂದು ಕಾಂಗ್ರೆಸ್, ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಅಧಿಕಾರದ ಆಸೆ ಇಲ್ಲ :

ಮಾರ್ಕ್ಸವಾದಿ ಸಿದ್ಧಾಂತಗಳಿಗೆ ಬದ್ಧವಾಗಿರುವ ಸಿಪಿಎಂ ಪಕ್ಷಕ್ಕೆ ರಾಜಕೀಯ ಅಧಿಕಾರ ಪಡೆಯುವುದಕ್ಕಿಂತ ಸಮಾಜದಲ್ಲಿನ ಶೋಷಿತರನ್ನು ವಿಮೋಚನೆಗೊಳಿಸುವ ಗುರಿ ಹೊಂದಿದೆ. ದೇಶದಲ್ಲಿ ಭೂ ಮಾಲೀಕರ ಹಾಗೂ ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಡುತ್ತಿರುವ ಸಿಪಿಐ(ಎಂ) ಬಲವನ್ನು ಕುಗ್ಗಿಸಲು ಅಮೇರಿಕಾದ ಸಾಮ್ರಾಜ್ಯಶಾಹಿ ಶಕ್ತಿಗಳು ಪಿತೂರಿ ನಡೆಸುತ್ತಿವೆ. ಆದರೆ ಈ ಜಗತ್ತಿನಲ್ಲಿ ಮಾರ್ಕ್ಸವಾದಕ್ಕೆ ಎಂದೂ ಸಾವಿಲ್ಲ ಎಂಬುದನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕು. ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳ ಮೇಲೆ ಪಕ್ಷ ನಿಂತಿದೆ. ನಮಗೆ ಸಂಘರ್ಷದಲ್ಲಿ ತಾತ್ಕಾಲಿಕ ಹಿನ್ನಡೆಯಾಗಬಹುದು. ಆದರೆ ಹಿಮ್ಮೆಟ್ಟಿಸುವ ಶಕ್ತಿ ಇದೆ. ಪಕ್ಷ ಎಂದಿಗೂ ಜನರಪರವಾಗಿ, ಭೂರಹಿತರ ಪರವಾಗಿ ಹೋರಾಟ ನಡೆಸಲಿದೆ ಎಂದರು. ●

ಬಿ.ಎಸ್.ಎನ್.ಎಲ್‌ನ ಇವತ್ತಿನ ಪರಸ್ಥಿತಿಗೆ ಕೇಂದ್ರ ಸರಕಾರದ ನೀತಿಯೇ ಕಾರಣ.

ದೂರ ಸಂಚಾರ ನಿಗಮ ಲಿ.(ಬಿ.ಎಸ್. ಎನ್.ಎಲ್)ವು ಪ್ರಸ್ತುತ ಎದುರಿಸುತ್ತಿರುವ ಪರಸ್ಥಿತಿಗೆ ಕೇಂದ್ರ ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳೇ ಕಾರಣವೆಂದು ಬಿ.ಎಸ್. ಎನ್.ಎಲ್ ನೌಕರರ ಸಂಘದ ಕರ್ನಾಟಕ ವಲಯ ಕಾರ್ಯದರ್ಶಿ ಸಿ.ಕೆ.ಗುಂಡಣ್ಣ ಆರೋಪಿಸಿದರು.



ಹುಬ್ಬಳ್ಳಿ ನಗರದ ಜವಳಿ ವರ್ತಕರ ಸಂಘದ ಸಭಾ ಭವನದಲ್ಲಿ ನಡೆದ ಬಿ.ಎಸ್. ಎನ್.ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್‌ನ ಧಾರವಾಡ ಜಿಲ್ಲಾ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರಕಾರ ಉದ್ದೇಶ ಪೂರ್ವಕವಾಗಿ ಖಾಸಗಿ ಕಂಪನಿಗಳಿಗೆ ಮಣೆ ಹಾಕಿದೆ ಪರಿಣಾಮ ಸರಕಾರಿ ಸ್ವಾಮ್ಯದ ಬಿ.ಎಸ್. ಎನ್.ಎಲ್ ನಷ್ಟ ಅನುಭವಿಸುವಂತಾಗಿದೆ. ಸರಕಾರದ ಈ ನೀತಿಯ ಪರಿಣಾಮವಾಗಿ ಸಂಸ್ಥೆಯಲ್ಲಿ ಕಾಯಂ ನೌಕರರ ಸಂಖ್ಯೆ ಕ್ಷೀಣಿಸುತ್ತಿದ್ದು ಅವರ ಸ್ಥಾನವನ್ನು ಗುತ್ತಿಗೆ ಕಾರ್ಮಿಕರು ತುಂಬುತ್ತಿದ್ದಾರೆ. ಆದರೇ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಹಾಗೂ ಕಾನೂನಾತ್ಮಕ ಸೌಲಭ್ಯಗಳನ್ನು ನೀಡದೇ ಶೋಷಣೆ ಮಾಡಲಾಗುತ್ತಿದೆ. ಇದರ ವಿರುದ್ಧ ಕಾರ್ಮಿಕರು ಸಂಘಟಿತರಾಗಲು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಬಿ.ಎಸ್.ಎನ್.ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ಬಿ.ಎಸ್. ಎನ್.ಎಲ್ ಒಂದು ಸರಕಾರಿ ಒಡೆತನದ ಸಂಸ್ಥೆಯಾಗಿದ್ದರೂ ಕಾನೂನುಗಳನ್ನು ಗಾಳಿಗೆ ತೂರಿ ಕಾಯಂ ಸ್ವರೂಪದ ಕೆಲಸಗಳನ್ನು ಗುತ್ತಿಗೆ ಕಾರ್ಮಿಕರ ಮೂಲಕ ಮಾಡಿಸುತ್ತಿದೆ. ಮಾತ್ರವಲ್ಲ ಕಾರ್ಮಿಕರಿಗೆ ದೊರಕಬೇಕಾದ ಕನಿಷ್ಟ ವೇತನ, ಭವಿಷ್ಯ ನಿಧಿ, ವಿಮಾ ಹಾಗೂ ರಜಾ ಸೌಲಭ್ಯಗಳನ್ನು ನಿರಾಕರಿಸುತ್ತಿರುವ ಗುತ್ತಿಗೆದಾರರ ವಿರುದ್ದ ಯಾವುದೇ ಕ್ರಮ ಕೈಗೊಳ್ಳದೇ ಮೂಲ ಮಾಲೀಕನಾಗಿ ತನ್ನ ಜವಾಬ್ದಾರಿಯಿಂದ ನುಣಚಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮಹೇಶ ಪತ್ತಾರ ಪ್ರಸ್ತಾವಿಕವಾಗಿ ಮಾತನಾಡಿದರು, ಬಿ.ಎಸ್.ಎನ್.ಎಲ್ ನೌಕರರ ಸಂಘದ ಮುಖಂಡರಾದ ಹರೀಶ ದೊಡ್ಡಮನಿ, ಉದಯ ಜರಿಮಲ್ಲಿ, ಸಿಐಟಿಯು ಅಧ್ಯಕ್ಷರಾದ ಬಿ.ಐ.ಈಳಿಗೇರ, ಜಂಟಿ ಕಾರ್ಯದರ್ಶಿ ಪ್ರವೀಣ ಬಡಿಗೇರ, ಜಿ.ಜಿ.ಪಾಟೀಲ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಿಐಟಿಯು ಜಿಲ್ಲಾ ಗೌರವಾಧ್ಯಕ್ಷರಾದ ಆರ್.ಎಚ್.ಆಯಿ ಅಧ್ಯಕ್ಷತೆ ವಹಿಸಿದ್ದರು. ರಫಿಕ ಗುಡುನಾಯ್ಕರ ಸ್ವಾಗತಿಸಿದರು. ವಿಜಯಕುಮಾರ ಬೆನ್ನೂರ ವಂದಿಸಿದರು. ಸಮ್ಮೇಳನದಲ್ಲಿ ಧಾರವಾಡ, ಹಾವೇರಿ, ಗದಗ ಜಿಲ್ಲೆಯ ನೂರಾರು ಗುತ್ತಿಗೆ ಕಾರ್ಮಿಕರು ಭಾಗವಹಿಸಿದ್ದರು.

ನೂತನ ಪದಾಧಿಕಾರಿಗಳ ಆಯ್ಕೆ: ಕರ್ನಾಟಕ ರಾಜ್ಯ ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್‌ನ ಧಾರವಾಡ ಜಿಲ್ಲಾ ಸಮಿತಿಗೆ ಸಮ್ಮೇಳನದ ಪ್ರತಿನಿಧಿ ಅಧಿವೇಶನ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು.

ಅಧ್ಯಕ್ಷರಾಗಿ ಉದಯ ಜರಿ ಪ್ರಧಾನ ಕಾರ್ಯದರ್ಶಿಯಾಗಿ ಮ ಪತ್ತಾರ, ಉಪಾಧ್ಯಕ್ಷರಾಗಿ ಸಂತ ಬನ್ನಿಕೊಪ್ಪ, ಶಂಕರಪ್ಪ ಗ ಸಂಘಟನಾ ಕಾರ್ಯದರ್ಶಿ ರಫೀಕ್ ಗುಡುನಾಯ್ಕರ, ವಿಜಯಕು ಬೆನ್ನೂರ, ಸಹಕಾರ್ಯದರ್ಶಿ ಯಶವಂತ, ಹುಸೇನಸಾಬ ತಹಶೀ ಖಜಾಂಚಿಯಾಗಿ ರಾಜು ಕೊಟಗಿ ಹ 7 ಜನ ಕಾರ್ಯಕಾರಿ ಸಮಿತಿಗೆ ಮಾಡಲಾಯಿತು.

– ಮಹೇಶ

ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರ

ಅಂಕೋಲಾ : ಬೇಲೇಕೇರಿ ಹಮಾಲಿ ಕಾರ್ಮಿಕರ ಸಂಘ (ಸಿ.ಐ.ಟಿ.ಯು.)ದ ವತಿಯಿಂದ ಸೆ. 22ರಂದು ಬೇಲೆಕೇರಿ ಸೀಬರ್ಡ ಕಾಲೋನಿ ಗಣಪತಿ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಮಾಲಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ವಿದ್ಯಾರ್ಥಿ ವೇತನ ವಿತರಣಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿಯವರು ಆಗಮಿಸಿದ್ದರು. ಅವರು ಮಾತನಾಡಿ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಸ್ವಾ ಹೋರಾಗಾರರು, ಭಗತಸಿಂಗ್‌ರ ಕ್ರಾಂತಿಕಾರಿ ಹೋರಾಟಗಾರರ ಬಗ್ಗೆ ತಿಳಿದುಕೊಳ್ಳಬೇಕೆಂದರು.

ಅತಿಥಿಗಳಾಗಿ ರೈತ ಸಂಘದ ಕಾರ್ಯದರ್ಶಿ ಶಾಂತಾರಾಮ ನಾ ತಾ. ಸಮಿತಿ ಅಧ್ಯಕ್ಷ ಗೌರೀಶ ನಾ ಹಾಜರಿದ್ದರು. ಅಧ್ಯಕ್ಷತೆಯನ್ನು ದಿನೇಶ ವಹಿಸಿದ್ದರು. ಕಾರ್ಯದರ್ಶಿ ನಾಗೇಶ ಸ್ವಾಗತ ಕೋರಿ ಕಾರ್ಯಕ್ರಮ ನಿರ್ವಹಿಸಿ ಖಜಾಂಚಿ ಭರತ ಗೌಡ ವಂದಿಸಿದರು.



ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹಂಚು ಕಾರ್ಮಿಕರು ಹೋರಾಟ ಮಾಡಲು ಕರೆ

29-09-2013ರಂದು ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 13ನೇ ವಾರ್ಷಿಕ ಮಹಾಸಭೆಯು ವಿ. ನರಸಿಂಹನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಧಾನ ಕಾರ್ಯದಶಿ ಕೆ. ಶಂಕರ್‌ರವರು ಕಳೆದ ಒಂದು ವರ್ಷದ ಚಟುವಟಿಕೆಗಳ ಲಿಖಿತ ವರದಿಯನ್ನು ಮಂಡಿಸಿದರು. ಲೆಕ್ಕಪತ್ರದ ವರದಿಯನ್ನು ಕೋಶಾಧಿಕಾರಿಯಾದ ಎಚ್. ನರಸಿಂಹನವರು ತಿಳಿಸಿದರು. ವರದಿ ಮತ್ತು ಲೆಕ್ಕಪತ್ರದ ಕುರಿತು ಚರ್ಚೆ ನಡೆದು ಅನಂತರ ಅಂಗೀಕರಿಸಲಾಯಿತು.

ಸಿಐಟಿಯುವಿನ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿಯವರು ಅತಿಥಿಯಾಗಿ ಪಾಲ್ಗೊಂಡು ಜಿಲ್ಲಾ ಸಮಿತಿಯ ಪರವಾಗಿ ಶುಭ ಕೋರುತ್ತಾ ಹಂಚು ಕಾರ್ಮಿಕರ ಸಂಘಟನೆಯ-ಧೀರ



ಹೋರಾಟ, ರೈತ – ಕೃಷಿ ಕೂಲಿ ಸಂಘಟನೆಯಲ್ಲಿ ಅವರ ನಿರ್ಣ ಪಾತ್ರವನ್ನು ಸ್ಮರಿಸುತ್ತಾ, ಆರ್ಥಿಕ ಬೇಡಿ ಜೊತೆಯಲ್ಲಿ, ಸಾಮಾಜಿಕ ಮತ್ತು ರಾಜ ಬೇಡಿಕೆಗಳಿಗಾಗಿ ಹೋರಾಡುತ್ತಾ ಸರ ಕಾರ್ಮಿಕ ವಿರೋಧಿ ನೀತಿಯ ವ ಸಂಘಟನಾತ್ಮಕ ಹೋರಾಟವನ್ನು ನಡ ಕರೆ ನೀಡಿದರು.

ರೈತ ಕೃಷಿ ಕೂಲಿಕಾರರ ಮುಖಂಡ ಯು. ದಾಸ ಭಂಡಾರಿ, ರಾಜು ಪಡುಕೆ ಮತ್ತು ಸಿಪಿಐ(ಎಂ) ಪಕ್ಷದ ತಾ ಕಾರ್ಯದರ್ಶಿಯವರಾದ ಮಹ ವಡೇರಹೋಬಳಿಯವರು ಮಹಾ ಶುಭ ಕೋರಿ ಮಾತನಾಡಿದರು.

ಇ.ಎಸ್.ಐ ಕುಂದಾಪುರ ಡಿಸ್ಪೆನ್ಸ

ಪುಟ

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಿಜೆಪಿ ಮುಖಂಡರ ಎರಡು ನಾಲಗೆಗಳ ಪರಂಪರೆಯ ಘೋಷಣೆ:

'ಮೊದಲು ಶೌಚಾಲಯ, ಆಮೇಲೆ ದೇವಾಲಯ'!

. ಸೀತಾರಾಂ ಯೆಚೂರಿ

"ಮಂದಿರ ಅಲ್ಲೇ ಕಟ್ಟುತ್ತೇವೆ" ಎಂಬ 'ರಥಯಾತ್ರೆ'ಯ ಘೋಷಣೆ ನೆನಪಿದೆಯೇ? ಮಂದಿರ ಕಟ್ಟಲು ಮಸೀದಿ ಕೆಡವಿದ ದಿನದಿಂದ ಇಂದಿನ ವರೆಗೂ ಆ ಘೋಷಣೆ ಕೊಟ್ಟ ವ್ಯಕ್ತಿ 'ಅದು ನನ್ನ ಜೀವನದ ಅತ್ಯಂತ ಬೇಸರದ ದಿನ' ಎಂದು ಬೇಸರ ತರಿಸುವಷ್ಟು ಬಾರಿ ಪುನರುಚ್ಚರಿಸುತ್ತಿರುವುದೂ ಮರೆಯಲಾರದ ಸಂಗತಿ. ಅಂತವರೊಂದಿಗೆ ಎದುರಾಳಿಯ ಸಂಬಂಧ ಹೊಂದಿರುವ ಬಿಜೆಪಿಯ ಪ್ರಸಕ್ತ ಪ್ರಧಾನಿ ಪಟ್ಟದ ಆಕಾಂಕ್ಷಿ ಹೇಗೆ ತಾನೆ ಹಿಂದೆ ಬೀಳಲು ಸಾಧ್ಯ? ಆದ್ದರಿಂದಲೇ ಬಿಜೆಪಿ ಮುಖಂಡರ ಎರಡು ನಾಲಗೆಯ ಪರಂಪರೆಯನ್ನು ಮುಂದುವರೆಸಿದ ಈ ಘೋಷಣೆ. ಆದರೆ ಇಂತಹ ವಂಚಕತನವನ್ನು ಈ ಆಕಾಂಕ್ಷಿಗೆ ಭಾರತದ ಕಾರ್ಪೊರೇಟ್ ವಲಯದ ಕೆಲ ವಿಭಾಗಗಳಿಂದ ಸಿಗುತ್ತಿರುವ ಬೆಂಬಲದ ಅಬ್ಬರದ ಪಕ್ಕದಲ್ಲಿಟ್ಟು ನೋಡಬೇಕು. ಅದೂ ಕೂಡ ಎರಡು ಭಾರತಗಳ ಕಂದರ ಹೆಚ್ಚುತ್ತಿರುವುದು ಮತ್ತೆ-ಮತ್ತೆ ದೃಢಪಡುತ್ತಿರುವ ಹಿನ್ನೆಲೆಯಲ್ಲಿ.



ನೀವೇನ್ ಹೇಳ್ತಿದೀರಾ? ನಾವು ಇಷ್ಟು ದೂರ, ಇಷ್ಟೊಂದು ಇಟ್ಟಿಗೆಗಳನ್ನು ತಂದದ್ದು ದೇವಾಲಯ ಕಟ್ಟಲಿಕ್ಕಲ್ಲ, ಶೌಚಾಲಯ ಕಟ್ಟಲಿಕ್ಕೇನು?
'ಟೈಂಸ್ ಆಫ್ ಇಂಡಿಯಾ'ದಲ್ಲಿ ಸೈನನ್ ವ್ಯಂಗ್ಯ

ಎರಡೆರಡು ನಾಲಗೆಯಲ್ಲಿ ಮಾತಾಡುವುದು ಆರೆಸ್ಸೆಸ್/ ಬಿಜೆಪಿ ಮುಖಂಡರುಗಳ ವರ್ತನೆಯ ಒಂದು ಹೆಗ್ಗುರುತು. ನಿಜ, ಅಂತಹ ವಂಚನೆಯ ವರ್ತನೆಗೆ ಆಶ್ಚರ್ಯ ಪಡಬೇಕಾಗಿಲ್ಲ. ಬಾಬ್ರಿ ಮಸೀದಿಯ ಧ್ವಂಸದ ಮೊದಲು ಎಲ್.ಕೆ. ಅಡ್ವಾಣಿಯವರು ಕೈಗೊಂಡ ಕುಖ್ಯಾತ 'ರಥಯಾತ್ರೆ'ಯ ಸಂದರ್ಭದಲ್ಲಿ ಅವರ ಉದ್ರೇಕಕಾರಿ ಉದ್ಗಾರಗಳನ್ನು, ಘೋಷಣೆಗಳನ್ನು ನೆನಪಿಸಿಕೊಳ್ಳಿ. 'ಮಂದಿರ್ ವಹೀಂ ಬನಾಯೇಂಗೆ'(ಮಂದಿರ ಅಲ್ಲೇ ಕಟ್ಟುತ್ತೇವೆ) ಎಂದು ತಮ್ಮ ಕುಖ್ಯಾತ ರಥ ಹೋದಲ್ಲೆಲ್ಲಾ ಅವರು ಗುಡುಗುತ್ತಿದ್ದರು. ಅದು ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದರೆ ಮಾತ್ರ ಸಾಧ್ಯ ಎಂದು ಎಲ್ಲರಿಗೂ ಗೊತ್ತು. ಅಂದರೆ ಪರೋಕ್ಷವಾಗಿ ಅವರು ನೂರಾರು ವರ್ಷಗಳಷ್ಟು ಹಳೆಯದಾದ ಬಾಬ್ರಿ ಮಸೀದಿಯನ್ನು ಧ್ವಂಸಮಾಡಲು ಜನಗಳನ್ನು ಉದ್ರೇಕಿಸುತ್ತಿದ್ದರು. ಆದರೆ ಅದನ್ನು ಧ್ವಂಸ ಮಾಡಿದ ಡಿಸೆಂಬರ್ 6, 1992ರಿಂದ ಹಿಡಿದು ಇಂದಿನ ವರೆಗೂ ಬೇಸರ ತರಿಸುವಷ್ಟು ಬಾರಿ ಅವರು ಹೇಳಿರುವುದು, ಹೇಳುತ್ತಿರುವುದು– 'ಅದು ನನ್ನ ಬದುಕಿನ ಅತ್ಯಂತ ಬೇಸರದ ದಿನ'! ತಮಾಷೆಯೆಂದರೆ, ತಮ್ಮ ಕುಖ್ಯಾತ 'ರಥಯಾತ್ರೆ'ಯನ್ನು ಆರಂಭಿಸುವ ಮೊದಲು ಅವರು ಜಾತ್ಯಾತೀತತೆಯ ಮೇಲೆ ರಾಷ್ಟ್ರೀಯ ಚರ್ಚೆ ನಡೆಯಲಿ ಎಂದು ಕರೆ ಕೊಟ್ಟಿದ್ದರು.

ಹೀಗಿರುವಾಗ ಆರೆಸ್ಸೆಸ್/ಬಿಜೆಪಿಯ ಪ್ರಸಕ್ತ ಪ್ರಧಾನ ಮಂತ್ರಿ ಪಟ್ಟದ ಆಕಾಂಕ್ಷಿ ಹೇಗೆ ತಾನೆ ಹಿಂದೆ ಬೀಳಲು ಸಾಧ್ಯ? ಅದೂ ಅಡ್ವಾಣಿಯವರೊಂದಿಗೆ ಎದುರಾಳಿಯ ಸಂಬಂಧ ಹೊಂದಿರುವಾಗ! ಎರಡು ನಾಲಗೆಯಲ್ಲಿ ಮಾತಾಡುವ ಕಲೆಯನ್ನು ಪರಿಪೂರ್ಣಗೊಳಿಸುವುದರಲ್ಲಿ ಆತ ತೇಜಡಗಿದ್ದಾರೆ. ಗುಜರಾತಿನಲ್ಲಿ 2002ರಲ್ಲಿ ಕೋಮು ಹತ್ಯಾಕಾಂಡದ ಮೇಲುಸ್ತುವಾರಿ ನಡೆಸಿದ ನಂತರ ಇತ್ತೀಚೆಗೆ ದಿಲ್ಲಿಯಲ್ಲಿ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಅವರು ಸಾರಿದರು–"ಪಹಲೇ ಶೌಚಾಲಯ್, ಫಿರ್ ದೇವಾಲಯ್"(ಮೊದಲು ಶೌಚಾಲಯ, ಆಮೇಲೆ ದೇವಾಲಯ')! ಈ ವರ್ಷದ ಎಪ್ರಿಲ್‌ನಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಿ ಜೈರಾಂ ರಮೇಶ್ ಮಾಡಿದ್ದ ಟಿಪ್ಪಣಿಯ ಪ್ರತಿಧ್ವನಿ ಇದು.

'ಚೈತನ್ಯಶೀಲ ಗುಜರಾತ್' ಅಬ್ಬರ ಠುಸ್ಸಾದಾಗ

ಅದೇನೇ ಇರಲಿ, ಇಂತಹ ಹೇಳಿಕೆಗಳನ್ನು ಬಾಯಿ ತುಂಬಾ ಹೊಗಳ ಬಹುದಿತ್ತು. ಆದರೇನು ಮಾಡುವುದು, ಬಿಜೆಪಿಯ ಮುಖಂಡತ್ವದಲ್ಲಿ ಇರುವ ಗುಜರಾತಿನ ನೈರ್ಮಲ್ಯದ ಶೋಚನೀಯ ದಾಖಲೆ ಅದಕ್ಕೂ ಅವಕಾಶ ಕೊಡುತ್ತಿಲ್ಲ. ಭಾರತದ ಗ್ರಾಮೀಣ ಅಭಿವೃದ್ಧಿ ವರದಿ 2012–13ರ ಪ್ರಕಾರ ದೇಶದಲ್ಲಿ ಪ್ರತಿ ಐದು ಗ್ರಾಮೀಣ ಕುಟುಂಬಗಳಲ್ಲಿ ಒಂದರಲ್ಲಿ ಕುಡಿಯುವ ನೀರು, ನೈರ್ಮಲ್ಯ ಮತ್ತು ವಿದ್ಯುತ್ ಈ ಮೂರು ಮೂಲಭೂತ ಸೌಲಭ್ಯಗಳಲ್ಲಿ ಒಂದೂ ಲಭ್ಯವಿಲ್ಲ. ಈ ಮೂರೂ ಸೌಲಭ್ಯಗಳನ್ನು ಹೊಂದಿರುವ ಕುಟುಂಬಗಳ ಪ್ರಮಾಣ ಸುಮಾರು 18ಶೇ. ಮಾತ್ರ, ಗುಜರಾತಿನ ಪರಿಸ್ಥಿತಿ ಉತ್ತಮವೇನಲ್ಲ. ಅಲ್ಲಿ ಕಾಲು ಭಾಗ ಕುಟುಂಬಗಳಷ್ಟೇ ಈ ಮೂರೂ ಸೌಲಭ್ಯಗಳನ್ನು ಹೊಂದಿವೆ. ಕೇರಳದಲ್ಲಿ 71 ಶೇ. ಕುಟುಂಬಗಳಿಗೆ ಈ ಮೂರೂ ಸೌಲಭ್ಯಗಳು ಇವೆ. ಇನ್ನೂ 13 ರಾಜ್ಯಗಳು ಈ ವಿಷಯದಲ್ಲಿ ಗುಜರಾತ್‌ಗಿಂತ ಮೇಲಿನ ಉತ್ತಮ ಸ್ಥಾನದಲ್ಲಿವೆ.

ಮಲತೆಗೆಯುವ ಸಮುದಾಯದ ಹಕ್ಕುಗಳಿಗಾಗಿ ಹೋರಾಡುವ 'ಮಾನವ್ ಗರಿಮಾ'(ಮಾನವ ಘನತೆ) ಎಂಬ ಸಂಘಟನೆ ಇತ್ತೀಚೆಗೆ ಒಂದು ಸರ್ವೆ ನಡೆಸಿತು. ಅಹಮದಾಬಾದ್ ಮಹಾನಗರಪಾಲಿಕೆಯ ಅಡಿಯಲ್ಲಿ 126 ಸ್ಥಳಗಳಲ್ಲಿ ಈಗಲೂ ಕೈಯಿಂದಲೇ ಮಲ ತೆಗೆಯುವ ಪದ್ಧತಿ ಆಚರಣೆಯಲ್ಲಿದೆ ಎಂದು ಅದರಲ್ಲಿ ಕಂಡು ಬಂದಿದೆ. 1993ರ ಕಾಯ್ದೆ ಇದನ್ನು ಶಿಕ್ಷಾರ್ಹಗೊಳಿಸಿದ್ದರೂ, ಅದನ್ನು ಉಲ್ಲಂಘಿಸಿ ಇದು ಮುಂದುವರೆದಿದೆ. ರಾಷ್ಟ್ರೀಯ ಮಾನವ ಹಕ್ಕು ಆಯೋಗ ಈ ಬಗ್ಗೆ ಕೇಳಿದಾಗ ಗುಜರಾತ್ ಸರಕಾರ 1993ರ ಕಾಯ್ದೆಯ ಪರಿಣಾಮಕಾರಿ ಪಾಲನೆಯನ್ನು ಗಂಭೀರವಾಗಿ ತೆಗೆದುಕೊಂಡಿದೆ, ಗುಜರಾತಿನಲ್ಲಿ ಕೈಯಿಂದ ಮಲತೆಗೆಯುವ ಪದ್ಧತಿ ಇಲ್ಲ(!) ಎಂದು ಹೇಳಿದೆ. ಈ ಸಂಗತಿ ಗುಜರಾತಿನ ಮುಖ್ಯಮಂತ್ರಿಗಳ ಟಿಪ್ಪಣಿ ಎಷ್ಟು ಟೊಳ್ಳು ಎಂಬುದನ್ನು ಮತ್ತು ಆತನ ಇಬ್ಬಂದಿತನವನ್ನು ಎತ್ತಿ ತೋರಿಸುತ್ತದೆ. ಏಕೆಂದರೆ ಆಕ್ರಮಣಕಾರಿ ಹಿಂದುತ್ವವನ್ನು ಮತ್ತು ಅದರ ಕಟ್ಟಾ ಅಜೆಂಡಾವನ್ನು ಅನುಸರಿಸುವುದು ಆತನ ಘೋಷಿತ ಗುರಿ.

"ಚೈತನ್ಯಶೀಲ ಗುಜರಾತ್" ಎಂಬ ಆರೆಸ್ಸೆಸ್/ಬಿಜೆಪಿ ಪ್ರಚಾರದ ಅಬ್ಬರ ಠುಸ್ಸಾಗಿದೆ. ಏಕೆಂದರೆ ಎಲ್ಲ ಮಾನವ ಅಭಿವೃದ್ಧಿ ಸೂಚ್ಯಂಕಗಳೂ ಅದು ರಾಷ್ಟ್ರೀಯ ಸರಾಸರಿಗಿಂತಲೂ ಬಹಳ ಕೆಳಗಿದೆ ಎಂಬುದನ್ನೇ ತೋರಿಸುತ್ತವೆ. ಈ ಅಂಕಣದಲ್ಲಿ ಕಳೆದ ವಾರ ಗಮನಿಸಿದಂತೆ ಈ 'ಗುಜರಾತ್ ಮಾದರಿ' ಎಂಬುದು ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್‌ರವರ ನೇತೃತ್ವದ "ರಾಜ್ಯಗಳ ಒಂದು ಸಂಯುಕ್ತ ಅಭಿವೃದ್ಧಿ ಸೂಚ್ಯಂಕ ರೂಪೀಕರಣ ಸಮಿತಿ'ಯ ಇತ್ತೀಚಿನ ವರದಿಯಿಂದಾಗಿ ಧ್ವಂಸಗೊಂಡಿದೆ. ಇದೀಗ ಬಿಜೆಪಿ ಆಳ್ವಿಕೆಯಲ್ಲಿ ಗುಜರಾತಿನ 'ಚೈತನ್ಯಶೀಲತೆ'ಯ ಪರಿ!

ಆರೆಸ್ಸೆಸ್/ಬಿಜೆಪಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಇಂತಹುದೇ ಹೇಳಿಕೆಯ ವಿರುದ್ಧ ಅವರ ನಿವಾಸದೆದುರು ಪ್ರತಿಭಟನಾ ಕ್ರಮಗಳನ್ನು ಕೈಗೊಂಡಿದ್ದವು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಂತಹ ಹೇಳಿಕೆಗಳು "ಧರ್ಮ ಮತ್ತು ನಂಬಿಕೆಯ ಸುಂದರ ಹಂದರವನ್ನು ಧ್ವಂಸ ಮಾಡುತ್ತವೆ" ಎಂದು ಬಿಜೆಪಿ ವಕ್ತಾರರು ಆಗ ಹೇಳಿದ್ದರು. ನಿರೀಕ್ಷೆಯಂತೆಯೇ, ವಿಹೆಚ್‌ಪಿ ಮುಖಂಡ ಪ್ರವೀಣ್ ತೊಗಾಡಿಯ ಗುಜರಾತಿನ ಮುಖ್ಯಮಂತ್ರಿಗಳ ಈ 'ಶೌಚಾಲಯ/ದೇವಾಲಯ' ಟಿಪ್ಪಣಿಗೆ ತಕ್ಷಣವೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ, ಇದು ಹಿಂದೂ ಸಮಾಜಕ್ಕೇ ಮಾಡಿರುವ ಅಪಮಾನವಲ್ಲದೆ ಬೇರೇನೂ ಅಲ್ಲ ಎಂದಿದ್ದಾರೆ. "ದೇವಾಲಯಗಳ ಅನಗತ್ಯ ಪ್ರಸ್ತಾಪವನ್ನು ಕೇಳಿ ನಾವು ಅವಾಕ್ಕಾಗಿದ್ದೇವೆ, ಆಘಾತಗೊಂಡಿದ್ದೇವೆ..... ನಮಗೂ ಉತ್ತಮ ನೈರ್ಮಲ್ಯ ಅಗತ್ಯ ಎಂಬ ನಂಬಿಕೆ ಇದೆ. ಆದರೆ ಅದರಲ್ಲಿ ದೇವಾಲಯಗಳನ್ನು ಎಳೆದು ತರುವ ಅಗತ್ಯವೇನಿರಲಿಲ್ಲ" ಎಂದು ಅವರು ಹೇಳಿದ್ದಾರೆ. ಕೇಂದ್ರ ಮಂತ್ರಿಗಳ ವಿರುದ್ಧ ಪ್ರತಿಭಟನೆಯನ್ನು ನೆನಪಿಸಿಕೊಳ್ಳುತ್ತ "ಬಿಜೆಪಿ ಮತ್ತೊಮ್ಮೆ ಎದ್ದು ನಿಂತು ತನ್ನ ಸ್ವಂತ ಪ್ರಧಾನ ಮಂತ್ರಿ ಅಭ್ಯರ್ಥಿಯ ಹೇಳಿಕೆಯನ್ನು ಖಂಡಿಸುತ್ತದೆ ಎಂಬ ನಿರೀಕ್ಷೆ ನಮ್ಮದು" ಎಂದಿದ್ದಾರೆ.

ಕಾರ್ಪೊರೇಟ್ ಬೆಂಬಲದ ಅಬ್ಬರ ಮತ್ತು ಎರಡು ಭಾರತಗಳ ಕಂದರ

ಇಂತಹ ವಂಚಕತನವನ್ನು ಈ ಪ್ರಧಾನಿ ಪಟ್ಟದ ಆಕಾಂಕ್ಷಿಗೆ ಭಾರತದ ಕಾರ್ಪೊರೇಟ್ ವಲಯದ ಕೆಲ ವಿಭಾಗಗಳಿಂದ ಸಿಗುತ್ತಿರುವ ಬೆಂಬಲದ ಅಬ್ಬರದ ಪಕ್ಕದಲ್ಲಿಟ್ಟು ನೋಡಬೇಕು. ಈತ ಯಾವುದೇ ನಾಚಿಕೆಯಿಲ್ಲದೆ ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ಅಜೆಂಡಾವನ್ನು ಆಕ್ರಾಮಕವಾಗಿ ಮುಂದೊಯ್ಯುವ ವ್ಯಕ್ತಿ ಎಂದವರು ಬಿಂಬಿಸುತ್ತಿದ್ದಾರೆ. "ಹೊಳೆಯುತ್ತಿರುವ ಭಾರತ"ದ ಮತ್ತು 'ಒಳಿತಿನ ಭಾವದ ಅಂಶ'ದ ಭ್ರಮೆಯನ್ನು ಬಿತ್ತಿದ್ದು ಎ ಬಿ ವಾಜಪೇಯಿಯವರ ಅಡಿಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಎಂಬುದನ್ನು ನೆನಪಿಸಿಕೊಳ್ಳಿ. ಹೀಗೆ ಎರಡು ಭಾರತಗಳ ನಿರ್ಮಾಣವನ್ನು ಮತ್ತು ಅವುಗಳ ನಡುವೆ ಹೆಚ್ಚುತ್ತಲೇ ಇರುವ ಕಂದರವನ್ನು ಕ್ರೋಡೀಕರಿಸಿದವರು ಇವರು. ಸಿರಿವಂತರನ್ನು ಸಿರಿವಂತರಾಗಿಸುವ ಬಡವರನ್ನು ದರಿದ್ರರಾಗಿಸುವ ಈ ಪ್ರಕ್ರಿಯೆ ವರ್ಷ ಕಳೆದಂತೆ ಇನ್ನಷ್ಟು ಬಲಗೊಂಡಿದೆ.

ಇದನ್ನು ಮಾಧ್ಯಮಗಳಲ್ಲಿ ಸಪ್ಟಂಬರ್ 2013 ರಲ್ಲಿ ಅದೇ ದಿನ ಪ್ರಕಟಗೊಂಡ ಎರಡು ಸುದ್ದಿಗಳು ದೃಢಪಡಿಸಿವೆ. ಮೊದಲಿನದ್ದು ಜಾಗತಿಕ ಸಂಪತ್ತು ಮತ್ತು ಹೂಡಿಕೆಯ ವರದಿ ಕುರಿತ ಸುದ್ದಿ. ಉನ್ನತ ನಿವ್ವಳ ಮೌಲ್ಯದ ವ್ಯಕ್ತಿ(ಹೆಚ್‌ಎನ್‌ಐ)ಗಳ ಎರಡನೇ ಅತ್ಯಂತ ಹೆಚ್ಚಳವನ್ನು ದಾಖಲಿಸಿದ್ದು ಭಾರತ ಎನ್ನುತ್ತದೆ ಆ ಸುದ್ದಿ. 2012ರಲ್ಲಿ ಒಂದು ಮಿಲಿಯ ಡಾಲರುಗಳಿಗಿಂತ ಅಥವ 6ಕೋಟಿ ರೂ.ಗಳಿಗಿಂತ ಹೆಚ್ಚಿನ ಹೂಡಿಕೆ ಆಸ್ತಿ ಇರುವ ಇಂತಹ ಹೆಚ್‌ಎನ್‌ಐ ವ್ಯಕ್ತಿಗಳ ಸಂಖ್ಯೆಯಲ್ಲಿ 22.2ಶೇ. ಹೆಚ್ಚಳವಾಗಿದೆಯಂತೆ, ಮತ್ತು ಅವರ ಸಂಪತ್ತಿನಲ್ಲಿ 23.4ಶೇ. ಹೆಚ್ಚಳವಾಗಿದೆಯಂತೆ! ಈ 1,53,000 ಹೆಚ್‌ಎನ್‌ಐಗಳ ಒಟ್ಟು ಆಸ್ತಿ ಮೌಲ್ಯ 589 ಬಿಲಿಯ ಡಾಲರುಗಳು(ಸುಮಾರು 35 ಲಕ್ಷ ಕೋಟಿರೂ.ಗಳಿಗಿಂತಲೂ ಹೆಚ್ಚು). ಅಂದರೆ ನಮ್ಮ ಜನಸಂಖ್ಯೆಯ 0.001275 ಶೇ. ವ್ಯಕ್ತಿಗಳು ನಮ್ಮ ದೇಶದ ಒಟ್ಟು ಆಂತರಿಕ ಉತ್ಪನ್ನದ(ಜಿಡಿಪಿ) ಮೂರನೆ ಒಂದ–ರಿಂದ ಅರ್ಧದಷ್ಟು ಆಸ್ತಿಗಳನ್ನು ಹಿಡಿದು ಕೊಂಡಿದ್ದಾರೆ.!

ಎರಡನೇ ಸುದ್ದಿ– ಮೇಲೆ ಹೇಳಿದ ಅಖಿಲ ಭಾರತ ಗ್ರಾಮೀಣಾಭಿವೃದ್ಧಿ ವರದಿ ಕುರಿತದ್ದು. ಅದರ ಪ್ರಕಾರ ಕೃಷಿಯಲ್ಲಿ ಸ್ವ–ಉದ್ಯೋಗಿಗಳ, ಅಂದರೆ ಬೇಸಾಯಗಾರರ ಪ್ರಮಾಣ ಕುಂಠಿತಗೊಳ್ಳುತ್ತಿದೆ, ಬಹಳಷ್ಟು ಮಂದಿ ಬೇಸಾಯದ ಕೆಲಸ ಬಿಟ್ಟು ಇನ್ನೂ

ಪುಟ 15 ಕ್ಕೆ

ಪರ್ಯಾಯ ಧೋರಣೆಗಳಿಗಾಗಿ ಎಡ ಪಕ್ಷಗಳ ಅಭೂತಪೂರ್ವ ರ್ಯಾಲಿ

–ವರದಿ: ಎಸ್.ವೈ.ಗುರುಶಾಂತ್





ಅದು ಕರಾವಳಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ. ಉಡುಪಿ ಹತ್ತಿರದ ರಸ್ತೆ ಬದಿಯಲ್ಲೊಂದು ಕಟೌಟು! ಅದರಲ್ಲಿದೆ ಒಂದು ಕೊಳಲು, ಎರಡು ನವಿಲು ಗರಿಗಳು. ಪಕ್ಕದಲ್ಲೊಂದು ವಾಕ್ಯ . 'ಸಂಭವಾಮೀ ಯುಗೇ ಯುಗೇ'. ಇಷ್ಟು ಸಾಕಲ್ಲವೇ ಅದು ಕೃಷ್ಣನನ್ನು ನೆನಪಿಸಲು! ಆದರೆ ಅಲ್ಲಿ ಕನ್ನಯ್ಯನ ಭಾವಚಿತ್ರವಿಲ್ಲ! ಅಲ್ಲಿರುವುದು ಯಾರಿಗೋ ತಾಕೀತು ಮಾಡುತ್ತಿರುವ ನರೇಂದ್ರ ಮೋದಿ ಚಿತ್ರ. ಜನರ ಕಾಪಾಡಿದ ಕೃಷ್ಣನೆಲ್ಲಿ ? ನರಹಂತಕ ಮೋದಿಯೆಲ್ಲಿ? ಹೋಲಿಸುವಾಗಲೂ ಸಂಘಪರಿವಾರಕ್ಕೆ ನಾಚಿಕೆಯಾದರೂ ಬೇಡವೆ?

ಕೇಂದ್ರದಲ್ಲಿ ಬಹುಕಾಲ ಅಧಿಕಾರ ನಡೆಸಿದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಬಗ್ಗೆ ದೇಶದ ಜನತೆ ತೀರಾ ಭ್ರಮನಿರಸನ ಹೊಂದಿದ್ದಾರೆ. ಜನತೆಯ ಪ್ರತಿಕ್ರಿಯೆಗಳನ್ನು ಕಂಡ ಆ ಪಕ್ಷಗಳು ಹೇಗಾದರೂ ಮತ್ತೇ ಅಧಿಕಾರಕ್ಕೆ ಬರಲು ಹಲವಾರು ವಂಚನೆಗಳ ಹೊಸ ಆಟಗಳನ್ನು ಆಡುತ್ತಿವೆ. ಅದರಲ್ಲಿ ಒಂದೆಡೆ ಕಾಂಗ್ರೆಸ್‌ನ ವೈಫಲ್ಯಗಳನ್ನೇ ಬಳಸಿ ಅದಕ್ಕೆ ತಾನೇ ಪರ್ಯಾಯವೆಂದು ಬಿಜೆಪಿ, ಬಿಜೆಪಿಯ ಕೋಮುವಾದ, ದುರಾಡಳಿತಕ್ಕೆ ಕಾಂಗ್ರೆಸ್ ಪರ್ಯಾಯವೆಂದು ಬಿಂಬಿಸಲು ಹೆಣಗುತ್ತಿವೆ. ನಿರ್ದಿಷ್ಟ ನೀತಿ, ಕಾರ್ಯಕ್ರಮಗಳನ್ನು ಹೇಳಲಾಗದ ಅವು ವ್ಯಕ್ತಿಗಳ ಪರ್ಯಾಯವನ್ನು ಹೇಳುತ್ತಾ ಸಾಧನೆಯ ಹಸಿ ಸುಳ್ಳುಗಳ ಮೂಲಕ ಮತ್ತೇ ಜನರನ್ನು ತಮ್ಮ ಬಲೆಗೆ ಕೆಡವಲು ಯತ್ನಿಸುತ್ತಿವೆ.

ಅದರಲ್ಲೂ ಬಿಜೆಪಿಯಂತೂ ಗುಜರಾತ್‌ನ ನರೇಂದ್ರ ಮೋದಿಯನ್ನು ಅಭಿವೃದ್ಧಿಯ ಹರಿಕಾರನೆಂದು ಕಾರ್ಪೋರೇಟ್ ಕಂಪನಿಗಳ ಬೆಂಬಲದಿಂದ ಮಾಧ್ಯಮಗಳ ಮೂಲಕವೂ ಆಕ್ರಮಣಕಾರಿಯಾಗಿ ಪ್ರಚಾರಿಸುತ್ತಿದೆ. ಮತ್ತೊಂದೆಡೆ ಕಾಂಗ್ರೆಸ್ 'ಕೋಪಾವಿಷ್ಟ ಯುವಕ' ರಾಹುಲ ಗಾಂಧಿಯನ್ನೂ, ಬಣ್ಣ ಬಡಿದ ಯು.ಪಿ.ಎ–2ರ 'ಸಾಧನೆ'ಗಳನ್ನೂ ಬಿಂಬಿಸುತ್ತಿದೆ. ಜನದ್ರೋಹದಲ್ಲಿ ಒಂದೇ ರೀತಿ, ಒಂದೇ ನೀತಿಗಳಿರುವ ಇವರೆಲ್ಲಾ ಒಬ್ಬರಿಗೊಬ್ಬರು ತಾವೇ ಪರ್ಯಾಯವೆಂದು ಜನರ ಕಣ್ಣಿಗೆ ಮಣ್ಣೆರಚಲು ತಿಣುಕುತ್ತಿರುವಾಗ ಈ ಪಕ್ಷಗಳ ವರಸೆಗಳನ್ನು ಬಯಲಿಗೆಳೆದು ಪರ್ಯಾಯವೆಂಬುದು ಜನ ಸಾಮಾನ್ಯರ ಪರ ನೀತಿ–ಧೋರಣೆಗಳ ಆಧಾರದಲ್ಲಿರಬೇಕೆಂದು, ಅದು ಮಾತ್ರವೇ ನಿಜವಾದ ಪರ್ಯಾಯವಾಗುವುದೆಂದೂ, ಅದರ ಆಧಾರಿತ ರಾಜಕೀಯ ಪರ್ಯಾಯ ರೂಪಿಸಲು ದೇಶವ್ಯಾಪಿಯಾಗಿ ಎಡಪಕ್ಷಗಳು ಜನಜಾಗೃತಿಯ ಆಂದೋಲನವನ್ನು ನಡೆಸುತ್ತಿವೆ.



ಅದರಂತೆ ಈಗಾಗಲೇ ರಾಜ್ಯ ಮಟ್ಟದ ಸಮಾವೇಶ ಹಾಗೂ ಜಿಲ್ಲೆಗಳಲ್ಲಿಯೂ ಸಮಾವೇಶಗಳು ಮತ್ತು ರಾಜಕೀಯ ಜಾಗೃತಿ ಜಾಥಾಗಳು ನಡೆದಿದ್ದವು.



ಹರಿದು ಬಂದ ಜನಸಾಗರ

ಇದೇ 2013 ಅಕ್ಟೋಬರ್ 8 ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ರ್ಯಾಲಿ ಅಭೂತಪೂರ್ವ ಜನೋತ್ಸಾಹದ ಸ್ಪಂದನದ ಮೂಲಕ ಎಡ ಪಕ್ಷಗಳ ಮುತುವರ್ಜಿಗೆ ಬಲ ತುಂಬಿ ದಾಖಲೆ ಬರೆಯಿತು. ರಾಜಧಾನಿಯ 'ಸ್ವಾತಂತ್ರ್ಯ ಉದ್ಯಾನವನ' (ಫ್ರೀಡಂ ಪಾರ್ಕ್) ದಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ, ಅ.ಭಾ.ಫಾರ್ವರ್ಡ್ ಬ್ಲಾಕ್ ಪಕ್ಷಗಳು ಸಂಘಟಿಸಿದ ರ್ಯಾಲಿಯಲ್ಲಿ ನೆರೆದ ಹತ್ತಾರು ಸಾವಿರ ಜನ, ನಾಯಕರ ಪ್ರತಿ ಮಾತಿಗೂ ಕಣ್ಣು, ಕಿವಿಯಾಗಿ, ಧ್ವನಿಯಾಗಿ ಹೋದರು. ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಿಂದಲೂ ನಿದ್ದೆಯನ್ನು ಒದ್ದು ತೊರೆ ತೊರೆಯಾಗಿ ಹರಿದು ಬಂದು ರಾಜಕೀಯ ಸಂಕಲ್ಪದ ಸೆಲೆಯಾಗಿ, ನೆಲೆಯಾಗಿ ನಿಂತರು. ದೇಶಕ್ಕೆ ಇಂದು ಬೇಕಾಗಿರುವುದು ವ್ಯಕ್ತಿಗಳ ಪರ್ಯಾಯವಲ್ಲ. ಪಕ್ಷಗಳ ಪರ್ಯಾಯವೂ ಅಲ್ಲ. ದೇಶಕ್ಕೆ ಬೇಕಾಗಿರುವುದು ಧೋರಣೆಗಳ ಪರ್ಯಾಯ. ಜನ ಕೇಂದ್ರಿತ ಧೋರಣೆಗಳ ಪರ್ಯಾಯ. ಅದಕ್ಕಾಗಿಯೇ ನಮ್ಮ ಸಂಘರ್ಷ, ದುಡಿಯುವ ಜನರ ಸಂಘರ್ಷ ವೆಂದು ನಾಯಕರು ಹೇಳಿದಾಗಲಂತೂ ಭಾರೀ ಕರತಾಡನ, ಘೋಷಣೆಗಳ ಮೂಲಕ ಅಲ್ಲಿ ನೆರೆದಿದ್ದ ಜನಸ್ತೋಮ ಕರೆಯನ್ನು ಅಂಗೀಕರಿಸಿತು. ಅವರೆಲ್ಲಾ ಎಡ ಪಕ್ಷಗಳ ರಾಜಕೀಯ ಐಕ್ಯತೆಗೆ ಸಂಕೇತವಾದರು, ಸಾಕ್ಷಿಯಾದರು.

ಕೆಂಪು ಪೆಂಪಿನ ಅಲೆ

ಅಂದು ಬೆಳಿಗ್ಗೆ ನಿಗದಿಯಾದಂತೆ 11.15ಕ್ಕೆ ಮೆಜೆಸ್ಟಿಕ್‌ನ ಮುಖ್ಯ ರೈಲ್ವೇ ನಿಲ್ದಾಣದಿಂದ ಹೊರಟ ಮೆರವಣಿಗೆ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ವೃತ್ತದಿಂದ ಸಾಗುತ್ತಾ, 'ಗಾಂಧಿ' ನಗರದ ಫ್ಲೈಓವರ್ ಮೇಲಿಂದ ಹಾದು ಬಹಿರಂಗ ಸಭೆಯ 'ಸ್ವಾತಂತ್ರ್ಯ ಉದ್ಯಾನವನ' ಮೈದಾನ ತಲುಪಿತು. ಮೆರವಣಿಗೆಯಲ್ಲಿ ಸಾಗಿದವರು ಸ್ವ–ಯಂ ಸ್ಫೂರ್ತಿಯಿಂದಲೇ ಬಂದವರು. ಹಲವು ಸಂಕಷ್ಟಗಳಲ್ಲಿ ಬಳಲಿ, ಬೆಂಡಾದ ಶ್ರಮಜೀವಿಗಳು ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು, ಮಹಿಳೆಯರು, ಯುವಜನ–ವಿಧ್ಯಾರ್ಥಿಗಳು, ಹಮಾಲಿ, ದಿನಗೂಲಿ ಗುತ್ತಿಗೆ ಕಾರ್ಮಿಕರು, ತೋ[illegible] ಕಾರ್ಮಿಕರು, ಅಂಗನವಾಡಿ, ಬಿಸಿಯೂಟ, ಪಂಚಾಯತ್‌ನಂತಹ ಅಸಂಘಟಿತರು, ಮಧ್ಯಮ ವರ್ಗದ, ನೌಕರರು, ಬುದ್ಧಿಜೀವಿಗಳು, ದಲಿತರು, ಆದಿವಾಸಿಗಳು, ಹೀಗೆ ಈ ನೆಲದ ಮಕ್ಕಳು, ದುಡಿಯುವ ಜನ ಸಮೂಹವೇ ಇಲ್ಲಿ ಪ್ರಧಾನವಾಗಿದ್ದರು. ಎಲ್ಲರ ಕೈಗಳಲ್ಲೂ ಹಾರಾಡುತ್ತಿದ್ದ ಎಡ ಪಕ್ಷಗಳ ಬಾವುಟಗಳು, ಒಂದು ರೀತಿಯಲ್ಲಿ ಕೆಂಪು ನದಿ ಅಲೆ, ಅಲೆಯಾಗಿ ಹರಿಯುತ್ತಿರುವಂತೆ ಭಾಸವಾಗುತ್ತಿತ್ತು. ವಿವಿಧ ಜಿಲ್ಲೆಗಳ ಬ್ಯಾನರ್‌ಗಳು ವಿಶೇಷ ರಂಗು ತಂದಿದ್ದವು, ಐಕ್ಯತೆಯನ್ನು ಸಾರುತ್ತಿದ್ದವು.

ವಿಶಾಲವಾದ ಕೆಂಪು ಹಾಸಿನ ಎತ್ತರದ ವೇದಿಕೆಗೆ ನಾಯಕರನ್ನು ಆಹ್ವಾನಿಸುವ ಮೂಲಕ ಕಲಾಪಗಳಿಗೆ ಚಾಲನೆ ನೀಡಲಾಯಿತು. ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯೆ ಕಾಂ. ಬೃಂದಾ ಕಾರಟ್, ಸಿಪಿಐ ನ ಕಾರ್ಯದರ್ಶಿ, ಸಂಸದ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಎಡ ಪಕ್ಷಗಳದ್ದು ಜನಾಧಾರಿತ ಪರ್ಯಾಯ

-ಕಾಂ. ಬೃಂದಾ ಕಾರಾಟ್

"ದೇಶದಲ್ಲಿ ಎಡ ಪಕ್ಷಗಳು ಪರ್ಯಾಯ ನಿರ್ಮಿಸಲು ಪ್ರಯತ್ನಿಸುತ್ತಿವೆ. ಅದು ನಾಯಕರ ಆಧಾರಿತ ಪರ್ಯಾಯವಲ್ಲ, ಅದು ನೀತಿಗಳ ಪರ್ಯಾಯವಾಗಿದೆ" ಎಂದು ಸಿ.ಪಿ.ಐ.(ಎಂ)ನ ಪೋಲಿಟ್ ಬ್ಯೂರೋ ಸದಸ್ಯೆ ಕಾಂ.ಬೃಂದಾ ಕಾರಾಟ್‌ರವರು ನುಡಿದರು.

ಅವರು ಬೆಂಗಳೂರಿನಲ್ಲಿ ನಡೆದ ಎಡ ಪಕ್ಷಗಳ ರಾಜ್ಯ ಮಟ್ಟದ ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು.


"ಜನರು ರಾಜಕೀಯದ ಕೇಂದ್ರ ಸ್ಥಾನದಲ್ಲಿರಬೇಕು. ಕಾಂಗ್ರೆಸ್, ಬಿಜೆಪಿ, ಮತ್ತಿತರೆ ಪಕ್ಷಗಳು 'ಜನ' ರನ್ನು ನೋಡುವುದಿಲ್ಲ! ಅವಕ್ಕೆ ಏನಿದ್ದರೂ ಕಾಣೋದು 'ಧನ' ಮಾತ್ರ ಎಂದು ಬಲಪಂಥೀಯ ಪಕ್ಷಗಳ ರಾಜಕಾರಣವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಇತ್ತೀಚೆಗೆ ಬಿಸಿಯೂಟದ ಸಾಂಬಾರಿಗೆ ಬಿದ್ದು ಸಾವನ್ನಪ್ಪಿದ ಮಂಜುನಾಥನ ಪ್ರಸ್ತಾವನೆ ಮಾಡಿದ ಅವರು 'ಬಿಸಿಯೂಟದ ಕಾರ್ಯಕರ್ತರಿಗೆ ಸರಿಯಾದ ಸಂಬಳ ನೀಡಿದ್ದರೆ ಅವರು ತಮ್ಮ ಮಕ್ಕಳನ್ನು ಶಿಶು ಪಾಲನಾ ಕೇಂದ್ರಕ್ಕೆ ಕಳುಹಿಸುತ್ತಿದ್ದರು. ಆದರೆ ಅದಿಲ್ಲದ ಅವರು ಕೆಲಸದಲ್ಲಿ ಮಗ್ನಳಾಗಿದ್ದರಿಂದ ತಮ್ಮೊಂದಿಗೆ ಕರೆದು ತಂದಿದ್ದ ಮಗು ಸಾಯಬೇಕಾಯಿತು. ಇದು ಬರೀ ಒಂದು ಮನೆಯ ದುರಂತವಲ್ಲ, ಶ್ರಮಜೀವಿಗಳ ಕಲ್ಯಾಣಕ್ಕೆ ಹಣವಿಲ್ಲಾ ಎನ್ನುವ ಸರಕಾರದ್ದು ಇದರ ಹೊಣೆ' ಎಂದರು. ಇಂತಹದ್ದಕ್ಕೆ ಹಣ ಇಲ್ಲವೆನ್ನುವ ಸರಕಾರ ದೊಡ್ಡ ಕಂಪನಿಗಳಿಗೆ 5 ಲಕ್ಷಕ್ಕೂ ಮೀರಿದ ತೆರಿಗೆ ವಿನಾಯಿತಿ ನೀಡಿದೆ ಎಂದರು

'ಅಧಿಕಾರದಲ್ಲಿರುವ, ಹಾಗೂ ವಿರೋಧ ಪಕ್ಷಗಳಾಗಿರುವವರು ಬೂಟಾಟಿಕೆಯ ಪೈಪೋಟಿಯಲ್ಲಿ ತೊಡಗಿದ್ದಾರೆ. ಈ ಇಬ್ಬರೂ ಪೈಲ್ವಾನರು ಕುಸ್ತಿ ಹಿಡಿಯುವ ಮುನ್ನ ಹೊಂದಾಣಿಕೆ ಮಾಡಿಕೊಂಡಿರುತ್ತಾರೆ. ಇಂತಹ ಪಕ್ಷಗಳು, ಕಾರ್ಪೋರೇಟ್ ಕಂಪನಿಗಳ ರಾಜಕೀಯಕ್ಕೆ ಸವಾಲು ಹಾಕಲಾರವು. ಎಡ ಪಕ್ಷಗಳು ಅದನ್ನು ಮಾಡುತ್ತಿವೆ' ಎಂದರು.

'ನಮ್ಮದು ಪ್ರಜಾಪ್ರಭುತ್ವರಾಷ್ಟ್ರ. ಆದರೆ ನಮ್ಮ ನೀತಿಗಳು ನಿರ್ಧಾರವಾಗುವುದು ಇಲ್ಲಲ್ಲ! ಅದು ಅಮೇರಿಕಾದಲ್ಲಿ, ಅಲ್ಲಿನ ಹಣಕಾಸು ಸಂಸ್ಥೆಗಳ ಮೂಲಕವಾಗಿ. ಆಹಾರ ಭದ್ರತೆ ಕಾಯ್ದೆ ಅಂಗೀಕರಿಸಿದ ಬಳಿಕ ವಿಶ್ವ ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಆ ಕಾಯ್ದೆಯನ್ನು ತರಬಾದಿತ್ತು, ಅದು ನಮ್ಮ ಸಂಸ್ಥೆಯ ನಿಯಮಗಳಿಗೆ ವಿರೋಧ, ಅನುದಾನ ಎಂದು ಬೆದರಿಕೆ ಹಾಕುತ್ತಿದ್ದಾನೆ! ನಮ್ಮದು ಸಾರ್ವಭೌಮ ರಾಷ್ಟ್ರ ಎಂಬುದನ್ನು ಕಡೆಗಣಿಸಲಾಗುತ್ತಿದೆ. ಇದು ಖಂಡನೀಯವೆಂದರು.

ನಮ್ಮ ದೇಶದ ಗುದಾಮುಗಳಲ್ಲಿ 7ಕೋಟಿ ಟನ್ ಆಹಾರ ಧಾನ್ಯ ಕೊಳೆಯುತ್ತಿದೆ. ಆದರೆ ಅದನ್ನು ಬಡ ಜನರಿಗೆ ಹಂಚುತ್ತಿಲ್ಲ. ಎ.ಪಿ.ಎಲ್-ಬಿ.ಪಿ.ಎಲ್, ಹಳದಿ, ಹಸಿರು ಮುಂತಾದ ಕಾರ್ಡುಗಳ ಮೂಲಕ ಸಾರ್ವತ್ರಿಕ ರೇಷನ್ ವ್ಯವಸ್ಥೆಯನ್ನೆ ನಾಶ ಮಾಡಲಾಗುತ್ತಿದೆ. ಇದರ ಬದಲು



ಎಲ್ಲಾ ಕುಟುಂಬಗಳಿಗೂ, ಕಾರ್ಡ್‌ಗಳ ಬೇಧವಿಲ್ಲದೇ ಕನಿಷ್ಟ 35 ಕೆ.ಜಿ. ಅಕ್ಕಿಯನ್ನು ಕಡಿಮೆ ಬೆಲೆಗೆ ನೀಡಬೇಕೆಂದರು. ಆದರೆ ಇದಕ್ಕೆ ಯು.ಪಿ.ಎ. ಮತ್ತು ಎನ್.ಡಿ.ಎ. ಪಕ್ಷಗಳು ವಿರೋಧಿಸುತ್ತಿವೆ.

ಅವು ಬಡವರ, ದುಡಿಯುವವರ ಹೊಟ್ಟೆಯ ಮೇಲೆ ಹೊಡೆಯುತ್ತಿವೆ. ಬೆಲೆ



ಏರಿಕೆಯಿಂದಾಗಿ ವೇತನ ಕುಸಿತವಾಗಿ ಸಾಮಾನ್ಯ ಜನ ಅದರಲ್ಲೂ ಮಹಿಳೆಯರು ಸಂಕಷ್ಟ ಅನುಭವಿಸುತ್ತಾರೆ. ಆದ್ದರಿಂದ ಪರ್ಯಾಯ ನೀತಿಗಳು ಬೇಕು ಎಡರಂಗದ ಸರಕಾರವಿರುವ ತ್ರಿಪುರಾದಲ್ಲಿ . ಹಿಂದೆ ಕೇರಳ, ಪ.ಬಂಗಳದಲ್ಲಿ ಜನತೆಯನ್ನು ಉಳಿಸುವ ಸಾರ್ವತ್ರಿಕ ಪಡಿತರ ಪದ್ಧತಿಯನ್ನು ಜಾರಿಗೊಳಿಸಲಾಗಿದೆ. ನಾವು ಜನರನ್ನು ಯಾಮಾರಿಸುವ ರಾಜಕೀಯ ಮಾಡುವುದಿಲ್ಲ' ಎಂದರು.

ಅವರು ಮುಂದುವರಿದು ಮಾತನಾಡುತ್ತಾ ಆರೆಸ್ಸೆಸ್‌ನ ರಾಜಕೀಯದತ್ತ ಹೊರಳಿದರು. ಆರೆಸ್ಸೆಸ್ ತಾನೊಂದು ಸಾಂಸ್ಕೃತಿಕ ಸಂಘಟನೆ, ರಾಜಕೀಯಕ್ಕೆ ಹೋಗುವುದಿಲ್ಲ ಎಂದು ಹೇಳುತ್ತದೆ. ಆದರೆ ಅದು ಪ್ರ ಧಾನಿ ಅಭ್ಯರ್ಥಿಯನ್ನು ಆರಿಸುತ್ತದೆ. ಆರ್.ಎಸ್.ಎಸ್. ಎಂದರೆ 'ರಾಷ್ಟ್ರೀಯ ಸರ್ವನಾಶ ಸಮಿತಿ'. ಅದಕ್ಕೆ ಹತ್ತಾರು ತಲೆಗಳಿವೆ. ಅದರಲ್ಲಿ ಬಿ.ಜೆ.ಪಿ., ವಿ.ಹಿಂ.ಪ, ಬಜರಂಗದಳ, ಎ.ಬಿ.ವಿ.ಪಿ. ಹೀಗೆ ಇವೆ. ಇವರೆಲ್ಲಾ ಭಾರತವನ್ನೇ ಶೂನ್ಯ ಮಾಡಲು ಹೊರಟಿದ್ದಾರೆ. ಜನರನ್ನು ಧರ್ಮದ ಆಧಾರದಲ್ಲಿ ಒಡೆಯಲು ರಾಜಕೀಯ ಮಾಡಲಾಗುತ್ತಿದೆ. ನರೇಂದ್ರ ಮೋದಿಯನ್ನು ತೀರ್ಮಾನ ಮಾಡಿದವರು ಅವರೇ. ಆತ ಭಾರತವನ್ನು ಪ್ರತಿನಿಧಿಸಲಾರ, ಆತ ದ್ವೇಷದ ರಾಯಭಾರಿ. ಆತ ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಪ್ರತಿನಿಧಿಸಲಾರ. ಅವರ ಹಿಂದುತ್ವ ನಮ್ಮ ದೇಶದ ಬಹು ಮುಖಿ ಸಂಸ್ಕೃತಿಯನ್ನು ನಾಶಗೊಳಿಸುವುದು ಎಂದರು.

ಈಗಲೂ ಗುಜರಾತ್‌ನಲ್ಲಿ ದಲಿತರ ತಲೆ ಮೇಲೆ ಮಲ ಹೊರುವ ಪದ್ಧತಿ ಇದೆ. ಮೋದಿ ಅದನ್ನು ಪವಿತ್ರ ಎನ್ನುತ್ತಾರೆ. ಅದೇ ಕೆಲಸವನ್ನು ಈ ಆರೆಸ್ಸೆಸ್ ಸ್ವಯಂಸೇವಕರು ಮಾಡಲಿ, ನೋಡೋಣ. ಇವರ ಆಡಳಿತದಲ್ಲಿ ಅಲ್ಪಸಂಖ್ಯಾತರಿಗೆ, ದಲಿತರಿಗೆ, ಮಹಿಳೆಯರಿಗೆ ಸ್ಥಾನವಿಲ್ಲ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. 2002 ರ ಹತ್ಯಾಕಾಂಡದಲ್ಲಿ ಭಾಗಿಯಾದವರಿಗೆ ನ್ಯಾಯಾಲಯ ಕಾನೂನಿನ ಕ್ರಮ ವಹಿಸುತ್ತಿದೆ. ಮೋದಿಯೂ ಒಂದು ದಿನ ಜಾಫ್ರಿ ಕೇಸ್ ನಲ್ಲಿ ಜೈಲು ಸೇರುವ ದಿನ ದೂರವಿಲ್ಲವೆಂದರು.

ಇಂದು ಧರ್ಮದ ಮುಖವಾಡ ತೊಟ್ಟವರು ಮಹಿಳೆ ಮತ್ತು ಮಕ್ಕಳ ಮಾನಭಂಗ ಮಾಡುತ್ತಿರುವುದನ್ನು ತೆರೆದಿಟ್ಟರು. ಎಡ ಪಕ್ಷಗಳು ಅಲ್ಪಸಂಖ್ಯಾತರು, ದಲಿತರು, ಆದಿವಾಸಿ, ಮಹಿಳೆಯರನ್ನು ರಕ್ಷಿಸುವ ನೀತಿಗಳಿಗೆ ಒತ್ತು ನೀಡುತ್ತದೆ ಎಂದರು.

ಭ್ರಷ್ಟಾಚಾರದ ವಿರುದ್ಧ ಹೋರಾಡುವ ಎಡಪಕ್ಷಗಳು. ಎಡರಂಗಸರ್ಕಾರಗಳ ಮುಖ್ಯಮಂತ್ರಿಗಳು ಅಧಿಕಾರ ನಡೆಸಿದಲ್ಲಿ, ಮಂತ್ರಿಗಳು, ಮು.ಮಂ., ಶಾಸಕರು, ಸಂಸದರು ಯಾರ ಮೇಲೂ ಭ್ರಷ್ಟಾಚಾರದ ಆರೋಪವಿಲ್ಲವೆದರು. ಹೊಸ ಭಾರತ ಕಟ್ಟಲಿಕ್ಕಾಗಿ ಜನಪರ ನೀತಿಗಳ ಆಧಾರದಲ್ಲಿ ಎಡ ಪಕ್ಷಗಳು ಹೋರಾಡುತ್ತವೆ. ಇದಕ್ಕೆ ಜನತೆ ಬೆಂಬಲಿಸಬೇಕು ಎಂದ ಅವರು ದಸರಾ ಮತ್ತು ಈದ್ ಶುಭಾಶಯ ಹೇಳಿ' ಸಂತೋಷವೂ ತಮ್ಮದಾಗಲಿ, ಸಂಘರ್ಷಕ್ಕೂ ಮುನ್ನಡೆಯಿರಿ' ಎಂದು ಆಶಿಸಿದರು.

ಅವರ ಭಾಷಣವನ್ನು ಎಸ್.ಪ್ರಸನ್ನಕುಮಾರ್‌ರವರು ಕನ್ನಡಕ್ಕೆ ಅನುವಾದಿಸಿದರು. ಸ್ವತಃ ಕಾಂ.ಬೃಂದಾರವರು ಕನ್ನಡದ ಅನೇಕ ಮಾತುಗಳನ್ನು, ಶಬ್ದಗಳನ್ನು ಉಚ್ಚರಿಸಿ ಮಾತಿಗೆ ಮೆರಗು, ಒತ್ತು ಕೊಟ್ಟಿದ್ದು ವಿಶೇಷವಾಗಿತ್ತು. ಜನರಿಂದ ಅಪೂರ್ವ ಸ್ಪಂದನ ದೊರಕಿಸಿತು.

ಮುಂದಿನ ದಿನಗಳಲ್ಲಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಈ ಆಂದೋಲನವನ್ನ ಮುಂದುವರಿಸಲು ಈ ರ್‍ಯಾಲಿಯಲ್ಲಿ ನಿರ್ಣಯಿಸಲಾಯಿತು.

ಎಡಪಕ್ಷಗಳಾದ ಸಿಪಿಐ, ಸಿಪಿಐ(ಎಂ), ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ.ಗಳು ದೇಶದ ಮುಂದಿಟ್ಟಿರುವ ಹತ್ತು ಅಂಶಗಳನ್ನೊಳಗೊಂಡ ಪರ್ಯಾಯ ಧೋರಣೆಗಳನ್ನು ದಿನಾಂಕ 08.10.2013 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಎಡಪಕ್ಷಗಳ ಸಮಾವೇಶ ಸರ್ವಾನುಮತದಿಂದ ಒಪ್ಪಿಕೊಳ್ಳುತ್ತದೆ.

ಜನಪರ ಧೋರಣೆಗಳನ್ನಿಟ್ಟುಕೊಂಡು ಪರ್ಯಾಯ ರಾಜಕೀಯ ಆಂದೋಲನವನ್ನು ನಡೆಸುವ ಅಂಗವಾಗಿ ಬರುವ ನವೆಂಬರ್-ಡಿಸೆಂಬರ್ ತಿಂಗಳಲ್ಲಿ, ಈ ಸಮಾವೇಶದ ಸಂದೇಶಗಳನ್ನು ರಾಜ್ಯದ ಮನೆ, ಮನೆಗೆ ತಲುಪಿಸಲು ಶ್ರವವಹಿಸಿ ಕೆಲಸ ಮಾಡುತ್ತೇವೆ. ಪರ್ಯಾಯ ಧೋರಣೆಗಳ ಜಾರಿಗಾಗಿ ರಾಜ್ಯದ ಪ್ರತಿ ಜಿಲ್ಲೆ ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಎಡಪಕ್ಷಗಳ ಸಮಿತಿಗಳನ್ನು ರಚಿಸಿ ಕರ್ನಾಟಕ ರಾಜ್ಯವ್ಯಾಪಿ ಜನಾಂದೋಲನ ನಡೆಸುತ್ತೇವೆಂದು ಪ್ರತಿಜ್ಞೆಗೈಯುತ್ತೇವೆ.

ಸೌಜನ್ಯ ಪ್ರಕರಣ ಸಿಬಿಐಗೊಪ್ಪಿಸಲು ಒತ್ತಾಯಿಸಿ ಮಂಗಳೂರಿನಲ್ಲಿ ಬೃಹತ್ ಪ್ರತಿಭಟನೆ

ಧರ್ಮಸ್ಥಳದ ಹದಿ ಹರೆಯದ ಕು.ಸೌಜನ್ಯಾ ಅವಳ ಮೇಲೆ ಅತ್ಯಾಚಾರ ನಡೆಸಿ ಬಳಿಕ ಕೊಲೆಗೈದ ಘಟನೆ ನಡೆದು ಅಕ್ಟೋಬರ್ 9 ಕ್ಕೆ ಒಂದು ವರ್ಷ ತುಂಬಿದ್ದರೂ, ಪ್ರಭಾವಿಗಳ ಒತ್ತಡಕ್ಕೆ ಒಳಗಾಗಿ ಪೋಲೀಸ್ ಇಲಾಖೆಯಾಗಲೀ ಜಿಲ್ಲಾಡಳಿತವಾಗಲೀ ಸರಿಯಾದ ತನಿಖೆಯನ್ನು ನಡೆಸದೆ ಕಾನೂನು ನ್ಯಾಯಗಳಿಗೆ ಅಪಚಾರ ನಡೆಸುತ್ತಿರುವ ಹಿನ್ನೆಲೆಯಲ್ಲಿ ಬೆಳ್ತಂಗಡಿ ಸೇರಿದಂತೆ ದ.ಕ.ಜಿಲ್ಲೆಯ ನಾಗರಿಕರು ಡಿವೈಎಫ್ಐ, ಜನವಾದಿ ಮಹಿಳಾ ಸಂಘ (ಜೆಎಂಎಸ್), ಎಸ್ಎಫ್ಐಗಳ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಅಕ್ಟೋಬರ್ 9 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದರು. (ಸೌಜನ್ಯ ಪ್ರಕರಣದ ವಿವರಗಳು ಹಾಗೂ ಈ ವರೆಗಿನ ಹೋರಾಟದ ಬಗ್ಗೆ 'ಜನಶಕ್ತಿ'ಯ ಕಳೆದ ಸಂಚಿಕೆಯಲ್ಲಿ ವಿಸ್ತೃತ ವರದಿ ಬಂದಿದೆ.) 50 ವಾಹನಗಳ ಬೃಹತ್ ಜಾಥಾವನ್ನು ಸೌಜನ್ಯಾಳ ತಂದೆ ಚಂದಪ್ಪ ಗೌಡ ಮತ್ತು ತಾಯಿ ಕುಸುಮಾವತಿ ಬೆಳ್ತಂಗಡಿಯಲ್ಲಿ ಬೆಳಗ್ಗೆ ಉದ್ಘಾಟಿಸಿದರು.


ಡಾ।ಟಿ.ಎನ್.ಸೀಮಾರಿಂದ ಪ್ರದರ್ಶನ ಉದ್ಘಾಟನೆ:

ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ಉಪಾಧ್ಯಕ್ಷರೂ ರಾಜ್ಯ ಸಭಾ ಸದಸ್ಯರೂ ಆದ ಡಾ।ಟಿ,ಎನ್.ಸೀಮಾ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು. ತಾನು ಇದೇ ಮೊದಲ ಬಾರಿಗೆ ಮಂಗಳೂರಿಗೆ ಬರುತ್ತಿದ್ದರೂ ಸಂತೋಷದಿಂದ ಬರುತ್ತಿಲ್ಲ; ದುಃಖದಿಂದ ಬರುವಂತಾಗಿದೆ ಎಂದು ಖೇದ ವ್ಯಕ್ತಪಡಿಸಿದರು.

ಸೌಜನ್ಯಾಳ ಅತ್ಯಾಚಾರ ಹಾಗೂ ಕೊಲೆ ಇದೊಂದೇ ಪ್ರತ್ಯೇಕವಾದುದಲ್ಲ. ದೇಶಾದ್ಯಂತ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳ ಹಿನ್ನೆಲೆಯಲ್ಲಿ ಇಂಥದೊಂದು ಘಟನೆ ನಡೆದಿದೆ. ಈ ಜಿಲ್ಲೆಯಲ್ಲಿ ಪೊಲೀಸರು ಮಹಿಳೆಯರಿಗೆ ರಕ್ಷಣೆ ಕೊಡಲು ಇದ್ದಾರೆಯೇ ಅಥವಾ ದೌರ್ಜನ್ಯ ಎಸಗುವವರಿಗೆ ರಕ್ಷಣೆ ನೀಡಲು ಇದ್ದಾರೆಯೇ ಎಂದು ಸವಾಲು ಹಾಕಿದರು. ಪೊಲೀಸರು ಯಾಕೆ ನಿಷ್ಕ್ರಿಯರಾಗಿದ್ದಾರೆ? ಅವರು ಯಾರ ಹಿತವನ್ನು ಕಾಯುತ್ತಿದ್ದಾರೆ? ಧರ್ಮಸ್ಥಳ ಘಟನೆಯ ಹಿಂದೆ ಪ್ರಭಾವಿ ವ್ಯಕ್ತಿಗಳು ಇದ್ದುದ್ದರಿಂದ ಪೊಲೀಸರ ನಿಷ್ಕ್ರಿಯತೆ ಎಂಬುದು ನಮಗೆ ವ್ಯಕ್ತವಾಗುತ್ತದೆ ಎಂದು ಅವರು ತಿಳಿಸಿದರು.

ಡಿಸೆಂಬರ್ 16ರ ದೆಹಲಿಯ ಸಾಮೂಹಿಕ ಅತ್ಯಾಚಾರದ ಬಳಿಕ ದೇಶದಲ್ಲಿ ಒಂದು ಸಂಚಲನೆ ಉಂಟಾಗಿದೆ. ಸಾಕಷ್ಟು ಶೀಘ್ರಗತಿಯಲ್ಲಿ ತನಿಖೆ ನಡೆದು ಪ್ರಕರಣ ಒಂದು ಹಂತ ತಲುಪಿದೆ. ಅತ್ಯಾಚಾರ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಸಂಬಂಧ ಕಾನೂನುಗಳು ಜಾರಿಯಾಗಿವೆ. ಈ ಕಾನೂನುಗಳಲ್ಲಿ ಕೆಲವು ಸರಿಪಡಿಸಬೇಕಾದ ಊನಗಳಿವೆ ನಿಜ; ಆದಾಗ್ಯೂ ಶಿಕ್ಷೆಯ ಜಾರಿ ಬಗ್ಗೆ ಕಾನೂನಿನಲ್ಲಿ ಉತ್ತಮ ಸಂಗತಿಗಳಿವೆ.

ಅಪರಾಧ ಹಾಗೂ ಶಿಕ್ಷೆ ಸಂಬಂಧ ದೇಶದಲ್ಲಿ ಅತ್ಯುತ್ತಮ ಕಾನೂನುಗಳಿದ್ದರೂ, ಮಹಿಳೆಯರ ಮೇಲಿನ ದೌರ್ಜನ್ಯಗಳು ಪದೇ ಪದೇ ನಡೆಯುತ್ತಿರುವ ಬಗ್ಗೆ ಇ.ಎಂ.ಎಸ್.ನಂಬೂದರಿಪಾಡ್ ಅವರು 40 ವರ್ಷಗಳ ಹಿಂದೆಯೇ ಬರೆದಿದ್ದರು. ಕಾನೂನೊಂದೇ ಅಲ್ಲ ಅದನ್ನು ಜಾರಿಗೊಳಿಸಬೇಕಾದ ಜಾಗೃತಿ ಜನತೆಯಲ್ಲಿ ಇರಬೇಕಾದದ್ದು ಅವಶ್ಯಕ ಎಂದು ಅವರು ತಿಳಿಸಿದ್ದರು. ದೆಹಲಿ ಘಟನೆಯ ಬಳಿಕವೂ ಅನೇಕ ಸಾಮೂಹಿಕ ಅತ್ಯಾಚಾರಗಳು ನಡೆದಿವೆ; ಆದರೆ ದೆಹಲಿ ಘಟನೆಯಲ್ಲಿ ಮಾತ್ರ ಶೀಘ್ರ ಕಾನೂನು ಕ್ರಮ ನಡೆದಿದೆಯಲ್ಲದೆ, ಇತರೆಲ್ಲ ಪ್ರಕರಣಗಳಲ್ಲಿ ಅಲ್ಲ.



ವಾ . ಉ.

ಪೋಲೀಸರು ಸಮರ್ಥರಲ್ಲ ಎನ್ನಲಾಗುವುದಿಲ್ಲ. ದೆಹಲಿ, ಮಣಿಪಾಲ ಪ್ರಕರಣಗಳಲ್ಲಿ ಶೀಘ್ರಗತಿಯಿಂದ ತನಿಖೆಯಾಗಿದೆ. ಸೌಜನ್ಯಾಳ ಪ್ರಕರಣದಲ್ಲಿ ಪೋಲೀಸರು ಯಾಕೆ ಸಮರ್ಥರಾಗಿಲ್ಲ? ರಾಜ್ಯ ಸಿಓಡಿ ಪೋಲೀಸರ ತನಿಖೆಯ ಬಗ್ಗೆ ನಾಗರಿಕರಿಗೆ ವಿಶ್ವಾಸವಿಲ್ಲ. ಆದ್ದರಿಂದ ಸಿಬಿಐ ತನಿಖೆಗೆ ಸದ್ರಿ ಪ್ರಕರಣವನ್ನು ಹಸ್ತಾಂತರಿಸಬೇಕು. ತಮ್ಮ ಗುಂಪಿನ ಸಂಸದರು ರಾಜ್ಯಸಭೆ, ಲೋಕಸಭೆಗಳಲ್ಲಿ ಈ ಪ್ರಶ್ನೆಯನ್ನು ಎತ್ತುವುದಲ್ಲದೆ, ಪ್ರಧಾನಿ ಹಾಗೂ ಸೋನಿಯಾ ಗಾಂಧಿಯವರಿಗೂ ಪ್ರಕರಣವನ್ನು ತಿಳಿಸುವುದಾಗಿ ಡಾ।ಸೀಮಾ ಹೇಳಿದರು. ನಿಜ ಅಪರಾಧಿಗಳನ್ನು ಪತ್ತೆ ಮಾಡುವವರೆಗೆ ವಿಶ್ರಮಿಸುವುದಿಲ್ಲ ಎಂದೂ ಭರವಸೆ ನೀಡಿದರು.

ಕೆ.ನೀಲಾ : ಸಾಹಿತಿ ಹಾಗೂ ಉಪಾಧ್ಯಕ್ಷರು, ಜೆಎಂಎಸ್ ರಾಜ್ಯ ಸಮಿತಿ.

ದ.ಕ, ಉಡುಪಿ ಕರಾವಳಿ ಜಿಲ್ಲೆಗಳ ಜನ ವಿದ್ಯಾವಂತರು ಬುದ್ಧಿವಂತರು ಎಂದು ಪ್ರಸಿದ್ಧರಾಗಿದ್ದಾರೆ. ಕೇರಳದಂತೆ ಮಾತೃಪ್ರಧಾನ ಪದ್ಧತಿ ಇಂದಿಗೂ ಪ್ರಚಲಿತವಿರುವ ಈ ಜಿಲ್ಲೆಗಳಲ್ಲಿ ಗಂಡು ಹೆಣ್ಣು ಲಿಂಗಾನುಪಾತದಲ್ಲಿ ಎರಡು ದಶಕದ ಹಿಂದಿನವರೆಗೂ ಮಹಿಳೆಯರೇ ಪುರುಷರ ಸಂಖ್ಯೆಯನ್ನು ಮೀರಿರುತ್ತಿದ್ದರು. ಪೋರ್ಚ್‌ಗೀಸರ ದಾಸ್ಯಕ್ಕೆ ಸಿದ್ಧನಾದ ಗಂಡನನ್ನೂ ವಿರೋಧಿಸಿದ್ದ ರಾಣಿ ಅಬ್ಬಕ್ಕ, ಮಹಿಳೆಯರ ಘನತೆಯನ್ನು ಎತ್ತಿ ಹಿಡಿದ ಸಿರಿ ಈ ಜಿಲ್ಲೆಗಳ ಸ್ತ್ರೀಯರ ಹಿರಿಮೆಯನ್ನು ಎತ್ತಿ ಹಿಡಿದ ಚಾರಿತ್ರಿಕ ವ್ಯಕ್ತಿಗಳು. ಇಂಥ ನಾಡಿನಲ್ಲಿ ಸೌಜನ್ಯಾಳಂಥ ಬಾಲಕಿಯ ಮೇಲೆ ಅತ್ಯಾಚಾರ ಕೊಲೆ ನಡೆದಾಗ ಜನತೆ ನಿಷ್ಕ್ರಿಯರಾಗಿರುವುದು ವಿದ್ಯಾವಂತರ ನಾಡಿಗೆ ಅವಮಾನವಲ್ಲವೇ ಎಂದು ಸಾಹಿತಿ ಕೆ.ನೀಲಾ ಪ್ರಶ್ನೆ ಹಾಕಿದರು.




ಕಳೆದ ಹತ್ತು ವರ್ಷಗಳಲ್ಲಿ ಧರ್ಮಸ್ಥಳ ಉಜಿರೆ ಗ್ರಾಮಗಳಲ್ಲಿ ನಡೆದ ಅಸಹಜ ಸಾವುಗಳ ಅಂಕೆ ಸಂಖ್ಯೆಗಳನ್ನು ಮಾಹಿತಿ ಹಕ್ಕು ಕಾಯಿದೆಅಡಿಯಲ್ಲಿ ಪಡೆದಿದ್ದ ತಖ್ತೆಯೊಂದನ್ನು ಅವರು ಪ್ರದರ್ಶಿಸಿ, ಈ ಭಾಗದಲ್ಲಿ 104 ಮಹಿಳೆಯರ ಸಾವುಗಳು ಅಸಹಜ ಸಾವುಗಳೆಂದು ದಾಖಲಾಗಿವೆ. ಅಂದರೆ ಇಷ್ಟು ಸಾವುಗಳು ಮುಚ್ಚಿ ಹೋಗುತ್ತಿವೆ ಎಂದು ಅರ್ಥ. ಈಗ ಕೆಲವು ವರ್ಷಗಳ ಹಿಂದೆ ಧರ್ಮಸ್ಥಳದಲ್ಲಿ ಪದ್ಮಲತಾ ಎಂಬ ವಿದ್ಯಾರ್ಥಿನಿ ಅತ್ಯಾಚಾರಕ್ಕೊಳಗಾಗಿ ಬಳಿಕ ಕೊಲೆಗೀಡಾದಳು. ಅವಳ ತಂದೆ ಪಂಚಾಯತು ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದೇ ಕಾರಣ. ಆ ಗ್ರಾಮದಲ್ಲಿ ಚುನಾವಣೆ ನಡೆಸದೆ ಸದಸ್ಯರನ್ನು ನೇಮಿಸುವ ಪದ್ಧತಿ ಅಲ್ಲಿನದು. ಅದಕ್ಕೆ ವಿರುದ್ಧವಾಗಿ ನಡಕೊಂಡಾತನ ಕುಟುಂಬ ದೌರ್ಜನ್ಯಕ್ಕೊಳಗಾಗುತ್ತದೆ. ಇವ[illegible]ತೆ ಆವತ್ತೂ ಪ್ರಗತಿಪರ ಸಂಘಟನೆಗಳು ಸಿಓಡಿ ತನಿಖೆಗಾಗಿ ಒತ್ತಾಯಿಸಿ ಹೋರಾಟ ಮಾಡಿದ್ದವು. ಆದರೆ 'ಪತ್ತೆಯಾಗದ ಪ್ರಕರಣ' ಎಂದು ಸಿಓಡಿ ಚುಕ್ತಾ ಮಾಡಿತ್ತು. ಅವತ್ತಿನಂತೆ ಇವತ್ತೂ ಸಿಓಡಿ ನಡೆದುಕೊಳ್ಳುತ್ತಿದೆ. ಡಾ॥ ಅಂಬೇಡ್ಕರ್ ವಿರಚಿತ ಸಂವಿಧಾನ ಆ ಸೀಮೆಯಲ್ಲಿ ಚಾಲ್ತಿಯಲ್ಲಿಲ್ಲವೇ ಎಂದು ಕೆ.ನೀಲಾ ಪ್ರಶ್ನಿಸಿದರು.

ಮಹಿಳೆಯರು ತೊಡುವ ಉಡುಪುಗಳೇ ಅವರ ಮೇಲೆ ದೌರ್ಜನ್ಯವೆಸಗಲು ಪ್ರೇರಣೆ ಎಂದು ಕೆಲವು ಸಂಸ್ಕೃತಿ ರಕ್ಷಕರೆನ್ನುವವರು ಹೇಳುತ್ತಾರೆ. ಗ್ರಾಮಾಂತರಗಳಲ್ಲಿ ನಡೆದ ಅತ್ಯಾಚಾರಗಳು, ಶಿಶುಗಳ ಮೇಲೆ ನಡೆದ ಅತ್ಯಾಚಾರಗಳು ಯಾವ ವಸ್ತ್ರ ಸಂಹಿತೆ ಜಾರಿಯಾಗದ್ದಕ್ಕೆ ಆಗುತ್ತವೆ. ಪುರುಷ ಏನು ಬೇಕಾದರೂ ಮಾಡಬಹುದು ಎಂಬ ಪುರುಷ ಪ್ರಧಾನ ಮನೋಭಾವವೇ ಈ ಅತ್ಯಾಚಾರಗಳ ಮೂಲ. ಆದುದರಿಂದ ಧರಿಸುವ ವಸ್ತ್ರ ದೌರ್ಜನ್ಯಕ್ಕೆ ಕಾರ[illegible]ಲ್ಲ ಎಂದು ಅವರು ವಿವರಿಸಿದರು.

ಬಪ್ಪ ಬ್ಯಾರಿ, ಅಬ್ಬಕ್ಕನ ನಾಡಿನಲ್ಲಿ ಇವತ್ತು ಕೋಮು ಭಾವನೆ ಬೆಳೆಸಲಾಗಿದೆ. ಇದರ ಭಾಗವಾಗಿ ಮಹಿಳೆಯರ ಮೇಲೆ ಹೊಸ ಸಂಹಿತೆಗಳು ಹೇರಲ್ಪಡುತ್ತಿವೆ. ಕೋಮುಭಾವನೆ ತೀವ್ರವಾಗಿರುವ ನಾಡಿನಲ್ಲಿ ಮಹಿಳೆಯರಿಗೆ ಭದ್ರತೆ ಇರುವುದಿಲ್ಲ ಎನ್ನುವುದಕ್ಕೆ ಕರಾವಳಿ ಜಿಲ್ಲೆಗಳೇ ಉದಾಹರಣೆಯಾಗಿವೆ ಎಂದು ತಿಳಿಸಿದರು.

ಪ್ರಗತಿಪರ ಸಂಘಟನೆಗಳು, ಚಿಂತಕರಿಂದ ಪ್ರಖರ ವಾಗ್ದಾಳಿ :

ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷರಾದ ಎನ್.ಎಲ್.ಭರತ್‌ರಾಜ್ ಅವರು ಹಿಂದೂತ್ವದ ಸಂಘಟನೆಗಳು ಯಾವ್ಯವುದೊ ಹೋರಾಟಗಳಲ್ಲಿ ನಿರತರಾಗಿದ್ದಾರೆಯೆ ಹೊರತು, ಒಬ್ಬ ಹಿಂದೂ ಹೆಣ್ಣು [illegible] ಸೌಜನ್ಯಳ ಕೊಲೆ ತನಿಖೆಗಾಗಿ ಹೋರಾಡುತ್ತಿ[illegible] ಎಂದರು. ಸೌಜನ್ಯ ಪ್ರಕರಣ ಬಹಿರಂಗವಾ[illegible] ಮೊದಲ ಹಂತದಲ್ಲಿ ಈ ಹಿಂದು[illegible]



ಸಂಘಟನೆಗಳು ಪೋಲೀಸರ ನಿಷ್ಕ್ರಿಯತೆ ವಿರೋಧಿಸಿ ಹೋರಾಟಕ್ಕಿಳಿದಿದ್ದವು. ಆದರೆ ಯಾವಾಗ ಈ ಪ್ರಕರಣವನ್ನು ಮುಚ್ಚಿ ಹಾಕಲು ಧರ್ಮಸ್ಥಳದ ಸ್ಥಳೀಯ ದೊರೆಗಳು ಆಸಕ್ತಿ ವಹಿಸಿದರೆಂದು ತಿಳಿಯಿತೋ, ಆ ಬಳಿಕ ಆ ಸಂಘಟನೆಗಳು ಮೌನ ತಾಳಿವೆ. ಈ ಹಿಂದುತ್ವ ಪರ ಸಂಘಟನೆಗಳ, ಶಾಸಕರ ಸಾಚಾತನ ಈ ಹಿಂದಿನ ಶಾಸನ ಸಭೆ ವೇಳೆಗೇ ಬಹಿರಂಗವಾಗಿದೆ. ಒಬ್ಬ ಶಾಸಕರ ಪತ್ನಿ ಕೊಲೆಗೀಡಾದರು. ಇನ್ನು ಕೆಲವು ಶಾಸಕರು ವಿಧಾನ ಸಭಾ ಕಲಾಪದ ಮಧ್ಯೆಯೇ ನೀಲಿ ಚಿತ್ರ ವೀಕ್ಷಿಸಿ ಸಿಕ್ಕಿ ಬಿದ್ದರು. ಇಂಥವರ ಸರ್ಕಾರವನ್ನು ಬದಲಾಯಿಸಿ, ಬೇರೆ ಪಕ್ಷದ ಸರ್ಕಾರ ಬಂದರೂ, ಸೌಜನ್ಯ ಪ್ರಕರಣದಲ್ಲಿ ತನಿಖೆ ಮುಂದುವರಿಯುವುದು ಖೇದಕರ ಎಂದು ಹೇಳಿದರು.

ಭಾರತ ಜ್ಞಾನ ವಿಜ್ಞಾನ ಸಮಿತಿ, ಸಮತಾ ವೇದಿಕೆ ಕರ್ನಾಟಕ ರಾಜ್ಯ ಸಂಚಾಲಕರಾದ ಎನ್.ಪ್ರಭಾ ಮಾತನಾಡಿ, ದೆಹಲಿ ಸಾಮೂಹಿಕ ಅತ್ಯಾಚಾರದ ಬಳಿಕ ಜನತಾ ಪ್ರತಿಭಟನೆಯಲ್ಲಿ ಕಾಂಗ್ರೆಸ್, ಬಿಜೆಪಿ, ಎಸ್ಪಿ, ಬಿಎಸ್‌ಪಿ, ಜೆಡಿ(ಎಸ್) ಪಕ್ಷಗಳೂ ಪಾಲ್ಗೊಂಡವು. ಸೌಜನ್ಯ ಪ್ರಕರಣದಲ್ಲಿ ಈ ಎಲ್ಲಾ ಪಕ್ಷಗಳೂ ಯಾಕೆ ಮೌನವಾಗಿವೆ? ಧರ್ಮಸ್ಥಳ-ಉಜಿರೆ ಗ್ರಾಮಗಳಲ್ಲಿ ವರ್ಷಕ್ಕೆ ಸರಾಸರಿ 25-30 ಅಸಹಜ ಸಾವುಗಳಾಗುತ್ತಿವೆ. ತನಿಖೆಗಳೇ ಸರಿಯಾಗಿ ನಡೆಯುವುದಿಲ್ಲ. ನಮ್ಮ ದೇಶದಲ್ಲಿ ಎರಡು ಥರದ ನ್ಯಾಯ ವ್ಯವಸ್ಥೆ ಇದೆಯೋ ಎಂದು ಅವರು ಪ್ರಶ್ನಿಸಿದರು.



ಎಸ್‌ಎಫ್‌ಐ ರಾಜ್ಯ ವಿದ್ಯಾರ್ಥಿನಿ ಉಪಸಮಿತಿ ಅಧ್ಯಕ್ಷೆ ರೇಣುಕಾ ಮಾತನಾಡಿ, ಹೆಣ್ಣು ಮಕ್ಕಳೂ ರಾತ್ರಿಯೂ ನಿರ್ಭಯವಾಗಿ ಓಡಾಡುವ ಪರಿಸ್ಥಿತಿಯುಂಟಾದಾಗ ನಮ್ಮ ದೇಶ ನಿಜವಾದ ಸ್ವಾತಂತ್ರ್ಯ ಹೊಂದುವುದು ಎಂದು ಗಾಂಧೀಜಿ ಹೇಳಿದ್ದರು. ಈಗ ಈ ಜಿಲ್ಲೆಯಲ್ಲಿ ಹಗಲೂ ಓಡಾಡುವಂತಹ ವಾತಾವರಣವಿಲ್ಲ. ಹೆಣ್ಣು ಮಕ್ಕಳು ಸುರಕ್ಷಿತವಾಗಿ ಓದುವಂತಹ ಪರಿಸ್ಥಿತಿಯಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ದ.ಕ.ಜಿಲ್ಲಾ ಮಹಿಳಾ ದೌರ್ಜನ್ಯ ವೇದಿಕೆಯ ಮರ್ಲಿನ್ ಮಾರ್ಟಿಸ್ ಅವರು ಇದು ಕರಾವಳಿ ಜಿಲ್ಲೆಯವರು ನಾಚಿಕೆ ಪಡಬೇಕಾದ ಹಾಗೂ ಅಪರಾಧಗಳಿಗೆ ಜವಾಬ್ದಾರರೂ ಆಗುವ ಸನ್ನಿವೇಶ ಎಂದರು. ಹೊಸ ಸರ್ಕಾರ ಬಂದು ತಿಂಗಳುಗಳಾಗಿದ್ದರೂ ಮಹಿಳಾ ಆಯೋಗ ನೇಮಕ ಮಾಡಿಲ್ಲವೆಂದು ದೂರಿದರು.

ವಿಚಾರವಾದಿ ಸಂಘಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರಾದ ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್ ಅವರು, ಧರ್ಮಸ್ಥಳದಲ್ಲಿ ಎಲ್ಲವೂ ನ್ಯಾಯ ಧರ್ಮ ಪ್ರಕಾರ ನಡೆದುಕೊಂಡು ಬಂದಿದೆ ಎಂದೂ, ಅಲ್ಲಿ ಯಾರಾದರೂ ಪಾಪ ಕೃತ್ಯ ಮಾಡಿದರೆ ಕಷ್ಟಕೋಟಿಗಳಿಗೆ ಈಡಾಗುತ್ತಾನೆಂದೂ ಜನರೆಲ್ಲಾ ನಂಬಿಕೊಂಡು ಬಂದಿದ್ದಾರೆ. ಅಲ್ಲಿನ ಕ್ಷೇತ್ರಾಧಿಪತಿಗಳ ಆಶೀರ್ವಾದದಲ್ಲಿ ಸೌಜನ್ಯ ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ; ಆದರೆ ಕಾರಣೀಕರ್ತರಿಗೆ ಯಾವ ಸಾವು ಕಷ್ಟಗಳೂ ಎರಗಿ ಬಂದಿಲ್ಲ. ಅಲ್ಲಿಯ ನ್ಯಾಯದಾನ ವ್ಯವಸ್ಥೆಯೇ ಬೇರೆಯದು. ಹಿಂದೆ ಪದ್ಮಲತಾ ಪ್ರಕರಣದಲ್ಲೂ ಹೀಗಾಗಿತ್ತು. ಘೋರ ಅನ್ಯಾಯ ಪಾಪ ಕೃತ್ಯ ನಡೆದ ಸ್ಥಳವನ್ನು ಜನ "ಆ ಸ್ಥಳ. ಈ ಸ್ಥಳ" ಅನ್ನುತ್ತಾರೆಯೇ ಹೊರತು ಧರ್ಮಸ್ಥಳ ಎಂದು ಮಾತಲ್ಲಿ ಹೇಳುವುದಕ್ಕೂ ಅಂಜುತ್ತಾರೆ. ಅಷ್ಟು ಮಟ್ಟಿಗೆ ಜನತೆಯನ್ನು ಭೀತಿಯಲ್ಲಿ ಇರಿಸಲಾಗಿದೆ ಎಂದು ನರೇಂದ್ರ ನಾಯಕ್ ವಿವರಿಸಿದರು.

ಬರಹಗಾರ್ತಿ ಹಾಗೂ ಜನಪರ ಹೋರಾಟಗಾರ್ತಿ ಅತ್ರಾಡಿ ಅಮೃತಾ ಶೆಟ್ಟಿ ಮಾತನಾಡಿ, ದ.ಕ.ಜಿಲ್ಲೆಯ ಜನರ ಅಂತಃಪ್ರಜ್ಞೆಯನ್ನು ಸೌಜನ್ಯ ಪ್ರಕರಣ ನಿಜವಾಗಿ ಕಲಕಬೇಕಾಗಿತ್ತು. ನನ್ನ ಮಗುವನ್ನು ಹದ್ದು ನಾಯಿಗಳು ಹರಿದು ತಿಂದುವು ಎಂದು ಸೌಜನ್ಯಳ ತಾಯಿ ರೋಧಿಸಿದರು. ಹದ್ದು, ನಾಯಿಗಳು ನಮ್ಮ ನಾಡನ್ನು ಆಳುತ್ತಿವೆಯೇ? ಸೌಜನ್ಯಳ ಮೇಲೆ ನಡೆದ ಅತ್ಯಾಚಾರ ಕೇವಲ ಒಬ್ಬ ಹೆಣ್ಣು ಮಗಳ ಮೇಲೆ ನಡೆದ ಅತ್ಯಾಚಾರವಲ್ಲ, ತುಳುನಾಡಿನ ಎಲ್ಲ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರ. ಆಡಳಿತಕ್ಕೆ ಗೊತ್ತಾಗಲಿ- ಜನ ಮೈಕೊಡವಿ ಎದ್ದರೆ ಎದುರಿಸಲು ಸಾಧ್ಯವಿಲ್ಲ ಎಂದು. ಅದಕ್ಕೆ ಅವರು ತುಳು ಗಾದೆಯೊಂದನ್ನು ಉದಾಹರಿಸಿದರು: "ಹಾವು ಹೆಡೆ ಎತ್ತಿದರೆ ಮದ್ದು ಇದೆಯಂತೆ; ಎರೆ ಹುಳು ಹೆಡೆ ಎತ್ತಿದರೆ ಮದ್ದು ಇಲ್ಲ :(ಉಚ್ಚು ಜಡೆ ದೆತ್ತಿಂಡ ಮರ್ದುಂಡುಗೆ; ನಕ್ಕುರು ಜಡೆ ದೆತ್ತಿಂಡ ಮರ್ದ್ ಇಜ್ಜಿ) - ಎಂದು ಜನತೆಯ ಆಕ್ರೋಶಕ್ಕೆ ದನಿಯಾದರು.

ಬೆಳ್ತಂಗಡಿ ತಾಲೂಕಿನ ಕಾರ್ಮಿಕ ಮುಖಂಡರಾದ ಬಿ.ಎಂ.ಭಟ್ ಅವರು ಬೆಳ್ತಂಗಡಿ ತಾಲೂಕಿನಲ್ಲಿ ಎಲ್ಲ ಪಕ್ಷಗಳು ಒಟ್ಟುಗೂಡಿ ತಾಲೂಕು ಹಿತರಕ್ಷಣಾ ವೇದಿಕೆ ರಚಿಸಿದ್ದರೂ, ತಾಲೂಕಿನಲ್ಲಿ ದೌರ್ಜನ್ಯಕ್ಕೊಳಗಾದ ಸೌಜನ್ಯಳ ಬಗ್ಗೆ ಯಾವ ಕಾರ್ಯಕ್ರಮವೂ ಇಲ್ಲ; ಇದನ್ನು ಅರಿತೇ ಸಿಪಿಐ(ಎಂ) ಅದರಲ್ಲಿ ಸೇರಿಕೊಳ್ಳಲಿಲ್ಲ ಎಂದು ತಿಳಿಸಿದರು. ಬೇರೆ ಪ್ರಕರಣಗಳ ಬಗ್ಗೆ ಸಿಬಿಐ ತನಿಖೆಗೆ ಆಗ್ರಹ ಪಡಿಸುವ ಕಾಂಗ್ರೆಸ್ ದುರೀಣ ಜನಾರ್ಧನ ಪೂಜಾರಿಯವರೂ ಸೌಜನ್ಯ ಪ್ರಕರಣದ ಬಗ್ಗೆ ಮಾತೆತ್ತದಿರುವುದು ಆಶ್ಚರ್ಯ ಎಂದು ತಿಳಿಸಿದರು.

ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಮಹಿಳೆಯರ ಪರವಾಗಿ ಹಲವು ಪ್ರಗತಿಪರ ಕಾರ್ಯಕ್ರಮ ಹಾಕಿಕೊಂಡಿರುವ ಜನಾರ್ಧನ ಪೂಜಾರಿಯವರು ಯಾಕೆ ಸೌಜನ್ಯ ಕೊಲೆ ಬಗ್ಗೆ ಪ್ರಸ್ತಾಪಿಸುತ್ತಿಲ್ಲ? ಪ್ರಗತಿಪರ ಸಾಹಿತಿ, ಬುದ್ಧಿಜೀವಿಗಳ ಒಡನಾಡಿಯಾಗಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಏಕೆ ಧರ್ಮಸ್ಥಳಕ್ಕೆ ಭೇಟಿ ನೀಡಿದಾಗ ಸೌಜನ್ಯಾಳ ಮನೆಗೆ ಭೇಟಿ ನೀಡಲಿಲ್ಲ? ಮೂಡಬಿದ್ರಿಯಲ್ಲಿ ಬಸದಿ ವಿಗ್ರಹದ ಕಳವು ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಜಿಲ್ಲೆಯ ಶಾಸಕರೆಲ್ಲ ಧರಣಿ ಕುಳಿತು ಕೊಂಡರು. ಆದರೆ ಸೌಜನ್ಯಗಾಗಿ ಯಾರು ಧರಣಿ ಕುಳಿತಿದ್ದಾರೆ? ಆದ್ದರಿಂದ ಸರ್ಕಾರ ಬದಲಾದರೂ ಧೋರಣೆಗಳು ಬದಲಾಗಿಲ್ಲ. ಆದರೆ ನಿಜ ಅರಿತ ಜನತೆ ಬಿರುಬಿಸಿಲಿನಲ್ಲೂ ಕದಲದೆ ಕುಳಿತುಕೊಳ್ಳವರು ಎಂದರು.

ಹೋರಾಟ ಮುಂದವರಿಸಲು ಸಂಕಲ್ಪ :

ಬೆಳಿಗ್ಗೆ ಹನ್ನೊಂದೂವರೆಯಿಂದ ಮಧ್ಯಾಹ್ನ ಎರಡು ಗಂಟೆಯವರೆಗೂ ಪ್ರತಿಭಟನಾ ಸಭೆ ನಡೆಯಿತು. ತಲೆಯೊಡೆಯುವಂಥ ಬಿಸಿಲಿದ್ದರೂ ಎಲ್ಲರೂ ಕೊನೆಯವರೆಗೆ ಭಾಗವಹಿಸಿದ್ದರು. ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಲೇಖಕಿಯರ ಸಂಘ, ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರಲ್ಲದೆ, ಕರಾವಳಿಯ ಅನೇಕ ಪ್ರಗತಿಪರ ಲೇಖಕಿಯರು ಬುದ್ಧಿಜೀವಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸೌಜನ್ಯಾಳ ತಾಯಿ ಕುಸುಮಾವತಿ, ತಂದೆ ಚಂದಪ್ಪ ಗೌಡ, ಸೋದರ ಮಾವ ವಿಠಲ ಇವರೂ ವೇದಿಕೆಯಲ್ಲಿ ಕುಳಿತಿದ್ದರು. ತಾಯಿ ಕುಸುಮ, ಸೋದರ ಮಾವ ವಿಠಲ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷೆ ಹೇಮಲತಾ ಸ್ವಾಗತಿಸಿದರು. ಬೆಳ್ತಂಗಡಿಯ ಯುವಜನ ಮುಖಂಡ ಶೇಖರ ಲಾಯಿಲ ಅವರು ಪ್ರಾಸ್ತಾವಿಕವಾಗಿ ಸೌಜನ್ಯ ಪ್ರಕರಣದ ವಿವರಗಳನ್ನು ತಿಳಿಸಿದರು. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಿರಣ ಪ್ರಭಾ ವಂದಿಸಿದರು. ಡಿವೈಎಫ್‌ಐ ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ಮಂಗಳೂರು ನಗರ ಕಾರ್ಪರೇಟರ್ ದಯಾನಂದ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಹುತಾತ್ಮರಿಗೆ ನಮನ

ಕವನ

ನಮ್ಮ ನಮನವು
ಕೆಂಪು ನಮನವು
ಕ್ರಾಂತಿವೀರ ಪುರುಷರಿಗೆ
ತ್ಯಾಗಜೀವಿ ಹುತಾತ್ಮರಿಗೆ...

ನಮ್ಮ ನಮನವು
ಪ್ರೀತಿ ನಮನವು
ವೀರಧೀರ ತರುಣರಿಗೆ
ತ್ಯಾಗಜೀವಿ ಹುತಾತ್ಮರಿಗೆ...

ಕ್ರಾಂತಿವೀರ ಭಗತ್‌ಸಿಂಗರು
ಸುಖದೇವ ರಾಜಗುರು
ಕೂಡಿದರು ಗೆಳೆಯರು
ಕ್ರಾಂತಿಕಹಳೆ ಊದಿದರು / ಕ್ರಾಂತಿಕಹಳೆ
ಊದಿದರು ...

ಚಿಂತಿಸಿದರು ತತ್ವವನು
ರೂಪಿಸಿದರು ತಂತ್ರವನು
ಕಿತ್ತೊಗೆಯಲು ಸಂಕೋಲೆ
ಪಾರತಂತ್ರ್ಯ ಶೃಂಖಲೆ... / ಪಾರತಂತ್ರ್ಯ
ಶೃಂಖಲೆ...

ಎಲ್ಲೆಲ್ಲೂ ಘರ್ಜನೆ
ಬ್ರಿಟಿಷ್‌ರಾಜ್ ಮುರ್ದಾಬಾದ್
ಮೊಳಗಿಸಿದರು ಘೋಷಣೆ
ಇಂಕ್ವಿಲಾಬ್ ಜಿಂದಾಬಾದ್/ ಇಂಕ್ವಿಲಾಬ್
ಜಿಂದಾಬಾದ್ ...

ದಬ್ಬಾಳಿಕೆಗೆ ಜಗ್ಗಲಿಲ್ಲ
ತಲೆಯನೆಂದೂ ಬಾಗಲಿಲ್ಲ
ಒಂದೇ ಗುರಿ ಒಂದೇ ನಡೆ
ತಾಯಿನಾಡ ಬಿಡುಗಡೆ / ತಾಯಿನಾಡ
ಬಿಡುಗಡೆ ...

ಮಾತೃಭೂಮಿ ವಿಮೋಚನೆಗೆ
ಹೋರಾಡಿದ ಸುಪುತ್ರರು
ಬಿಳಿಯರಸರ ನೇಣಿಗೆ
ಕೊರಳೊಡ್ಡಿದ ಶೂರರು / ಕೊರಳೊಡ್ಡಿದ
ಶೂರರು ...

ಸುಖೀ ರಾಜ್ಯದ ನಿಮ್ಮ ಆದರ್ಶ
ನಮಗಿತ್ತಿದೆ ಸ್ಫೂರ್ತಿ ಹರ್ಷ
ನೀವು ನಡೆದ ಕ್ರಾಂತಿಪಥ
ನಿಜ ಪಥ ... ನಮ್ಮ ಪಥ
ನಿಜ ಪಥ ನಮ್ಮ ಶಪಥ ...

– ವಿಶ್ವ ಕುಂದಾಪುರ

ಪರ್ಯಾಯ ದೋರಣೆಗಳಿಗಾಗಿ.....

ಪುಟ 8 ರಿಂದ

ಕಾಂ.ಡಿ.ರಾಜಾ, ಫಾರ್ವರ್ಡ್ ಬ್ಲಾಕ್‌ನ ಕಾಂ ಕದೀರವನ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಿಪಿಐ(ಎಂ)ನ ಕಾಂ.ವಿಜೆಕೆ ನಾಯರ್, ಸಿಪಿಐ ನ ಕಾಂ ಸಿದ್ದನಗೌಡ ಪಾಟೀಲ್, ಫಾ.ಬ್ಲಾನ ಕಾಂ. ಜಿ.ಆರ್. ಶಿವಶಂಕರ್ ರವರಿರುವ ಅಧ್ಯಕ್ಷ ಮಂಡಳಿ ಕಲಾಪಗಳನ್ನು ನಡೆಸುವ ಜವಾಬ್ದಾರಿ ವಹಿಸಿಕೊಂಡಿತು. ಅಲ್ಲದೇ ವೇದಿಕೆಯಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಕಾಂ.ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್, ನಿತ್ಯಾನಂದಸ್ವಾಮಿ, ಕೆ. ಶಂಕರ್, ಎಸ್. ಪ್ರಸನ್ನಕುಮಾರ್, ಯು. ಬಸವರಾಜ್, ಮಾರುತಿ ಮಾನ್ಪಡೆ, ಸಿಪಿಐ ನ ರಾಜ್ಯ ಕಾರ್ಯದರ್ಶಿ ಕಾಂ.ಪಿ.ವಿ. ಲೋಕೇಶ್, ರಾಜ್ಯ ಕಾರ್ಯಕಾರಿ ಮಂಡಳಿಯ ಸದಸ್ಯರು ವೇದಿಕೆಯಲ್ಲಿದ್ದರು. ಆರಂಭದಲ್ಲಿ ಎಲ್ಲರನ್ನೂ ಕಾಂ. ಯು. ಬಸವರಾಜ್ ಸ್ವಾಗತಿಸಿದರು.

ಕಿರುಹೊತ್ತಿಗೆ ಬಿಡುಗಡೆ

ಆರಂಭದಲ್ಲಿ 10 ಅಂಶಗಳನ್ನು ಒಳಗೊಂಡ ಎಡಪಕ್ಷಗಳ ಪರ್ಯಾಯ ಧೋರಣೆಗಳ ಕಿರುಹೊತ್ತಿಗೆಯನ್ನು ಸಿಪಿಐ ನ ರಾಷ್ಟ್ರೀಯ ನಾಯಕರಾದ ಕಾಂ. ಡಿ. ರಾಜಾ ಬಿಡುಗಡೆ ಮಾಡಿದರು.

ಜನತೆಯನ್ನುದ್ದೇಶಿಸಿ ಮಾತನಾಡಿದ ನಾಯಕರು

ಪ್ರಸ್ತಾವನೆ ಮಾಡಿದ ಕಾಂ.ವಿಜೆಕೆಯವರು 'ಕರ್ನಾಟಕದಲ್ಲಿ ಎಡಪಕ್ಷಗಳ ಪರ್ಯಾಯ ಧೋರಣೆಗಳನ್ನು ಜನರ ನಡುವೆ ಕೊಂಡೊಯ್ಯಲು ಈ ರ್‍ಯಾಲಿ' ಎಂದು ಹೇಳುತ್ತಾ ರಾಜ್ಯದಲ್ಲಿ ಕಾಂಗ್ರೆಸ್‌ನ ಅಧಿಕಾರದ ಏಕಸ್ವಾಮ್ಯವನ್ನು ಮುರಿದ 1980ರ ದಶಕದಲ್ಲಿನ ಚಳುವಳಿಗಳು, ಅದರಿಂದ ಆದ ರಾಜಕೀಯ ಬದಲಾವಣೆ ಮತ್ತು ಮುಂದಿನ ವಿದ್ಯಮಾನಗಳ ಏಳು-ಬೀಳುಗಳನ್ನು ವಿವರಿಸಿದರು. ದೇಶದಲ್ಲಿ ಎಡ ಪಕ್ಷಗಳ ನೇತೃತ್ವದ ಸರಕಾರಗಳು ಜನಪರ ಪರ್ಯಾಯ ನೀತಿಗಳನ್ನು ಜಾರಿಗೆ ತಂದಿರುವುದನ್ನು ಪ್ರಸ್ತಾಪಿಸಿದರು.

ಭಾರೀ ಬಹಿರಂಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಕಾಂ. ಬೃಂದಾ ಕಾರಟ್‌ರವರು ಅತ್ಯಂತ ಸ್ಪೂರ್ತಿದಾಯಕವಾಗಿ ಮಾತನಾಡಿದರು. ಆರಂಭದಲ್ಲಿ ಇತ್ತೀಚೆಗೆ ಕೋಲಾರ ಜಿಲ್ಲೆಯಲ್ಲಿ ಬಿಸಿಯೂಟದ ಸಾಂಬಾರಿನಲ್ಲಿ ಬಿದ್ದ ಬಿಸಿಯೂಟ ತಯಾರಕಿಯ ಮಗು ಮಂಜುನಾಥ್‌ಗೌಡನ ಸಾವಿಗೆ ಸಂತಾಪ ವ್ಯಕ್ತಪಡಿಸಿ ಮಾತನ್ನಾರಂಭಿಸಿದರು. (ಅವರ ಭಾಷಣ ಪ್ರತ್ಯೇಕವಾಗಿ ನೀಡಲಾಗಿದೆ.)

ಕಾಂ.ಡಿ. ರಾಜಾ

ನಂತರ ಮಾತನಾಡಿದ ಕಾಂ. ಡಿ.ರಾಜಾರವರು ಜನತೆಯ ಪ್ರಶ್ನೆಗಳು ಮತ್ತು ದೇಶದ ರಾಜಕಾರಣವನ್ನು ವಿಶದವಾಗಿ ವಿಶ್ಲೇಷಿಸಿದರು. " ಯು.ಪಿ.ಎ.ಸರಕಾರವೆಂದರೆ ವಿಪರೀತ ಬೆಲೆ ಏರಿಕೆ, ಹಣದುಬ್ಬರ, ಕೃಷಿ-ಕೈಗಾರಿಕೆ ಉತ್ಪಾದನೆ ಕುಸಿತ, ನಿರುದ್ಯೋಗದ ಬೆಳವಣಿಗೆ, ವಿಪರೀತ ಭ್ರಷ್ಟಾಚಾರ... ಹೀಗಿರುವಾಗ ಈ ಸರಕಾರ ಅಭಿವೃದ್ಧಿಯ ಬಗ್ಗೆ ಮಾತನಾಡುವುದರಲ್ಲಿ ಏನರ್ಥವಿದೆ" ಎಂದು ಪ್ರಶ್ನಿಸಿದರು. ಕಾಂಗ್ರೆಸ್‌ನ ಉದಾರೀಕರಣದ ಆರ್ಥಿಕ ನೀತಿಗಳು ದೇಶವನ್ನು ನಾಶಗೊಳಿಸುತ್ತಿವೆ. ಮನಮೋಹನ್‌ಸಿಂಗ್ ಸರಕಾರ ಹತ್ತಾರು ಹಗರಣ, ಭ್ರಷ್ಟಾಚಾರದಲ್ಲಿ ಮುಳುಗಿದೆ. 'ಕೋಲ್ಗೆಟ್ ಕುಖ್ಯಾತಿಯ ಕಡತಗಳು ಎಲ್ಲಿ ಎಂದು ಸಂಸತ್ತಿನಲ್ಲಿ ಪ್ರಶ್ನಿಸಿದರೆ ಅವನ್ನು ಕಾಯುವುದು ನನ್ನ ಕೆಲಸವಲ್ಲವೆಂದು ಬೇಜವಾಬ್ದಾರಿ ಹೇಳಿಕೆಯನ್ನು ಪ್ರ ಧಾನಿ ನೀಡುತ್ತಾರೆ. ಪ್ರಧಾನಿಗೆ ಇಡೀ ದೇಶದ ರಕ್ಷಣೆ-ಯ ಜವಾಬ್ದಾರಿಯಿದೆ. ಅದನ್ನು ನಿಭಾಯಿಸಲು ಆಗದಿದ್ದರೆ ಅಧಿಕಾರದಲ್ಲಿ ಉಳಿಯಲು ಅವರಿಗೆ ಒಂದು ನಿಮಿಷವೂ ಹಕ್ಕಿಲ್ಲ" ಎಂದು ಹೇಳಿದರು. ಮನಮೋಹನರಿಗೆ ದೇಶದ ಜನರ ಬಗ್ಗೆ ಚಿಂತಿಸಲು ಸಮಯವಿಲ್ಲ! ಅವರಿಗೆ ಸದಾ ಅಮೇರಿಕಾದ ಹಿತಾಸಕ್ತಿ ಕಾಯುವ ಚಿಂತೆ, ಅವರ ಕಾರ್ಪೋರೇಟ್ ಕಂಪೆನಿಗಳ ಹಿರಕ್ಷಣೆಯದ್ದೇ ಚಿಂತೆ. ಹೀಗಾಗಿ ಅವರನ್ನು ಓಲೈಸಲು ತುದಿಗಾಲ ಮೇಲೆ ನಿಂತಿರುತ್ತಾ-ರೆ ಎಂದೂ ತೀವ್ರವಾಗಿ ಟೀಕಿಸಿದರು. "ಆರೆಸ್ಸೆಸ್ ನ ಗುರಿ ಮದ್ಯಕಾಲೀನ ವ್ಯವಸ್ಥೆ ಜಾರಿ, ಅದಕ್ಕಾಗಿ ಕೋಮುವಾದವನ್ನು ನೆಚಿ-ದೆ. ಸರ್ವಾಧಿಕಾರವನ್ನು ಹೇರಬಯಸುತ್ತದೆ. ಹೀಗಾಗಿ ಅದು ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲುಗೊಳಿಸ ಬಯಸುತ್ತದೆ ಎಂದರು. ಇಂದು ಯು.ಪಿ.ಎ. ಮತ್ತು ಎನ್.ಡಿ.ಎ. ಗಳಿಗೆ ಪರ್ಯಾಯ ರಾಜಕೀಯದ ಅಗತ್ಯವಿದೆ" ಎಂದು ಪ್ರತಿಪಾದಿಸಿದರು.

ಫಾರ್ವರ್ಡ್ ಬ್ಲಾಕ್‌ನ ನಾಯಕ ಕಾಂ. ಕದೀರವನ್‌ರವರು ಕಾರ್ಷಿಕ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆಗೀಡಾಗುತ್ತಿರುವುದರತ್ತ ಗಮನ ಸೆಳೆದು ಎಡ ಪಕ್ಷಗಳ ಮುತುವರ್ಜಿಯನ್ನು ಬಲಪಡಿಸಲು ಜನರಲ್ಲಿ ಮನವಿ ಮಾಡಿದರು.

ಪರ್ಯಾಯ ಧೋರಣೆಗಳಿಗಾಗಿ ಎಡ ಪಕ್ಷಗಳ ಹೋರಾಟ

" ಹಲವು ಹಗರಣ, ದುರಾಡಳಿತದಲ್ಲಿ ಮುಳುಗೇಳುತ್ತಿರುವ ಬಿಜೆಪಿಯು ಜನತೆಯಿಂದ ನೇರ ಮತ ಪಡೆಯಲಾಗದೇ ಮೋದಿ ಮುಖವನ್ನು ಮುಂದೆ ತರುತ್ತಿದ್ದಾರೆ.ಮೋದಿ ಆಢಳಿತ ಜನವಿರೋಧಿಯಾಗಿದೆ. ಹಿಟ್ಲರ್‌ನ ಅನುಯಾಯಿಗಳಾಗಿರುವ ಇವರು 2002 ರಲ್ಲಿ ನಡೆಸಿದ ಜನಾಂಗೀಯ ಮಾರಣ ಹೋಮದ ಸಂದರ್ಭದಲ್ಲಿ ಮಹಿಳೆಯರು, ಮಕ್ಕಳನ್ನೂ ಬಿಡದೇ ಅಲ್ಪಸಂಖ್ಯಾತರ ಮೇಲೆ ನಡೆಸಿದ ದೌರ್ಜನ್ಯ ಮರೆಯುವುದಾದರೂ ಹೇಗೆ?" ಎಂದು ಕಾಂ ಜಿ.ವಿ.ಶ್ರೀರಾಮರೆಡ್ಡಿಯವರು ಪ್ರಶ್ನಿಸುತ್ತಾ ಮಾತನ್ನಾರಂಭಿಸದರು.

"ಮೋದಿ ಕಾರ್ಪೋರೇಟ್ ಕಂಪನಿಗಳ ಅಭ್ಯರ್ಥಿ" ಎಂದ ಅವರು "ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ನೀತಿಗಳು ಒಂದೇ" ಎಂಬುದನ್ನು ವಿವರವಾಗಿ ವಿಶ್ಲೇಷಿಸಿದರು. ರಾಜ್ಯದ ರಾಜಕೀಯದತ್ತ ಹೊರಳಿದ ಅವರು " ಸಿದ್ಧರಾಮಯ್ಯನವರಿಗೆ ಲಗಾಮು ಹಾಕುವ ಪ್ರಯತ್ನಗಳು ಆರಂಭಗೊಂಡಿವೆ. ಕಾಂಗ್ರೆಸ್‌ನ ನೀತಿಗಳೇ ಸಿದ್ಧರಾಮಯ್ಯನವರ ನೀತಿಗಳು ಎಂಬುದನ್ನು ಮರೆಯಬಾರದು. ಈಗಾಗಲೇ ರಾಜ್ಯದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಲು ಸಿದ್ಧತೆ ಆರಂಭಿಸಿದೆ. ಇನ್ನು ಕಾಂಗ್ರೆಸ್ -ಬಿಜೆಪಿಗಳ ನೀತಿಗಳಲ್ಲಿ ಭಿನ್ನತೆ ಎಲ್ಲಿ?" ಎಂದರು.

"ಸಿದ್ಧರಾಮಯ್ಯನವರು ಮೌಢ್ಯತೆಯ ವಿರೋಧಿ ಎಂದು ಹೇಳಲಾಗುತ್ತಿದೆ. ಹಾಗಿದ್ದರೆ ಮಡೆಸ್ನಾನ ಮತ್ತು ಪಂಕ್ತಿಬೇಧವನ್ನು ಇನ್ನೂ ಯಾಕೆ ನಿಷೇಧಿಸಲಿಲ್ಲ ಎಂದು ಪ್ರಶ್ನಿಸಿದರು. ಮೊನ್ನೆ ಸಾಂಬಾರಿನಲ್ಲಿ ಬಿದ್ದು ಸತ್ತ ಮಗು ಬಡವರದು. 70 ಲಕ್ಷದಷ್ಟು ಜನ ಬಡತನದಲ್ಲಿ ನಿಕೃಷ್ಟತೆಯಿಂದ ಜೀವಿಸುತ್ತಿದ್ದಾರೆ. ಇಂತಹ ಸಮಸ್ಯೆಗಳ ವಿರುದ್ಧ, ಜನರ ಹಿತ ರಕ್ಷಣೆಯಲ್ಲಿ ಎಡ ಪಕ್ಷಗಳು ಸದಾ ಹೋರಾಡುತ್ತಿವೆ. ಆ ಮೂಲಕವೇ ಎಡ ಪಕ್ಷಗಳು ನಿಜವಾದ ಪರ್ಯಾಯ ರಾಜಕಾರಣ ಮಾಡುತ್ತಿವೆ, ರಾಜ್ಯದಲ್ಲಿಯೂ ಕಾರ್ಯಕ್ರಮ ರೂಪಿಸಲಿವೆ" ಎಂದು ಹೇಳಿದ ಅವರು ಈ ರಾಜಕೀಯ ಆಂದೋಲನಕ್ಕೆ ಮತ್ತು ಈ ರ್‍ಯಾಲಿಗೆ ಅಪೂರ್ವವಾಗಿ ಸ್ಪಂದಿಸಿದ ಜನತೆಯನ್ನು ಅಭಿನಂದಿಸಿದರು.

ಸಿಪಿಐ ನ ರಾಜ್ಯ ಕಾರ್ಯದರ್ಶಿ ಕಾಂ. ಪಿ.ವಿ.ಲೋಕೇಶರವರು ನಿರ್ಣಯವನ್ನು ಮಂಡಿಸಿ ಮಾತನಾಡಿದರು. ಕಾಂ. ಜಿ.ಆರ್.ಶಿವಶಂಕರ್‌ರವರು ದೇಶದ ಸಂಪತ್ತನ್ನು ಸೃಷ್ಟಿಸುವವರನ್ನು ರಕ್ಷಿಸಬೇಕಿದೆ ಎಂದು ಹೇಳಿ ವಂದನಾರ್ಪಣೆ ಮಾಡಿದರು.

ಆರಂಭದಲ್ಲಿ 'ಇಪ್ಟಾ' ತಂಡ ಮತ್ತು ಎಸ್.ಎಫ್.ಐ.-ಡಿ.ವೈ.ಎಫ್.ಐ ಸಂಗಾತಿಗಳು ಹೋರಾಟದ ಗೀತೆಗಳನ್ನು ಹಾಡಿದರು.

ಕುರುಗೋಡು : ಕೂಲಿಕಾರರಿಂದ ಹಗಲು ರಾತ್ರಿ ಧರಣಿ

ಸರ್ಕಾರಿ ಜಾಗಗಳಲ್ಲಿ ವಾಸ ಇರುವ ಬಡವರಿಗೆ ಹಕ್ಕುಪತ್ರ ಕೊಡಬೇಕು, ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಬೇಕು, ಸ್ವಂತ ನಿವೇಶನ ಇಲ್ಲದ ಕೂಲಿಕಾರರಿಗೆ ನಿವೇಶನ ಮಂಜೂರು ಮಾಡಬೇಕು, ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೂಲಿಕಾರರಿಗೆ ಸರಿಯಾಗಿ ಕೆಲ್ಸ ಕೊಡಬೇಕು, ಎಲ್ಲಾ ಕೂಲಿಕಾರ ಕುಟುಂಬಗಳಿಗೆ ಬಿಪಿಎಲ್ ರೇಷನ್ ಕಾರ್ಡ್ ಕೊಡಬೇಕು ಎಂದು ಒತ್ತಾಯಿಸಿ ಕುರುಗೋಡು ಪಟ್ಟಣ ಸೇರಿದಂತೆ ಓರ್ವಾಯಿ, ಗುತ್ತಿಗನೂರು, ವೀರಾಪುರ, ಕಲ್ಲಂಬ, ಬಾದನಹಟ್ಟಿ ಮತ್ತು ವದ್ದಟ್ಟಿ ಗ್ರಾಮಗಳ ಕೂಲಿಕಾರರು ಇಲ್ಲಿನ ತಹಸಿಲ್ದಾರರ ಕಛೇರಿ ಎದುರು ಸೆ. 30 ರಿಂದ 2 ದಿನಗಳ ಹಗಲು ರಾತ್ರಿ ಧರಣಿ ಸತ್ಯಾಗ್ರಹ ನಡೆಸಿದರು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಎಸ್. ಪಿ. ಮಹಮ್ಮದ್ ಖಾನ್, ಎಚ್. ಎಂ. ವಿಶ್ವನಾಥಸ್ವಾಮಿ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ತಾಲೂಕು ಘಟಕದ ಅಧ್ಯಕ್ಷೆ ಚೌಕಿನ ಸೋಮಕ್ಕ, ಉಪಾಧ್ಯಕ್ಷ ರಾಮಲಿಂಗಪ್ಪ, ಮಂಜುನಾಥ, ಗುರುಸಿದ್ದಪ್ಪ, ಮಾರೆಮ್ಮ, ಕಾರ್ಯದರ್ಶಿ ಗಂಗಾಧರ, ನೀಲಮ್ಮ ಹೊನ್ನೂರಪ್ಪ ಹೋರಾಟದ ನೇತೃತ್ವವಹಿಸಿದರು.



-ಎಸ್.ಪಿ. ಮಹ್ಮದ್ ಖಾನ್

ಸರಕಾರದ ಕಾರ್ಮಿಕ ...

ಪುಟ 8 ರಿಂದ

ವೈದ್ಯರಿಬ್ಬರನ್ನು ತುರ್ತಾಗಿ ನೇಮಕ ಮಾಡಲು, ಕುಂದಾಪುರದಲ್ಲಿ ಲೋಕಲ್ ಆಫೀಸನ್ನು ತೆರೆಯಲು ಹಾಗೂ ಕಂಡ್ಲೂರಿನಲ್ಲಿ ಒಂದು ಪೂರ್ಣಕಾಲದ ಡಿಸ್ಪೆನ್ಸರಿ ತೆರೆಯುವ ಮೂಲಕ ಆ ಪ್ರದೇಶಗಳಲ್ಲಿರುವ ಕಾರ್ಮಿಕರಿಗೆ ಇ.ಎಸ್.ಐ ಸೌಲಭ್ಯಗಳು ದೊರಕಿಸುವ ಕುರಿತು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಹಂಚು ಕಾರ್ಮಿಕರಿಗೆ ಎಲ್ಲರಿಗೂ ರೇಷನ್ ಕಾರ್ಡು ಹಾಗೂ ಒಂದು ಕುಟುಂಬಕ್ಕೆ 35 ಕೆ.ಜಿ ದವಸದಾನ್ಯ ನೀಡಲು ಒತ್ತಾಯಿಸಿ, ಭವಿಷ್ಯನಿಧಿ ಸೌಲಭ್ಯ ಪಡೆಯಲು ಕಾರ್ಮಿಕರ ವೇತನದ ಮಿತಿಯನ್ನು ಹೆಚ್ಚು ಮಾಡಲು ಹಾಗೆಯೇ ವೃತ್ತಿ ತೆರಿಗೆಗೆ ಸಂಬಂಧಪಟ್ಟು ಕೂಡಾ ವೇತನದ ಮಿತಿಯನ್ನು ಹೆಚ್ಚು ಮಾಡುವಂತೆ ರಾಜ್ಯ ಮತ್ತು ಕೇಂದ್ರ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

2013-14ನೇ ಸಾಲಿಗೆ ಸಂಘದ ಪದಾಧಿಕಾರಿಗಳನ್ನಾಗಿ 9 ಮಂದಿಯನ್ನು ಆಯ್ಕೆ ಮಾಡಲಾಯಿತು. ವಿ.ನರಸಿಂಹ ಅಧ್ಯಕ್ಷರಾಗಿ, ಬಾಲಕೃಷ್ಣ ಶೆಟ್ಟಿ, ಮಹಾಬಲ ವಡೇರಹೋಬಳಿ ಮತ್ತು ರಾಜೀವ ಶೆಟ್ಟಿಯವರನ್ನು ಉಪಾಧ್ಯಾಕ್ಷರಾಗಿ, ಎಚ್. ನರಸಿಂಹನವರನ್ನು ಪ್ರಧಾನ ಕಾರ್ಯದರ್ಶಿಯವರಾಗಿ, ಡಿ. ಲಕ್ಷ್ಮಣ, ಜಿ.ಡಿ ಪಂಜು ಮತ್ತು ಎಲ್.ಶ್ರೀನಿವಾಸ ಇವರನ್ನು ಕಾರ್ಯದರ್ಶಿಗಳಾಗಿ ಹಾಗೂ ಜಯಂತ್‌ನವರನ್ನು ಕೋಶಾಧಿಕಾರಿಯಾಗಿ ಆಯ್ಕೆ ಮಾಡಲಾಯಿತು. 61 ಮಂದಿಯನ್ನು ಕಾರ್ಯಕಾರಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

– ಎಚ್.ನರಸಿಂಹ

ಜನಶಕ್ತಿ
ಕನ್ನಡ ವಾರಪತ್ರಿಕೆ


ತೀರದ ಖಾಸಗೀಕರಣ ದಾಹ: ಈಗ ಏರ್ ಇಂಡಿಯಾ, ವಿಮಾನ ನಿಲ್ದಾಣಗಳ ಸರದಿ

ವೇದರಾಜ ಎನ್.ಕೆ.

ಯುಪಿಎ-2 ವಿಮಾನಯಾನ ಮಂತ್ರಿಗಳು ಈವಾರ ಆರಂಭದಲ್ಲಿ ಸಾರ್ವಜನಿಕ ವಲಯದ ವಿಮಾನಯಾನ ಸಂಸ್ಥೆ, ಏರ್ ಇಂಡಿಯಾವನ್ನು ಖಾಸಗೀಕರಿಸುವ ಸೂಚನೆ ನೀಡಿದರು. ಈ ಬಗ್ಗೆ ಬಂದ ವ್ಯಾಪಕ ಪ್ರತಿಕ್ರಿಯೆಗಳನ್ನು ನೋಡಿದ ನಂತರ ಯುಪಿಎ-2 ಸರಕಾರಕ್ಕೆ ಇನ್ನು ಉಳಿದಿರುವುದು ಆರು ತಿಂಗಳಷ್ಟೇ, ಈ ಅವಧಿಯಲ್ಲಿ ಖಾಸಗೀಕರಣ ಹೇಗೆ ಸಾಧ್ಯ ಎಂಬ "ಜ್ಞಾನೋದಯ" ಮಾತಾಡಿದ್ದಾರೆ.

ಮೊದಲಿಗೆ, ಖಾಸಗೀಕರಣದ ವಿಚಾರವಾದರೂ ಏಕೆ ಬಂತು? ಏಕೆಂದರೆ ಏರ್ ಇಂಡಿಯಾದ ಹಣಕಾಸು ಪರಿಸ್ಥಿತಿ ಶೋಚನೀಯವಾಗಿದೆ ಎಂಬುದು ಅವರು ಕೊಟ್ಟಿದ್ದ ಕಾರಣ. ಅದು ನಿಜವಾಗಿದ್ದರೆ, ಅದಕ್ಕೆ ಕಾರಣ ಯಾರು? ಅದೇ ನಾಗರಿಕ ವಿಮಾನಯಾನ ಇಲಾಖೆ, ಅದೇ ಯುಪಿಎ-2 ಸರಕಾರ ಎಂಬುದನ್ನು ಅವರು ಮರೆಮಾಚುತ್ತಾರೆ.

ಮೊದಲಿಗೆ, ಏರ್ ಇಂಡಿಯಾ ಮತ್ತು ಏರ್‌ಲೈನ್ಸ್ ಸಂಸ್ಥೆಗಳನ್ನು ಯಾವುದೇ ವಿಶ್ಲೇಷಣೆ ನಡೆಸದೆ ವಿಲೀನಗೊಳಿಸುವ 'ಪ್ರಯೋಗ' ನಡೆಸಲಾಯಿತು. ಈ ಬೇಜವಾಬ್ದಾರಿತನ ಇಲ್ಲಿಗೇ ನಿಲ್ಲಲಿಲ್ಲ. ಭಾರಿ ಹಣ ತೆತ್ತು ಹೊಸ ವಿಮಾನಗಳನ್ನು ಖರೀದಿಸಲಾಯಿತು. ಆದರೆ ಅವನ್ನು ತಕ್ಷಣ ಹೇಗೆ ಬಳಸಬೇಕೆಂಬ ಯೋಜನೆಯೇ ಇರಲಿಲ್ಲ. ಸಾರ್ವಜನಿಕ ವಲಯದ ಉದ್ದಿಮೆಗಳ ಸಮಿತಿ(ಸಿಒಪಿಯು) ಕೂಡ ಈ ಬಾಬ್ತಿನಲ್ಲಿ ಏರ್ ಇಂಡಿಯಾ-ಕ್ಕೆ ಆಗಿರುವ ಭಾರೀ ನಷ್ಟಕ್ಕೆ ಸರಕಾರ ಮತ್ತು ವಿಮಾನಯಾನ ಇಲಾಖೆ ಹೊಣೆ ಎಂದು ಒಪ್ಪಿಕೊಂಡಿದೆ.ಅದು ಕೆಲವು ಸರಪಡಿಕೆ ಕ್ರಮಗಳನ್ನು ಕೂಡ ಶಿಫಾರಸು ಮಾಡಿತ್ತು. ಆದರೆ ಯುಪಿಎ-2 ಸರಕಾರ ಆ ಶಿಫಾರಸುಗಳನ್ನು ಉಪೇಕ್ಷಿಸಿದೆ. ಆಮೂಲಕ ಏರ್ ಇಂಡಿಯಾದ ಹಣಕಾಸು ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸಿದೆ, ಇದು ಖಾಸಗೀಕರಣದ ಪ್ರಸ್ತಾವವನ್ನು ಮುಂದಿಡಲು ಅನುಕೂಲ ಮಾಡಿಕೊಳ್ಳಲು ಉದ್ದೇಶಪೂರ್ವಕವಾಗಿಯೇ ಮಾಡಿದ ಉಪೇಕ್ಷೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಹೇಳಿಕೆಯೊಂದರಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.



ಏರ್ ಇಂಡಿಯಾ ಯುಪಿಎ ಸರಕಾರದ ಸಚಿವ ಸಂಪುಟದ ಆಸ್ತಿಯೇನಲ್ಲ, ಅದು ದೇಶದ ಆಸ್ತಿ ಎಂದು ಸಿಐಟಿಯು ನೆನಪಿಸಿದೆ.

ನಾಗರಿಕ ವಿಮಾನಯಾನ ಇಲಾಖೆಯ ಖಾಸಗೀಕರಣ ದಾಹ ಇಷ್ಟಕ್ಕೇ ನಿಂತಿಲ್ಲ. ಅದು ಇಡೀ ನಾಗರಿಕ ವಿಮಾನಯಾನ ವಲಯವನ್ನೇ ಖಾಸಗಿಯವರಿಗೆ ಅರ್ಪಿಸಲು ಸಿದ್ಧವಾಗಿ ನಿಂತಿದೆ- ಅದೂ ದೇಶದ ಖಜಾನೆಯಿಂದ

ಪುಟ 15 ಕ್ಕೆ

ರಸಗೊಬ್ಬರ ಉತ್ಪಾದನೆ ಇಳಿಯಲು ರಿಲಯನ್ಸ್, ಸರಕಾರ ಕಾರಣ-ಸಿಎಜಿ

ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್(ಆರ್‌ಐಎಲ್)ನ ಕೆಜಿ ಡಿ6 ನೈಸರ್ಗಿಕ ಅನಿಲ ನಿಕ್ಷೇಪದ ಪ್ರಕರಣಗಳನ್ನು ಈ ಅಂಕಣದಲ್ಲಿ ಹಲವು ಬಾರಿ ಪರಿಶೀಲಿಸಿದ್ದೇವೆ. ಅದೀಗ ದೇಶದ ಮಹಾಲೆಕ್ಕ ಪರಿಶೋಧಕರು ಅಂದರೆ ಸಿಎಜಿಯ ವಿಮರ್ಶೆಗೆ ಮತ್ತೊಮ್ಮೆ ಗುರಿಯಾಗಿದೆ. ಅದರ ಇತರ ವ್ಯವಹಾರಗಳಂತೆ ಯುಪಿಎ-2 ಸರಕಾರವೂ ಅದರ ಜೊತೆಗೇ ವಿಮರ್ಶೆಗೆ, ಟೀಕೆಗೆ ಒಳಪಡುತ್ತಿದೆ.

ಆರ್‌ಐಎಲ್ ಒಂದೆಡೆ ತಾಂತ್ರಿಕ ನೆವಗಳನ್ನು ಕೊಟ್ಟು, ಉತ್ಪಾದನೆಯನ್ನು ಬೇಕೆಂದೇ ಕಡಿಮೆ ಮಾಡಿ ನೈಸರ್ಗಿಕ ಅನಿಲದ ಬೆಲೆಗಳನ್ನು ಏರಿಸುವಂತೆ ಸರಕಾರದ ಮೇಲೆ ಒತ್ತಡವನ್ನು, ಸಾಕಷ್ಟು ಯಶಸ್ವಿಯಾಗಿಯೇ ಹೇರುತ್ತಿದ್ದರೆ, ಇನ್ನೊಂದೆಡೆ ಖರ್ಚುಗಳಲ್ಲಿ 'ಚಿನ್ನದ ಲೇಪನ'ದ(ಅಂದರೆ ಹಿಗ್ಗಿಸಿ ತೋರಿಸುವ) ಮೂಲಕ ರಾಷ್ಟ್ರದ ಬೊಕ್ಕಸಕ್ಕೆ ಕರಾರಿನ ಪ್ರಕಾರ ಬರಬೇಕಾದ ಆದಾಯವನ್ನು ವಂಚಿಸುವ ಯತ್ನ ನಡೆಸಿರುವುದರ ಬಗ್ಗೆ ಸಿಎಜಿ ವಿಮರ್ಶೆಯನ್ನು ಈಗಾಗಲೇ ನೋಡಿದ್ದೇವೆ.

ಇದು ದೇಶದ ರಸಗೊಬ್ಬರ ಉತ್ಪಾದನೆಯ ಮೇಲೂ, ಆಮೂಲಕ ಸರಕಾರದ ರಸಗೊಬ್ಬರ ಸಬ್ಸಿಡಿ ಹೊರೆಯ ಮೇಲೂ ದುಷ್ಪರಿಣಾಮ ಬೀರಿದೆ ಎಂದೂ ಈಗ ಸಿಎಜಿ ವಿಮರ್ಶೆ ಮಾಡಿದೆ.

ದೇಶದಲ್ಲಿ ರಸಗೊಬ್ಬರ ಉತ್ಪಾದನೆ ಕಡಿಮೆಯಾಗುತ್ತಿದೆ. ಇದಕ್ಕೆ ಒಂದು ಮುಖ್ಯ ಕಾರಣ ರಸಗೊಬ್ಬರ ಉತ್ಪಾದನೆಗೆ ಬೇಕಾದ ನೈಸರ್ಗಿಕ ಅನಿಲದ ಪೂರೈಕೆಯಲ್ಲಿ ಆಗಿರುವ ಕೊರತೆ. ಇಲ್ಲಿಯೇ ಆರ್‌ಐಎಲ್‌ನ ಪಾತ್ರ ಇರುವುದು. ಅದು ಸರಕಾರದೊಂದಿಗೆ ಮಾಡಿಕೊಂಡ ಕಾಂಟ್ರಾಕ್ಟ್ ಪ್ರಕಾರ ಕೆಜಿ ಡಿ6 ನಲ್ಲಿ ನೈಸರ್ಗಿಕ ಅನಿಲ ಉತ್ಪಾದನೆ ಮಾಡುವಲ್ಲಿ ವಿಫಲವಾಗಿರುವುದು. ಮತ್ತೊಂದು ಕಾರಣ ರಸಗೊಬ್ಬರ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸರಕಾರದ ವಿಫಲತೆ.

ಸಾಕಷ್ಟು ನೈಸರ್ಗಿಕ ಅನಿಲ ಪೂರೈಕೆಯಾಗದೆ ರಸಗೊಬ್ಬರ ಉತ್ಪಾದನೆ ಇಳಿದು ಸರಕಾರ ಅದನ್ನು ಆಮದು ಮಾಡಿಕೊಳ್ಳಬೇಕಾಗಿ ಬಂದಿದೆ. ಇದರಿಂದ ಸಾವಿರಾರು ಕೋಟಿ ರೂ.ಗಳ ಹೆಚ್ಚುವರಿ ಸಬ್ಸಿಡಿ ಹೊರೆ ಸರಕಾರದ ಮೇಲೆ ಬಿದ್ದಿದೆ.

ಯುಪಿಎ ಸರಕಾರ ದೇಶದಲ್ಲಿನ 17 ರಸಗೊಬ್ಬರ ಕಾರ್ಖಾನೆಗಳನ್ನು ಆಧುನೀಕರಿಸುವ, ನಾಫ್ತಾ ಆಧಾರಿತ, ಉರವಲು ತೈಲ ಆಧಾರಿತ ಮತ್ತು ಗಂಧಕ ಆಧಾರಿತ ಉತ್ಪಾದನೆಯನ್ನು ನೈಸರ್ಗಿಕ ಅನಿಲ ಆಧಾರಿತ ಉತ್ಪಾದನೆಗೆ ಮೂರು ವರ್ಷಗಳಲ್ಲಿ ಪರಿವರ್ತಿಸುವ ಗುರಿ ಇಟ್ಟು-ಕೊಂಡಿತ್ತು. ಅದನ್ನು ತಲುಪಲಿಲ್ಲ. ಅದ-ಕ್ಕೆ ಒಂದು ಕಾರಣ, ಮೇಲೆ ಹೇಳಿದಂತೆ ನಿರೀಕ್ಷಿತ ಪ್ರಮಾಣದಲ್ಲಿ ನೈಸರ್ಗಿಕ ಅನಿಲದ ಪೂರೈಕೆಯಾಗದಿರುವುದು.

ಪೆಟ್ರೋಲ್, ಡೀಸೆಲ್, ಸೀಮೆ ಎಣ್ಣೆ, ಅಡುಗೆ ಅನಿಲದ ಸಬ್ಸಿಡಿ ಹೊರೆ ಹೆಚ್ಚಿದೆಯೆಂದು ಅದ-ಕ್ಕೆ ಏನೇನೂ ಕಾರಣರಲ್ಲದ ಜನಸಾಮಾನ್ಯರು ಅವಕ್ಕೆಲ್ಲ ಹೆಚ್ಚು ಬೆಲೆ ತೆರುವಂತೆ ಮಾಡುವ, ಈ ರೀತಿ ದರ ಹೆಚ್ಚಿಸಿ, ಅದನ್ನೇ ಕಾರಣ ಮಾಡಿಕೊಂಡು ಬಸ್, ರೈಲು, ಸಾಗಾಣಿಕೆ ದರಗಳನ್ನು ಹೆಚ್ಚಿಸುವ ಸರಕಾರ, ಸಾವಿರಾರು ಕೋಟಿ ರೂ.ಗಳ ರಸಗೊಬ್ಬರ ಸಬ್ಸಿಡಿ ಹೊರೆ ಹೆಚ್ಚಾಗಲು ಕಾರಣವಾದ ಆರ್‌ಐಎಲ್ ಅದಕ್ಕೆ ಬೆಲೆ ತೆರುವಂತೆ ಮಾಡಲು ಹಿಂದೇಟು ಹಾಕುತ್ತಿದೆ, ಅದೂ ದೇಶದ ಮಹಾ ಲೆಕ್ಕ ಪರಿಶೋಧಕರು ಅದನ್ನು ದೃಢೀಕರಿಸಿದ ನಂತರವೂ. ಬದಲಿಗೆ ಅಂತಹ ಕಾರ್ಪೊರೇಟ್‌ಗಳಿಗೆ ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳಲು ಮತ್ತಷ್ಟು ದಾರಿಗಳನ್ನು ಕಲ್ಪಿಸುವ ನೀತಿಗಳನ್ನೇ ಅನುಸರಿಸುತ್ತಿದೆ.

ನಮ್ಮ ವೈಮಾನಿಕ ಸೇನೆಯ ಟೆಂಡರ್ ನಮ್ಮ ಸಾರ್ವಜನಿಕ ವಲಯಕ್ಕೆ ನಿಷಿದ್ಧ!

ಇಂಡಿಯನ್ ಏರ್‌ಫೋರ್ಸ್ ಅಂದರೆ ಭಾರತಿಯ ವೈಮಾನಿಕ ಸೇನೆ 56 ಸಾರಿಗೆ ವಿಮಾನಗಳನ್ನು ಪಡೆಯಲು ಟೆಂಡರ್ ಕರೆದಿದೆ. ಇದರ ಮೊತ್ತ 12,000 ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆ. ಅದರೆ ಸಾರ್ವಜನಿಕ ವಲಯದ ಉದ್ದಿಮೆಗಳು ಇದರಲ್ಲಿ ಭಾಗವಹಿಸುವಂತಿಲ್ಲ.

ಇದು ಯುಪಿಎ-2 ಸರಕಾರದ ಖಾಸಗೀ ಮೋಹದ ಇನ್ನೊಂದು ಸ್ವರೂಪ. ಆದರೆ ಇಲ್ಲಿ ಒಂದು ವಿರೋಧಾಭಾಸವೆಂದರೆ ಸ್ವತಃ ಒಬ್ಬ ಯುಪಿಎ-2 ಮಂತ್ರಿಗಳೇ, ಭಾರೀ ಉದ್ದಿಮೆಗಳ ಮಂತ್ರಿ, ಇದನ್ನು ಪ್ರತಿಭಟಿಸಿ ಪ್ರಧಾನ ಮಂತ್ರಿಗಳಿಗೇ ಪತ್ರ ಬರೆದಿದ್ದಾರೆ. ಅವರೇನೂ ಯುಪಿಎ-2 ಖಾಸಗೀಕರಣ ಮೋಹಕ್ಕೆ ಹೊರತಾದವರಲ್ಲ ಎಂದು ಈ ಹಿಂದೆ ತೋರಿಸಿಕೊಟ್ಟವರೇ. ಅಷ್ಟೇ ಅಲ್ಲ, ಟೆಂಡರಿಗೆ ಪ್ರವೇಶ ನಿಷಿದ್ಧಗೊಳಿಸಿದ್ದ ರಕ್ಷಣಾ ಖರೀದಿ ಮಂಡಳಿಯ ಅಧ್ಯಕ್ಷರು ಸ್ವತಃ ಯುಪಿಎ-2 ರಕ್ಷಣಾ ಮಂತ್ರಿಗಳು! ಭಾರೀ ಉದ್ದಿಮೆಗಳ ಮಂತ್ರಿಗಳು ಇವರಿಗೂ ಪತ್ರ ಬರೆದಿದ್ದಾರಂತೆ.

ಇದೊಂದು ಸರಕಾರೀ ಖರೀದಿ, ಆದ್ದ-ರಿಂದ ಸಮರ್ಥ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಮಾನ ಅವಕಾಶ ಮತ್ತು 'ಸಮತಟ್ಟಾದ ಆಟದ ಮೈದಾನ' ಒದಗಿಸಬೇಕು, ಆಗಲೇ ಆರೋಗ್ಯಕರ ಪ್ರತಿಸ್ಪರ್ಧೆಗೆ ಪ್ರೋತ್ಸಾಹ ಸಿಗುವುದು ಎಂಬ 'ಜ್ಞಾನೋದಯ'ದ ಮಾತುಗಳನ್ನು ಈ ಮಂತ್ರಿಗಳು ಆಡಿದ್ದಾರೆ.

ಈ ವರ್ಷದ ಮೇ ತಿಂಗಳಲ್ಲಿ ರಕ್ಷಣಾ ಇಲಾಖೆ ವಿದೇಶಿ ಕಂಪನಿಗಳಾದ ಅಮೆರಿಕಾದ ಲಾಕ್‌ಹಿಡ್ ಮಾರ್ಟಿನ್, ಸ್ವೀಡನ್ನಿನ ಸಾಬ್, ರಶ್ಯಾದ ರೊಸೊಬೊರೊನೆಕ್ಸ್‌ಪೋರ್ಟ್, ಸ್ಪೇನಿನ ಏರ್‌ಬಸ್, ಇಟೆಲಿಯ ಅಲೆನಿಯ ಮತ್ತು ಬ್ರೆಝಿಲಿನ ಎಂಬ್ರೆಯರ್ ಕಂಪನಿಗಳಿಗೆ ಟೆಂಡರ್ ನೀಡಲಾಗಿದೆ. ಅವರು ಖಾಸಗೀ ಭಾರತೀಯ ಕಂಪನಿಗಳ ಜೊತೆಗೂಡಿ ಇವನ್ನು ತಯಾರಿಸಬೇಕಂತೆ. ಇದರಲ್ಲಿ ಟಾಟಾ, ಮಹೀಂದ್ರ, ರಿಲಯನ್ಸ್ ಮತ್ತು ಎಲ್ ಅಂಡ್ ಟಿ ಈ ವಿದೇಶಿ ಕಂಪನಿಗಳ ಜೊತೆಗಾರರಾಗುವ ಸ್ಪರ್ಧೆಯಲ್ಲಿದ್ದಾರೆ. ಸಾರ್ವಜನಿಕ ವಲಯದ ಹಿಂದುಸ್ತಾನ್ ಏರೊನಾಟಿಕ್ಸ್‌ಗೆ ಟೆಂಡರಿನಲ್ಲಿ ಭಾಗವಹಿಸಲು ಅವಕಾಶ ನೀಡಿಲ್ಲ.

ಇದು ಯುಪಿಎ-2 ಸರಕಾರದ ಖಾಸಗೀಕರಣ ತತ್ವಕ್ಕೆ ಅನುಗುಣವಾಗಿಯೇ ಇದೆ. ಆದರೂ ಭಾರೀ ಉದ್ದಿಮೆಗಳ ಮಂತ್ರಿಗಳು ವಿರೋಧಿಸುತ್ತಿದ್ದಾರೇಕೆ ಎಂಬ ಪ್ರಶ್ನೆ ಸಹಜವಾಗಿ ಎದ್ದಿದೆ. ಪ್ರಧಾನ ಮಂತ್ರಿಗಳು ಈ ಬಗ್ಗೆ ಏನು ಹೇಳಿದ್ದಾರೋ ವರದಿಯಾಗಿಲ್ಲ. ಆದರೆ ರಕ್ಷಣಾ ಮಂತ್ರಿಗಳು ಈಗ ಈ ಬಗ್ಗೆ ಪರಿಶೀಲಿಸುವಂತೆ ತಮ್ಮ ಇಲಾಖೆಗೆ ಹೇಳಿರುವುದಾಗಿ ವರದಿಯಾಗಿದೆ.

ಆಧಾರವಿಲ್ಲದ 'ಆಧಾರ್'

'ಆಧಾರ್' ಕಾರ್ಡ್ ಕಡ್ಡಾಯವಲ್ಲ ಎಂದು ಸುಪ್ರಿಂ ಕೋರ್ಟಿನಲ್ಲಿ ಹೇಳಿದ ಯುಪಿಎ-2 ಸರಕಾರ ಈಗ ಅದರ ಕಡ್ಡಾಯಕ್ಕೆ ಕಾನೂನುಬದ್ಧತೆ ಪಡೆಯಲು ಹರಸಾಹಸ ಪಡುತ್ತಿದೆ. ಸಾಮಾಜಿಕ ಸೌಲಭ್ಯಗಳನ್ನು ಪಡೆಯಲು, ವಿಶೇಷವಾಗಿ ಅನಿಲ ಸಿಲಿಂಡರ್‌ಗಳಿಗೆ ಸಬ್ಸಿಡಿ ಕೊಡಲು ಅದನ್ನು ಕಡ್ಡಾಯ ಮಾಡುವ ಅಗತ್ಯವಿದೆಯಾದ್ದರಿಂದ ಸುಪ್ರಿಂ ಕೋರ್ಟ್ ತನ್ನ ಆದೇಶವನ್ನು ಮಾರ್ಪಡಿಸಬೇಕು ಎಂದು ಅದು ಸುಪ್ರಿಂ ಕೋರ್ಟ್‌ಗೆ ಮನವಿ ಮಾಡಿತ್ತು. ಆದರೆ ಸುಪ್ರಿಂಕೋರ್ಟ್ 'ಆಧಾರ್' ಇಲ್ಲ ಎಂಬ ಕಾರಣಕ್ಕೆ ಯಾವ ಸೌಲಭ್ಯವನ್ನೂ ನಿರಾಕರಿಸುವಂತಿಲ್ಲ ಎಂಬ ತನ್ನ ತಾಕೀತನ್ನು ಮಾರ್ಪಡಿಸಲು ನಿರಾಕರಿಸಿದೆ.

ಪ್ರಜಾಪ್ರಭುತ್ವವಾದಿಗಳು ವಿರೋಧಿಸಿದರೂ ನಗದು ವರ್ಗಾವಣೆಗೆ ಇದನ್ನು ಕಾನೂನು ಬಾಹಿರವಾಗಿ ಬಳಸಿರುವ ಸರಕಾರ ಈಗ ಅದಿಲ್ಲದೆ ಅಡುಗೆ ಅನಿಲ ಸಬ್ಸಿಡಿ ಕೊಡಲಾಗುವುದಿಲ್ಲ ಎಂದು ಮೊಸಳೆ ಕಣ್ಣೀರು ಹಾಕುತ್ತಿದೆ.

ಜಗದಗಲ

ಶರತ್‌ಚಂದ್ರ

ಜರ್ಮನಿಯಲ್ಲಿ ಮರ್ಕೆಲ್ ಪುನರಾಯ್ಕೆ



ಜರ್ಮನಿಯಲ್ಲಿ ಇತ್ತೀಚೆಗೆ ಕೇಂದ್ರ ಸರ್ಕಾರಕ್ಕೆ ನಡೆದ ಚುನಾವಣೆಯಲ್ಲಿ ಛಾನ್ಸಲರ್ ಎಂಜೆಲಾ ಮರ್ಕೆಲ್ ನಾಯಕತ್ವದ ನಡು-ಬಲಪಂಥೀಯ ಸಿಡಿಯು/ಸಿಎಸ್‌ಯು (ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಯುನಿಯನ್/ಕ್ರಿಶ್ಚಿಯನ್ ಸೋಶಿಯಲ್ ಯೂನಿಯನ್) ರಂಗ ಅತ್ಯಂತ ಹೆಚ್ಚಿನ ಮತ ಗಳಿಸಿದ್ದು, ಮರ್ಕೆಲ್ ನಾಯಕತ್ವದ ಸರ್ಕಾರ ಬರುವುದು ಖಚಿತವಾಗಿದೆ. ಮರ್ಕೆಲ್ ಅವರ ಸಿಡಿಯು/ಸಿಎಸ್‌ಯು ರಂಗ ಶೇಕಡಾವಾರು ಮತಗಳಿಕೆ ಹೆಚ್ಚಿಸಿಕೊಂಡದ್ದು ಮತ್ತು ನಿಚ್ಚಳ ಬಹುಮತಕ್ಕೆ ಬಹಳ ಹತ್ತಿರ ಬಂದಿದ್ದು ರಾಜಕೀಯ ವಲಯಗಳಲ್ಲಿ ಆಶ್ಚರ್ಯ ತಂದಿದೆ. ಇತ್ತೀಚೆಗೆ ನಡೆದ ಹಲವು ಪ್ರಾಂತೀಯ ಚುನಾವಣೆಗಳಲ್ಲಿ ಆಳುವ ರಂಗಕ್ಕೆ ತೀವ್ರ ಹಿನ್ನಡೆಯಾಗಿದ್ದು, ಅದು 16 ಪ್ರಾಂತ್ಯಗಳಲ್ಲಿ ಕೇವಲ 7ರಲ್ಲಿ ಅಧಿಕಾರದಲ್ಲಿದೆ. ಈ ಬೆಳವಣಿಗೆ ಮತ್ತು ಆರ್ಥಿಕ ಸ್ಥಗಿತತೆ ಮುಂತಾದ ಇತರ ಕಾರಣಗಳಿಂದ ಆಳುವ ರಂಗ ಗಮನಾರ್ಹ ರೀತಿಯಲ್ಲಿ ಮತ ಕಳೆದುಕೊಂಡು ಸೋಲುವುದು ಎಂದು ನಿರೀಕ್ಷಿಸಲಾಗಿತ್ತು.

ಆದರೆ ಅದರ ಪ್ರಮುಖ ಮಿತ್ರ-ಪಕ್ಷವಾಗಿದ್ದ ಬಲಪಂಥೀಯ ಎಫ್‌ಡಿಪಿ(ಫ್ರೀ ಡೆಮೊಕ್ರಾಟ್ ಪಾರ್ಟಿ) ಮೊದಲ ಬಾರಿಗೆ ಶೇ.5ಕ್ಕಿಂತ ಕಡಿಮೆ ಮತಗಳಿಸಿ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಪಡೆದಿಲ್ಲ. ವಿರೋಧ ಪಕ್ಷಗಳಾದ ನಡು-ಎಡಪಂಥೀಯ ಎಸ್‌ಡಿಪಿ (ಸೋಶಿಯಲ್ ಡೆಮೊಕ್ರಾಟ್ ಪಾರ್ಟಿ), ಪರಿಸರವಾದಿ ಗ್ರೀನ್ ಪಾರ್ಟಿ, ಎಡ ಪಕ್ಷಗಳಿಗೆ ಒಟ್ಟಾಗಿ ಬಹುಮತದ ಇದೆ. ಆದರೂ ಅದು ಸರ್ಕಾರ ರಚಿಸುವ ಸಾಧ್ಯತೆ ಇಲ್ಲವೆ ಇಲ್ಲ ಎನ್ನುವಷ್ಟು ಕಡಿಮೆ ಎಂದು ಹೇಳಲಾಗಿದೆ. ಸಿಡಿಯು/ಸಿಎಸ್‌ಯು ಮತ್ತು ಎಸ್‌ಡಿಪಿ ಎರಡೂ ಎಡ ಪಕ್ಷದ ಬೆಂಬಲ ಕೇಳುವುದೂ ಇಲ್ಲ ಎಂದು ಘೋಷಿಸಿವೆ. ಮರ್ಕೆಲ್ ಸರ್ಕಾರ ರಚಿಸಲು ಎಸ್‌ಡಿಪಿ ಅಥವಾ ಗ್ರೀನ್ ಪಾರ್ಟಿಯ ಬೆಂಬಲ ಗಳಿಸಿಕೊಳ್ಳಬೇಕಾಗಿದ್ದು ಇವರೆಡೂ ಅದಕ್ಕೆ ಭಾರೀ ಆಸಕ್ತಿ ತೋರಿಸಿಲ್ಲವಾದ್ದರಿಂದ ಸರ್ಕಾರ ರಚನೆಯ ಪ್ರಕ್ರಿಯೆ ಬಹಳ ಸಮಯ ತೆಗೆದುಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

630 ಸೀಟುಗಳಿರುವ ಪಾರ್ಲಿಮೆಂಟಿನಲ್ಲಿ ಸಿಡಿಯು/ಸಿಎಸ್‌ಯು ಶೇ.41.5 ಮತಗಳಿಸಿ 311 ಸೀಟು ಗಳಿಸಿತು. ನಿಚ್ಚಳ ಬಹುಮತಕ್ಕೆ ಕೇವಲ 4 ಸೀಟು ಕಡಿಮೆ ಇದೆ. ಕಳೆದ ಚುನಾವಣೆಗಳಿಗಿಂತ ಶೇ. 7.8 ಹೆಚ್ಚಿನ ಮತ ಗಳಿಸಿದೆ. ಎಫ್‌ಡಿಪಿ ಮತಗಳಿಕೆ ಶೇ. 9.8 ರಷ್ಟು ಕುಸಿದಿದ್ದು, ಈ ಮತಗಳು ಮುಖ್ಯವಾಗಿ ಆ ಪಕ್ಷದ ಮತದಾರರಿಂದ ಬಂದಿದೆ. ಎಎಫ್‌ಡಿ (ಜರ್ಮನಿಗೆ ಬದಲಿ) ಎಂಬ ಯುರೋ-ವಿರೋಧಿ ಬಲಪಂಥೀಯ ಪಕ್ಷ ಸಹ ಸ್ವಲ್ಪ ಮತಗಳನ್ನು ಎಫ್‌ಡಿಪಿಯಿಂದ ಕಸಿದುಕೊಂಡಿರಬೇಕು. ಗ್ರೀಸ್ ಮುಂತಾದ ದೇಶಗಳ ಬೇಲೌಟ್ ಮತ್ತು ಯುರೋ ಭದ್ರತೆಗೆ ಜರ್ಮನಿ ಖರ್ಚು ಮಾಡಬಾರದು ಎಂಬ ಅಭಿಪ್ರಾಯದ ಎಫ್‌ಡಿಪಿ ಬೆಂಬಲಿಗರ ದೊಡ್ಡ ವಿಭಾಗ ಅದು ಅಂತಹ ನೀತಿಗೆ ಮರ್ಕೆಲ್ ಮೇಲೆ ಸಾಕಷ್ಟು ಒತ್ತಡ ಹಾಕಲಿಲ್ಲ ಎಂದು ಕೋಪಗೊಂಡಿದೆ - ಎಂಬುದು ವಿಶ್ಲೇಷಕರ ಅಭಿಪ್ರಾಯ.

ಎರಡನೇ ಸ್ಥಾನದಲ್ಲಿದ್ದ ಎಸ್‌ಡಿಪಿ ಈ ಬಾರಿ ಶೇ.25.7 ಮತಗಳಿಸಿ 192 ಸೀಟು ಗಳಿಸಿತು. ಕಳೆದ ಚುನಾವಣೆಗಳಿಗಿಂತ ಶೇ. 2.7 ಹೆಚ್ಚಿನ ಮತ ಗಳಿಸಿದೆ. ಮೂರನೇ ಸ್ಥಾನದಲ್ಲಿದ್ದ ಎಡ ಪಕ್ಷ (ಅದರ ಹೆಸರೇ ಹಾಗೆ) ಶೇ.8.6 ಮತಗಳಿಸಿ 64 ಸೀಟು ಗಳಿಸಿದೆ. ಕಳೆದ ಚುನಾವಣೆಗಳಿಗಿಂತ ಶೇ. 3.3ರಷ್ಟು ಮತ ಕಳೆದು ಕೊಂಡಿದೆ. (ಒಟ್ಟು 16ರಲ್ಲಿ) ಐದು ಪ್ರಾಂತ್ಯಗಳಲ್ಲಿ ಎಡ ಪಕ್ಷ ಶೇ.20ಕ್ಕಿಂತ ಹೆಚ್ಚಿನ ಮತ ಗಳಿಸಿದೆ. ನಾಲ್ಕನೇ ಸ್ಥಾನದಲ್ಲಿದ್ದ ಗ್ರೀನ್ ಪಾರ್ಟಿ ಶೇ.8.4 ಮತಗಳಿಸಿ 63 ಸೀಟು ಗಳಿಸಿದೆ. ಕಳೆದ ಚುನಾವಣೆಗಳಿಗಿಂತ ಶೇ. 2.3ರಷ್ಟು ಮತ ಕಳೆದು ಕೊಂಡಿದೆ. ಈಗಾಗಲೇ ಹೇಳಿದ ಹಾಗೆ ಎಸ್‌ಡಿಪಿ, ಗ್ರೀನ್ ಪಾರ್ಟಿ, ಎಡ ಪಕ್ಷಗಳಿಗೆ ಒಟ್ಟು ಸೇರಿ ನಿಚ್ಚಳ ಬಹುಮತ ಇದೆ. ಆದರೆ 'ಎಡ ಪಕ್ಷ', ನಡು-ಬಲಪಂಥೀಯ ಪಕ್ಷಗಳಿಗೆ ಮಾತ್ರವಲ್ಲ, ನಡು-ಎಡಪಂಥೀಯ ಪಕ್ಷಗಳಿಗೂ ಅಸ್ಪೃಶ್ಯ.


ಜರ್ಮನಿಯ ಚುನಾವಣೆಗಳಲ್ಲಿ ಆಂತರಿಕ ನಿರುದ್ಯೋಗ, ಮಿತವ್ಯಯ, ಸಾಮಾಜಿಕ ಸೇವೆಗಳ ಕಡಿತದಷ್ಟೇ ಯುರೋ ಪ್ರದೇಶದ ಬಿಕ್ಕಟ್ಟಿಗೆ ಪರಿಹಾರ ಕ್ರಮಗಳೇನು ಎಂಬುದು ಚರ್ಚೆಯ ವಿಷಯವಾಗಿತ್ತು. 2008ರ ತೀವ್ರ ಬಿಕ್ಕಟ್ಟಿನ ನಂತರ ಜರ್ಮನಿಯಲ್ಲಿ ಸ್ವಲ್ಪ ಮಟ್ಟಿಗೆ ಆರ್ಥಿಕ ಚೇತರಿಕೆ ಆಗಿದೆ. ಆದರೆ ಯುರೋ ಪ್ರದೇಶದ ಬಿಕ್ಕಟ್ಟಿನ ಪರಿಹಾರಕ್ಕೆ (ಅಥವಾ ಬೇಲೌಟಿಗೆ) ಈ ಪ್ರದೇಶದ ಅತಿ ದೊಡ್ಡ ಆರ್ಥಿಕವಾಗಿ ಜರ್ಮನಿ ಬೆಲೆ ತೆರಬೇಕಾಗುತ್ತದೆ. ಇದರಿಂದ ನಿರುದ್ಯೋಗ, ಮಿತವ್ಯಯ, ಸಾಮಾಜಿಕ ಸೇವೆಗಳ ಕಡಿತ ಹೆಚ್ಚುತ್ತದೆ ಎಂಬುದು



ಜನತೆಯ ದೊಡ್ಡ ವಿಭಾಗಗಳ ಆತಂಕ. ಇದು ಅವರಿಗೆ ಪಥ್ಯವಾಗಿಲ್ಲ. ಯುರೋ ಪ್ರದೇಶದ ಆರ್ಥಿಕ ಸಮಗ್ರೀಕರಣದ ಅತಿ ದೊಡ್ಡ ಫಲಾನುಭವಿಗಳು ಜರ್ಮನರೇ (ಅಥವಾ ಕನಿಷ್ಟ ಅಲ್ಲಿನ ದೈತ್ಯ ಕಂಪನಿಗಳು). ಇದು ಯುರೋಪಿನ ಈಗಿನ ಗುತ್ತೇದಾರಿ ಬಂಡವಾಳಶಾಹಿ ವ್ಯವಸ್ಥೆಯ ಅನಿವಾರ್ಯ ಭಾಗ. ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ಸಮಾಜವಾದಿ ಯುರೋಪಿನತ್ತ ನಡೆಯುವುದೇ ಇದಕ್ಕೆ ಪರಿಹಾರ ಎಂಬ ಎಡಪಕ್ಷಗಳ ಪ್ರಚಾರ ಇನ್ನೂ ಜರ್ಮನ್ ಜನವಿಭಾಗಗಳ ವ್ಯಾಪಕ ವಿಭಾಗಗಳಿಗೆ ಪಥ್ಯವಾಗಿಲ್ಲ. ಜರ್ಮನ್ ಕಾರ್ಮಿಕ ಮತ್ತಿತ್ತ ಇತರ ದುಡಿಯುವ ವರ್ಗಗಳು ಸಹ ತಮ್ಮ ಸವಲತ್ತುಗಳ ಕಾಪಾಡುವ ರಕ್ಷಣಾತ್ಮಕ ಹೋರಾಟದ ಪ್ರಜ್ಞೆಯ ಮಟ್ಟದಲ್ಲಿದ್ದಾರೆ. ಇದಕ್ಕೆ ವ್ಯವಸ್ಥೆ ಬದಲಾವಣೆ ಅಗತ್ಯ ಎಂಬುದು ಅವರಿಗೂ ಇನ್ನೂ ಮನದಟ್ಟಾಗಿಲ್ಲ.

ಸಿಡಿಯು/ಸಿಎಸ್‌ಯು 2005-2009 ಅವಧಿಯಂತೆ ಎಸ್‌ಡಿಪಿ ಜತೆ 'ಮಹಾ ಮೈತ್ರಿ' ಮಾಡಿಕೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿದೆ. ಈ ಅವಧಿಯ ಮೈತ್ರಿಯ ನಂತರ ಎಸ್‌ಡಿಪಿ ಜನಪ್ರಿಯತೆಯಲ್ಲಿ ಹಿನ್ನಡೆ ಕಂಡದ್ದರಿಂದ ಅವರಿಗೂ 'ಮಹಾ ಮೈತ್ರಿ'ಗೆ ಸೇರಲು ತೀವ್ರ ಹಿಂಜರಿಕೆ ಇದೆ. ಆದರೆ ಕೊನೆಗೂ ಕೆಲವು ಸಾಮಾಜಿಕ ಸೇವೆಗಳ ಕಡಿತ ಕಡಿಮೆ ಮಾಡುವ ಶರತ್ತುಗಳನ್ನು ಹಾಕಿ ಅದು 'ಮಹಾ ಮೈತ್ರಿ' ಮಾಡಿಕೊಳ್ಳಬಹುದು.

ಮಲಾಲಾಗೆ ಮಾನವ ಹಕ್ಕು ಪ್ರಶಸ್ತಿ



ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಹೋರಾಡುತ್ತಿರುವ ಪಾಕಿಸ್ತಾನದ 16 ವರ್ಷದ ಮಲಾಲಾಗೆ ಯುರೋಪ್‌ನ ಪ್ರತಿಷ್ಠಿತ ಸಖರೊವ್ ಮಾನವ ಹಕ್ಕುಗಳ ಪ್ರಶಸ್ತಿ ಲಭಿಸಿದೆ.

ಮ್ಯಾನ್ಮಾರ್‌ನ ಪ್ರಜಾಪ್ರಭುತ್ವ ಮರುಸ್ಥಾಪನೆಗಾಗಿ ದೀರ್ಘ ಕಾಲ ಹೋರಾಟ ನಡೆಸಿ, ಸೆರೆಮನೆ ವಾಸ ಅನುಭವಿಸಿದ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ಆಂಗ್ ಸ್ಯಾನ್ ಸೂಕಿ ಅವರಿಗೂ ಇದೇ ಸಂದರ್ಭದಲ್ಲಿ ಸಖರೊವ್ ಮಾನವ ಹಕ್ಕುಗಳ ಪ್ರಶಸ್ತಿ ಪ್ರದಾನ ಮಾಡಲಾಯಿತು. 1990ರಲ್ಲಿಯೇ ಘೋಷಣೆಯಾಗಿದ್ದ ಈ ಪ್ರಶಸ್ತಿಯನ್ನು ಸೂಕಿ 23 ವರ್ಷಗಳ ನಂತರ ಸ್ವೀಕರಿಸಿದರು.

ನೊಬೆಲ್ ಶಾಂತಿ ಪ್ರಶಸ್ತಿಗೆ ತಮ್ಮ ಹೆಸರು ನಾಮನಿರ್ದೇಶನಗೊಂಡಿರುವುದಕ್ಕೆ ಹೆಮ್ಮೆ ವ್ಯಕ್ತಪಡಿಸಿರುವ ಮಲಾಲಾ, ಭಾರತ, ಪಾಕಿಸ್ತಾನ, ಅಮೆರಿಕ, ಬ್ರಿಟನ್ ಸೇರಿದಂತೆ ಬೆಂಬಲ ವ್ಯಕ್ತಪಡಿಸಿದ ಇತರ ರಾಷ್ಟ್ರಗಳನ್ನು ಶ್ಲಾಘಿಸಿದರು.

ಪಾಕಿಸ್ತಾನದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೋರಾಡುತ್ತಿದ್ದ ಮಲಾಲಾ ತಾಲಿಬಾನ್ ಭಯೋತ್ಪಾದಕರ ದಾಳಿಗೆ ಒಳಗಾಗಿ ಬದುಕಿ ಉಳಿದಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ದಲು ಶೌಚಾಲಯ.....

ಠ 7 ರಿಂದ

ಅಭದ್ರ ಪರಿಸ್ಥಿತಿ ಇರುವ ಕೃಷಿಯೇತರ ಗಳನ್ನು ಮಾಡುತ್ತಿದ್ದಾರೆ. ಇಂತಹ ಯೇತರ ಕೆಲಸ ಮಾಡುತ್ತಿರುವವರಲ್ಲಿ ದಷ್ಟು ಕಟ್ಟಡ ಕೆಲಸ, ವ್ಯಾಪಾರದಂತಹ ಲ ಕೆಲಸಗಳಲ್ಲಿ ತೊಡಗಿದ್ದಾರೆ. ದನೆಯ ಚಟುವಟಿಕೆಗಳಲ್ಲಿ ಉದ್ಯೋಗ ವರಲ್ಲಿಯೂ ಹೆಚ್ಚಿನವರು ಕ್ಯಾಶುವಲ್ ಕಾರರು, ಆರ್ಥಿಕ ಭದ್ರತೆಯಿಲ್ಲದವರು. ಳೆದ ದಶಕದಲ್ಲಿ ಕೃಷಿಯಲ್ಲಿ ಸಾರ್ವಜನಿಕ ಕೆ ಕೃಷಿ ಜಿಡಿಪಿಯ 3ಶೇ.ದಲ್ಲಿಯೇ ಗೊಂಡಿದೆ ಎಂದೂ ಆ ವರದಿ ತ್ತದೆ. ಪರಿಣಾಮವೆಂದರೆ ಕೃಷಿಯಲ್ಲಿ , ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳು ಪ್ರತಿಫಲನ. 1995ರಲ್ಲಿ 10,700ಕ್ಕಿಂತ ರೈತರು ಆತ್ಮಹತ್ಯೆ ಮಾಡಿಕೊಂಡರೆ, ರ ವೇಲೆಗೆ ಅದು 17,000 ದಾಟಿದೆ. ಆತ್ಮಹತ್ಯೆಗಳಿಗೆ ಸಾಲಬಾಧೆ ಮತ್ತು ಬೆಳೆ ತೆ ಕಾರಣ ಎನ್ನಲಾಗಿದೆ.

ವಿಧ ಸ್ಕೀಮುಗಳಲ್ಲಿನ ಪ್ರಯೋಜನಗಳನ್ನು ನೇರವಾಗಿ ವರ್ಗಾಯಿಸಿಲಾಗುತ್ತಿದೆ ಅಬ್ಬರಗಳೇನಿದ್ದರೂ, 2011ರಲ್ಲಿ ವುದೇ ಬ್ಯಾಂಕ್ ಸೇವೆಯ ಸೌಲಭ್ಯ ದಿದ್ದದವರ ಪ್ರಮಾಣ ಕೇವಲ 54ಶೇ. ಈ ವರದಿ ತೋರಿಸುತ್ತದೆ. ವಾಣಿಜ್ಯ ಕುಗಳು ರೈತರಿಗೆ ನೀಡಿದ ಸಾಲಗಳ ಣವನ್ನು ನೋಡಿದರೆ ಅಂಚಿನಲ್ಲಿರುವ ಗೆ ಸಿಕ್ಕಿದ್ದು ಅತೀ ಕಡಿಮೆ, 42,600 ಟಿರೂ. ಅವರಿಗಿಂತ ಬಹಳ ಕಡಿಮೆ ಯಲ್ಲಿರುವ ಮಧ್ಯಮ ಮತ್ತು ದೊಡ್ಡ ಗೆ ನೀಡಿದ್ದು ಅದಕ್ಕಿಂತ ಹೆಚ್ಚು, 73,000 ಟಿ ರೂ.ಗಳಿಗಿಂತಲೂ ಹೆಚ್ಚು. ಬಡವರ ಇರುವ ಕಾಳಜಿಯ ದ್ಯೋತಕ ಇದು!

ಪೌಷ್ಟಿಕತೆಯ ಶಾಪ ಈಗಲೂ ಗ್ರಾಮೀಣ ತವನ್ನು ಪೀಡಿಸುತ್ತಲೇ ಇದೆ. ಆಹಾರ ನೆಯ ಪ್ರಮಾಣ 2153 ಕ್ಯಾಲರಿಗಳಿಂದ ಯುತ್ತ ಹೋಗಿ 2009-10ರಲ್ಲಿ 2020 ರಿಗೆ ಬಂದಿದೆ. ಇದು ಜನಗಳಿಗೆ ರುವ ಸಂಕಟದ ಸೂಚನೆ. ಏಕೆಂದರೆ ಬೇಕೆಂದೇ ಆಹಾರ ಸೇವನೆಯನ್ನು ಕಡಿಮೆ ಮಾಡಲಿಕ್ಕಿಲ್ಲ ತಾನೇ?

ಆರೋಗ್ಯದ ವಿಷಯದಲ್ಲೂ ಗ್ರಾಮೀಣ ಭಾರತದ ಪಾಲಿಗೆ ಬಂದದ್ದು ಕಡಿಮೆಯೇ. 28ಶೇ.ಕ್ಕಿಂತ ಹೆಚ್ಚು ಮಂದಿಗೆ ರೋಗಶುಶ್ರೂಷೆ ಲಭ್ಯವಾಗಿಲ್ಲ. ಏಕೆಂದರೆ ಅದನ್ನು ಪಡೆಯುವ ಹಣಕಾಸಿನ ಶಕ್ತಿ ಅವರ ಬಳಿಯಿಲ್ಲ. ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಜನರಲ್ಲಿ ಈ ಪ್ರಮಾಣ ಇನ್ನೂ ಹೆಚ್ಚು, 32ಶೇ.ದಷ್ಟು. ಬೇರೆ ಜನವಿಭಾಗಗಳಿಗೆ ಹೋಲಿಸಿದರೆ ಸರಕಾರೀ ಆರೋಗ್ಯ ಸೌಕರ್ಯಗಳನ್ನು ಬಳಸುವವರ ಪ್ರಮಾಣ ಈ ಎರಡು ವಿಭಾಗಗಳಲ್ಲಿ ಹೆಚ್ಚು. ಆದ್ದರಿಂದ ಸಾರ್ವಜನಿಕ ಆರೋಗ್ಯ ಮೂಲರಚನೆಯ ಕೊರತೆ ಮತ್ತು ದೊಡ್ಡ ಪ್ರಮಾಣದ ಖಾಸಗೀಕರಣ ಅತಿ ಹೆಚ್ಚಾಗಿ ತಟ್ಟುವುದು ಈ ವಿಭಾಗಗಳನ್ನೇ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಶನ್ (ಎನ್‌ಆರ್‌ಹೆಚ್‌ಎಂ) ಎಂಬುದು ಇದ್ದರೂ ಗ್ರಾಮೀಣ ಆರೋಗ್ಯಪಾಲನೆಯಲ್ಲಿ ಅರೆ ವೈದ್ಯಕೀಯ ಸಿಬ್ಬಂದಿಯಿಂದ ಹಿಡಿದು ವೈದ್ಯರುಗಳು, ವಿಶೇಷಜ್ಞರುಗಳ ವರೆಗೆ ತರಬೇತಿ ಪಡೆದ ಸಿಬ್ಬಂದಿಯ ಕೊರತೆ ಪ್ರತಿ ಹಂತದಲ್ಲೂ ಬಾಧಿಸುತ್ತಿದೆ, ಮೂಲರಚನೆಗಳಲ್ಲೂ ಹೆಚ್ಚಿನ ಹೂಡಿಕೆಯ ಅಗತ್ಯವಿದೆ.

ಗ್ರಾಮೀಣ ಶಾಲೆಗಳಲ್ಲಿ ದಾಖಲಾತಿ ಬಹಳ ಹೆಚ್ಚಾಗಿ ಕಂಡು ಬಂದರೂ, ಈ ವರದಿಯ ಪ್ರಕಾರ ವಿವಿಧ ವಯೋಗುಂಪುಗಳಲ್ಲಿ ಶಾಲೆಗ ಹೋಗುವವರ ಪ್ರಮಾಣ 2009-10ರಲ್ಲಿ ಪ್ರಾಥಮಿಕ ಹಂತದಲ್ಲಿ 78ಶೇ. ಇದ್ದದ್ದು ಮಾಧ್ಯಮಿಕ ಹಂತಕ್ಕೆ ಬಂದಾಗ 29ಶೇ.ಕ್ಕೆ ಇಳಿದಿದೆ. ಕಲಿಕೆಯ ಮಟ್ಟವೂ ಬಹಳ ಕೆಳಗಿದೆ. ಐದನೇ ತರಗತಿಯ ವಿದ್ಯಾರ್ಥಿಗಳಲ್ಲಿ ಅರ್ಧಕ್ಕಿಂತಲೂ ಕಡಿಮೆ ಮಕ್ಕಳಿಗೆ ಮಾತ್ರವೇ ಅಕ್ಷರ ಜ್ಞಾನ ಇದ್ದು ತರಗತಿ 1 ಮತ್ತು 2 ರ ಪುಸ್ತಕಗಳನ್ನು ಓದಬಲ್ಲವರಾಗಿದ್ದಾರೆ. ಎಂಟನೇ ತರಗತಿಯಲ್ಲಿ ಅಂಕೆಗಳನ್ನು ಗುರುತಿಸಬಲ್ಲವರು, ಕೂಡಿಸುವ, ಕಳೆಯುವ ಲೆಕ್ಕ ಮಾಡಬಲ್ಲವರ ಪ್ರಮಾಣ ಅರ್ಧಕ್ಕಿಂತಲೂ ಕಡಿಮೆ ಎನ್ನುತ್ತದೆ ವರದಿ.

ಮಾರಣಾಂತಿಕ ಮಿಶ್ರಣ

ಇದೀಗ ಅಧಿಕೃತ ವರದಿಗಳೇ ದೃಢಪಡಿಸಿರುವ ಎರಡು ಭಾರತಗಳ ವಾಸ್ತವತೆ. ಭಾರತ ಕಾರ್ಪೊರೇಟ್ ವಲಯ ಆಕ್ರಾಮಕವಾಗಿ ಮುಂದುವರೆಸ ಬಯಸುವುದು ಇಂತಹ ಒಂದು ದಿಕ್ಪಥವನ್ನೇ, ಬಿಜೆಪಿಯ ಪ್ರಧಾನಿ ಪಟ್ಟದ ಆಕಾಂಕ್ಷಿ ಇದನ್ನು ಮಾಡಬಲ್ಲರು ಎಂಬ ನಿರೀಕ್ಷೆ ಅವರದ್ದು.

ಹೀಗೆ ಒಂದೆಡೆ ಕೋಮು ಧ್ರುವೀಕರಣವನ್ನು ತೀವ್ರಗೊಳಿಸುವುದು(ಈ ಅಂಕಣದಲ್ಲಿ ಹಿಂದಿನ ವಾರಗಳಲ್ಲಿ ಇದನ್ನು ಗಮನಿಸಿದ್ದೇವೆ), ಮತ್ತೊಂದೆಡೆಯಲ್ಲಿ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಅಜೆಂಡಾದ ರಭಸದ ಅನುಸರಣೆ ಇವೆರಡರ ಇಂತಹ ಮರಣಾಂತಿಕ ಮಿಶ್ರಣ ಖಂಡಿತವಾಗಿಯೂ ಭಾರತದ ಜನತೆಯ ಬದುಕಿಗೆ, ದೇಶದ ಐಕ್ಯತೆಗೆ ಮತ್ತು ಸಮಗ್ರತೆಗೆ ಅತ್ಯಂತ ವಿನಾಶಕಾರಿ. ಇದು ನಮ್ಮ ಆಧುನಿಕ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನೇ ಕಳಚಿ ಹಾಕುತ್ತದೆ. ನಮ್ಮ ಜನತೆಗೆ ಒಂದು ಉತ್ತಮ ಭಾರತದ ನಿರ್ಮಾಣಕ್ಕಾಗಿ, ನಮ್ಮ ದೇಶಕ್ಕಾಗಿ ನಡೆಸಿರುವ ಹೋರಾಟಗಳನ್ನು ಮುಂದೊಯ್ಯಬೇಕಾದರೆ ಇಂತಹ ವಿನಾಶವನ್ನು ತಡೆಯಲೇ ಬೇಕಾಗಿದೆ.



ಮೋದಿ ಪ್ರಸಾಧನಗಳು

ದ ಬಣ್ಣ ಹಾಕಿಕೊಂಡು ಪ್ರಚಾರ ಸಾಧ್ಯವೇ?

ಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿಯವರ ವ್ಯಂಗ್ಯ

ಹೊಸಪೇಟೆ

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ತರ ಪಾತ್ರ ವಹಿಸಿದ ಕ್ರಾಂತಿಕಾರಿ





ಭಗತ್‌ಸಿಂಗ್‌ರನ್ನು ಯುವಜನರು ಮಾದರಿಯಾಗಿ ಸ್ವೀಕರಿಸಬೇಕು ಎಂದು ಡಿವೈಎಫ್‌ಐನ ಜಿಲ್ಲಾಧ್ಯಕ್ಷ ಬಿಸಾಟಿ ಮಹೇಶ್ ಹೇಳಿದರು.

ಸ್ಥಳೀಯ ವಿಜಯನಗರ ಕಾಲೇಜ್‌ನ ಎಸ್‌ಎಫ್‌ಐ ಘಟಕವು ಕಾಲೇಜ್‌ನಲ್ಲಿ ಆಯೋಜಿಸಿದ್ದ ಭಗತ್‌ಸಿಂಗ್ ಜನ್ಮದಿನಾಚರಣೆಗೆ ಚಾಲನೆ ನೀಡಿ ಶನಿವಾರ ಮಾತನಾಡಿದರು.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಗತ್‌ಸಿಂಗ್‌ರ ಕೊಡುಗೆ ಚಿರಸ್ಮರಣೀಯವಾಗಿದೆ.ಆಸೆಗಳನ್ನೆಲ್ಲಬದಿಗಿಟ್ಟು ತನ್ನ ಪ್ರಾಣ ಹೋಗುವವರೆಗೆ ಹೋರಾಡಿದ ಮಹಾನ್ ಕ್ರಾಂತಿಕಾರಿ. ಭಗತ್‌ಸಿಂಗ್‌ರ ಆದರ್ಶ-ಗುಣಗಳನ್ನು ಇಂದಿನ ಯುವಕರು ಪಾಲನೆ ಮಾಡಬೇಕಾಗಿದೆ ಎಂದರು.

ಎಸ್‌ಎಫ್‌ಐನ ತಾಲೂಕು ಕಾರ್ಯದರ್ಶಿ ವೈ.ಪಂಪಾನಂದ ಮಾತನಾಡಿ, ಭಗತ್‌ಸಿಂಗ್‌ರ ಆದರ್ಶ ಮತ್ತು ಅವರ ಜೀವನ ಚರಿತ್ರೆಯನ್ನು ನಮ್ಮನ್ನಾಳಿದ ಸರಕಾರಗಳೆಲ್ಲವು ಕೂಡ ತಿರುಚಿ ಬರೆಯುವ ಪ್ರಯತ್ನ ಮಾಡಿವೆ. ಇಂದು ಕೆಲವು ಪಠ್ಯಪುಸ್ತಕಗಳಲ್ಲಿ ಭಗತ್‌ಸಿಂಗ್, ರಾಜ್‌ಗುರು, ಸುಖದೇವ್, ಬುಟುಕೇಶ್ವರದತ್ತರವರನ್ನು ಉಗ್ರಗ್ರಾಮಿಗಳು ಮತ್ತು ದೇಶದ್ರೋಹಿಗಳು ಎಂದು ಬಿಂಬಿಸುತ್ತಿರುವುದು ಈ ದೇಶದ ದುರಂತವಾಗಿದೆ. ಇಂದಿನ ವಿದ್ಯಾರ್ಥಿ-ಯುವಜನತೆಗೆ ಭಗತ್‌ಸಿಂಗ್‌ನಂತಹ ಕ್ರಾಂತಿಕಾರಿಗಳು ಆದರ್ಶವಾಗುತ್ತಿಲ್ಲ. ಸಿನಿಮಾ ತಾರೆಗಳು ಇಂದು ಆದರ್ಶವಾಗುತ್ತಿದ್ದಾರೆ ಎಂದು ವಿಷಾದಿಸಿದರು.

ತಾಲೂಕಾಧ್ಯಕ್ಷ ಟಿ.ಶರತ್‌ಕುಮಾರ್ ಅಧ್ಯಕ್ಷತೆವಹಿಸಿದ್ದರು. ಪದಾಧಿಕಾರಿಗಳಾದ ವಸಂತ್ ಕಲಾಲ್, ಖಾದರ್‌ಬಾಷಾ, ನಾಗರಾಜ್, ವಿಜಯಲಕ್ಷ್ಮೀ, ತಾಯಶ್ರೀ, ಶ್ವೇತಾ ಇತರರಿದ್ದರು.

ತೀರದ ಖಾಸಗೀಕರಣ ದಾಹ .....

ಪುಟ 13 ರಿಂದ

ಅವನ್ನು ಅಭಿವೃದ್ಧಿ ಪಡಿಸಿದ ನಂತರ. ಕೊಲ್ಕತಾ ಮತ್ತು ಚೆನ್ನೈ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣಗಳೂ ಸೇರಿದಂತೆ ಒಟ್ಟು 20 ವಿಮಾನ ನಿಲ್ದಾಣಗಳನ್ನು ಅದರ ಕುಖ್ಯಾತ 'ಪಿಪಿಪಿ' ದಾರಿಯಲ್ಲಿ ಖಾಸಗಿಯವರಿಗೆ ಒಪ್ಪಿಸಲು ನಿರ್ಧರಿಸಿದೆ. ಇವನ್ನೆಲ್ಲ ಇತ್ತೀಚೆಗಷ್ಟೇ ಸಾರ್ವಜನಿಕ ವಲಯದ 'ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ' ((ಎಎಐ) 20,000 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಆಧುನೀಕರಿಸಿದೆ ಮತ್ತು ವಿಸ್ತರಿಸಿದೆ. ಕೊಲ್ಕತಾ ಮತ್ತು ಚೆನ್ನೈ ವಿಮಾನ ನಿಲ್ದಾಣಗಳನ್ನು ಇತ್ತೀಚೆಗಷ್ಟೇ ಸರಕಾರೀ ಬೊಕ್ಕಸದಿಂದ ಅನುಕ್ರಮವಾಗಿ ರೂ. 2325 ಕೋಟಿ ಮತ್ತು ರೂ. 2015 ಕೋಟಿ ಖರ್ಚುಮಾಡಿ ಆಧುನೀಕರಿಸಲಾಗಿದೆ, 'ಅಂತರ್ರಾಷ್ಟ್ರೀಯ ದರ್ಜೆಯ ಸವಲತ್ತುಗಳನ್ನು ನಿರ್ಮಿಸಲಾಗಿದೆ. ಅದರ ಲಾಭ ದೋಚಲು ಖಾಸಗಿಯವರಿಗೆ ಒಪ್ಪಿಸಲಾಗುತ್ತಿದೆ.

ಎಂದಿನಂತೆ ಬಂಡವಾಳ ದೇಶದ್ದು, ಲಾಭ ಖಾಸಗಿಯವರದ್ದು.

ಇನ್ನೊಂದು ದುಷ್ಪರಿಣಾಮವೆಂದರೆ, ಯುಪಿಎ-2 ಸರಕಾರದ ಈ ಯೋಜನೆ ಜಾರಿಗೆ ಬಂದರೆ ಎಎಐ(ವಿಮಾನ ನಿಲ್ದಾಣಗಳ ಪ್ರಾಧಿಕಾರ) ಕೂಡ ಮುಚ್ಚುವ ಸ್ಥಿತಿಗೆ ಬಂದು ಅದರ ನೌಕರರು ಕೂಡ ಬೀದಿ ಪಾಲಾಗುವ ಅಪಾಯವೂ ಇದೆ.

ಆದ್ದರಿಂದ ಈ ರೀತಿ ಇಡೀ ನಾಗರಿಕ ವಿಮಾನಯಾನ ವಲಯವನ್ನೇ ಖಾಗಿಯವರ ಲೂಟಿಗೆ ಒಪ್ಪಿಸುವ ದೇಶ-ವಿರೋಧಿ, ಜನ-ವಿರೋಧಿ ಧೋರಣೆಯನ್ನು ಬಲವಾಗಿ ವಿರೋಧಿಸಬೇಕು ಎಂದು ಸಿಐಟಿಯು ಕಾರ್ಮಿಕ ಆಂದೋಲನಕ್ಕೆ, ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಭಗತ್‌ಸಿಂಗ್ ವಿದ್ಯಾರ್ಥಿ-ಯುವ ಜನರ ಚೈತನ್ಯದ ಚಿಲುಮೆ: ಡಾ॥ ಐ.ಎ.ಲೋ...



ಹಾವೇರಿ: ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿ ಕಿಡಿಯಾಗಿ ಹೊರಹೊಮ್ಮಿದ ಭಗತ್‌ಸಿಂಗ್ ಹಾಗೂ ಅವರ ಸಂಗಾತಿಗಳ ದೇಶಪ್ರೇಮ, ತ್ಯಾಗ ದೇಶದ ಸ್ವಾತಂತ್ರ್ಯ ಚಳುವಳಿಗೆ ಮಹತ್ತರವಾದ ಕೊಡುಗೆಯಾಗಿದೆ. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವುದೇ ನನ್ನ ಜೀವನದ ಗುರಿ, ಎಂದು ಪಣ ತೊಟ್ಟು ಆ ನಿಟ್ಟಿನಲ್ಲಿ ಹೋರಾಡಿ ಹುತಾತ್ಮರಾದ ಭಗತ್‌ಸಿಂಗ್ ರವರು ಇಂದಿನ ವಿದ್ಯಾರ್ಥಿ ಯುವಜನರಿಗೆ ಆದರ್ಶವಾಗಿದ್ದಾರೆ ಅಲ್ಲದೇ ಚೈತನ್ಯದ ಚಿಲುಮೆಯಾಗಿದ್ದಾರೆಂದು ಪ್ರಗತಿಪರ ಲೇಖಕರು ಹಾಗೂ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳಾದ ಡಾ॥ ಐ.ಎ.ಲೋಕಾಪೂರ ಹೇಳಿದರು.

ನಗರದ ಕೀರ್ತಿ ಐಟಿಐ ಕಾಲೇಜಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಜಿಲ್ಲಾ ಸಮಿತಿಯು ಆಯೋಜಿಸಿದ್ದ "ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಸೆಲೆ, ವಿದ್ಯಾರ್ಥಿ-ಯುವಜನರ ಕಣ್ಮಣಿ, ಕ್ರಾಂತಿಯ ಕಿಡಿ ಭಗತ್‌ಸಿಂಗ್ ರವರ ಜನ್ಮದಿನಾಚರಣೆ"ಯನ್ನು ಉದ್ಘಾಟಿಸಿ ಮಾತನಾಡಿದರು.

ಭಗತ್‌ಸಿಂಗ್ ಕ್ರಾಂತಿಕಾರಿಯಾಗಿದ್ದು ಸ್ವಾತಂತ್ರ್ಯದ ಹೋರಾಟದ ಜೊತೆಗೆ ಸಮಾಜವಾದಿ ದೃಷ್ಟಿಕೋನವನ್ನಿಟ್ಟುಕೊಂಡಿದ್ದರು. ಅದರ ಭಾಗವಾಗಿಯೇ ಮೊದಲಿಗಿದ್ದ ಹಿಂದೂಸ್ತಾನ್ ರಿಪಬ್ಲಿಕನ್ ಅಸೋಶಿಯೇಶನ್ ಅನ್ನುವ ಸಂಘಟನೆಯ ಹೆಸರನ್ನು "ಹಿಂದೂಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕನ್ ಅಸೋಶಿಯೇಶನ್" ಎಂದು ಬದಲಾಯಿಸಿ ಯುವಜನ, ರೈತ-ಕಾರ್ಮಿಕರ ಮಧ್ಯೆ ಸ್ವಾತಂತ್ರದ ಹೋರಾಟದ ಕಾವನ್ನು ಹರಡಿದರು ಎಂದು ಅಭಿಪ್ರಾಯ ಪಟ್ಟರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೀರ್ತಿ ಐಟಿಐ ಕಾಲೇಜಿನ ಕಾರ್ಯದರ್ಶಿಗಳಾದ ಜಯದೇವ ಕೆ-ರೂಡಿ ಮಾತನಾಡಿ, ಭಗತ್‌ಸಿಂಗ್‌ರವರ ವ್ಯಕ್ತಿತ್ವವನ್ನು ಯಾವುದೇ ವ್ಯಕ್ತಿಗೆ ಹೋಲಿಕೆ ಮಾಡಲಾಗುವುದಿಲ್ಲ. ಭಗತ್‌ಸಿಂಗ್ ಅವರಿಗೆ ಭಗತ್‌ಸಿಂಗ್ ಸಾಟಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಎಸ್ ಎಫ್ಐ ಜಿಲ್ಲಾಧ್ಯಕ್ಷ ಬಸವರಾಜ ಪೂಜಾರ ಮಾತನಾಡಿ, ಜಲಿಯನ್ ವಾಲಿಬಾಗ್‌ನಲ್ಲಿ ನಡೆದ ಘಟನೆ ಭಗತ್‌ಸಿಂಗ್ ಅವರ ಜೀವನದಲ್ಲಿ ಮಹತ್ತರವಾದ ತಿರುವನ್ನುಂಟು ಮಾಡಿತು. ತಾಯ್ನಾಡಿನ ಪ್ರೇಮ ತುಂಬಿಕೊಂಡಿದ್ದ ಬಾಲಕ ಭಗತ್‌ಸಿಂಗ್, ಜಲಿಯನ್ ವಾಲಿಬಾಗ್‌ನಲ್ಲಿ ಬ್ರಿಟಿಷರ ಗುಂಡಿಗೆ ಬಲಿಯಾದ ಜನರ ರಕ್ತಸಿಕ್ತ ಮಣ್ಣನ್ನು ತನ್ನ ಊಟದ ಡಬ್ಬಿಯಲ್ಲಿ ತುಂಬಿಕೊಂಡು ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಜೀವನವನ್ನು ಮುಡುಪಾಗಿಡುವ ಪ್ರತಿಜ್ಞೆ ಮಾಡುತ್ತಾನೆ ಮತ್ತು ಪ್ರತಿಜ್ಞೆಗೆ ತಕ್ಕಂತೆ ಪ್ರಾಣ ಬಲಿದಾನ ಮಾಡುತ್ತಾನೆ.

ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳಾದ ರಾಜಗುರು ಮತ್ತು ಸುಖದೇವ ರವರ ಕನಸು ಇಂದಿಗೂ ಸ್ವತಂತ್ರ ಭಾರತದಲ್ಲಿ ... ಇರುವುದು ದುರಂತವಾಗಿದೆ ... ಅಸಮಾನತೆಯನ್ನು ಹೋಗಲ... ನಿಟ್ಟಿನಲ್ಲಿ ಭಗತ್‌ಸಿಂಗ್ ರವರ "ಸ... ಎಂದರೆ ಕೇವಲ ಯಜ... ಬದಲಾವಣೆ ಎಂದಾದರೆ ಈ ... ಸ್ಥಿತಿ ಹಾಗೇ ಉಳಿಯುತ್ತದೆ. ಅ... ಮೇಲೆ ರಚಿತವಾಗಿರುವ ಈ ವ್ಯವ... ಸಂಪೂರ್ಣವಾಗಿ ಬದ... ಮಾಡುವುದೇ ನೈಜ ಸ್ವಾತಂತ್ರ್ಯ" ಅವರ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ.

ಕಾರ್ಯಕ್ರಮದಲ್ಲಿ ರುದ್ರೇಶ... ರೂಡಿ ಮಾತನಾಡಿದರು. ಎಸ್.ಎ... ಮುಖಂಡರಾದ ಮಲ್ಲಿಕಾರ್ಜು... ಹಿರೇಮಠ ಸ್ವಾಗತಿಸಿದರು. ವಿನಾ... ನಿರೂಪಿಸಿ ವಂದಿಸಿದರು. ಕಾಲೇಜಿ... ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬಸವರಾಜ ...

ಭಗತ್‌ಸಿಂಗ್ ನೆನಪಲ್ಲಿ ಮಿಂದೆದ್ದ ವಿದ್ಯಾರ್ಥಿಗಳು

ಸೆಪ್ಟೆಂಬರ್ 28, 2013: ಕೋಲಾರದ ಬೀದಿಗಳಲ್ಲಿ ವಿದ್ಯಾರ್ಥಿಗಳ ಮೆರವಣಿಗೆಯೊಂದು ಹೊರಟಿತ್ತು. ಘೋಷಣೆಗಳೂ ಮೊಳಗುತ್ತಿದ್ದವು. ಆದರೆ ಅದು ಎಲ್ಲರೂ ಅಂದುಕೊಂಡಂತೆ ವಿದ್ಯಾರ್ಥಿಗಳ ಯಾವುದೇ ನಿರ್ದಿಷ್ಟ ಸಮಸ್ಯೆಯ ವಿರುದ್ಧದ ಮೆರವಣಿಗೆ, ಘೋಷಣೆ ಆಗಿರಲಿಲ್ಲ. ಇನ್ನೇನದು?

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕ್ರಾಂತಿಯ ತಿದಿಯನ್ನು ಊದಿ ಯುವಸಮುದಾಯಕ್ಕೆ ಸದಾ ಸ್ಫೂರ್ತಿ ಸ್ರೋತ ಆಗಿರುವ ಕ್ರಾಂತಿಯುಗದ ಧ್ರುವತಾರೆ ಭಗತ್‌ಸಿಂಗ್‌ರ 106ನೇ ಜನ್ಮದಿನದ ಪ್ರಯುಕ್ತ ಎಸ್.ಎಫ್.ಐ. ಈ ಅಪರೂಪದ ಕಾರ್ಯಕ್ರಮವನ್ನು ಆಯೋಜಿಸಿತ್ತು. ಜಿಲ್ಲೆಯ ಎಲ್ಲಾ ಐದು ತಾಲೂಕುಗಳಿಂದ ಬಂದಿದ್ದವರಲ್ಲಿ ವಿದ್ಯಾರ್ಥಿನಿಯರೇ ಬಹುಸಂಖ್ಯೆಯಲ್ಲಿ ಇದ್ದರೆನ್ನುವುದು ಗಮನಾರ್ಹ ಸಂಗತಿ.

ಭಗತ್‌ಸಿಂಗ್‌ರ ಬೃಹತ್



ಭಾವಚಿತ್ರದೊಂದಿಗೆ ಎಸ್‌ಎಫ್‌ಐ ಬಾವುಟಗಳನ್ನು ಹಾರಿಸುತ್ತಾ ಸ್ವಾತಂತ್ರ್ಯ ಸಂಗ್ರಾಮದ ಹಾಗೂ ಭಗತ್‌ಸಿಂಗ್ ಆಶಯದ ಘೋಷಣೆಗಳನ್ನು ಕೂಗುತ್ತಾ ನಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರು ನಗರದ ಟಿ. ಚೆನ್ನಯ್ಯ ರಂಗಮಂದಿರದಲ್ಲಿ ಸಮಾವೇಶಗೊಂಡರು. ಸಭಾಂಗಣ ತುಂಬಿತುಳುಕಿ ಅನೇಕ ಜನರು ನಿಂತುಕೊಂಡೇ ಅಥವಾ ಖಾಲಿಜಾಗದಲ್ಲಿ ನೆಲದ ಮೇಲೆ ಕುಳಿತುಕೊಂಡೇ ಕಾ... ವೀಕ್ಷಿಸಿದರು.

ಎಸ್‌ಎಫ್‌ಐ ಮಾಜಿ ... ಹಾಗೂ ಲೇಖಕ ಎಸ್. ವೈ. ಗುರು... ಸಮಾವೇಶವನ್ನು ಉದ್ಘಾ... ಸಮಾಜ ಎದುರಿಸುತಿರುವ ಸಮಸ... ಎಳೆಎಳೆಯಾಗಿ ಬಿಚ್ಚಿಟ್ಟ ... ಸಮಾಜ ಪರಿವರ್ತನೆ ಯಾವರೀ... ಆಗಬೇಕಾಗಿದೆ ಎಂಬುದನ್ನು ಭಗತ್ ... ಮಾತನ್ನೇ ಉದ್ಧರಿಸಿ ಪ್ರತಿಪಾದ... "ಕ್ರಾಂತಿಯೆಂದರೆ ಬಾಂಬು, ಬಂದು... ಆರಾಧನೆಯಲ್ಲ. ಅನ್ಯಾಯದ ... ಮೇಲೆ ರಚನೆಯಾಗಿರುವ ಇಂದಿನ ... ವ್ಯವಸ್ಥೆ ಬದಲಾಗಬೇಕು ಎಂದರ್ಥ... ಭಗತ್‌ರ ವೈಜ್ಞಾನಿಕ ವಿಶ್ಲೇಷಣ... ಯುವ ಮನಸ್ಸುಗಳ ಮುಂದೆ ... ಸ್ವಾಗತ ಸಮಿತಿಯ ಅಧ್ಯಕ್ಷರೂ... ನಗರಸಭೆ ಸದಸ್ಯ ಬಿ.ಎಂ. ಮು... ವಿದ್ಯಾರ್ಥಿ-ಯುವಜನರಿಗೆ ಸಿನಿಮಾ... ಬದಲಿಗೆ ಭಗತ್‌ಸಿಂಗ್‌ರಂಥ ಕ್ರಾ... ಹೋರಾಟಗಾರು ಆದರ್ಶ ಆ... ಎಂದರು.

ಎಸ್‌ಎಫ್‌ಐ ಕೋಲಾರ ... ಸಮಿತಿ ಅಧ್ಯಕ್ಷ ವಿ. ಅಂಬರೀಷ್ ... ವಹಿಸಿದ್ದರು. ರಾಜ್ಯ ಕಾರ್ಯದರ್ಶಿ... ಉಮೇಶ್ ಮತ್ತು ಜೆಎಂಎಸ್ ರಾ... ವಿ. ಗೀತಾ ಮಾತನಾಡಿದರು.

ಎ.ವಿ. ವೆಂಕಟರಾಮ್ ಸಂ... ದೇಶಪ್ರೇಮ ಹಾಗೂ ಕ್ರಾಂತಿ ಗೀ... ಹಾಡಿದರು. ಭಗತ್ ಸಿಂಗ್ ... ನಾಟಕವನ್ನೂ ಪ್ರಸ್ತುತಪಡಿಸಲಾಯಿತು...

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**